ತುಳು ಜನಪದ ಸಾಹಿತ್ಯ ಶಿಕ್ಷಣ

ಡಾ. ಸುಂದರ ಕೇನಾಜೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳು ಭವನ, ಉರ್ವಸ್ಟೋರ್, ಮಂಗಳೂರು – 6

ತುಳು ಜನಪದ ಸಾಹಿತ್ಯ ಶಿಕ್ಷಣ

ಡಾ. ಸುಂದರ ಕೇನಾಜೆ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ತುಳು ಭವನ, ಉರ್ವಸ್ಟೋರ್, ಮಂಗಳೂರು - 6

Tulu Janapada Sahithya Shikshana

A Research Study by Dr. Sundara Kenaje, Deepthasheela, Bettampady, Post Sullia - 574 239, D.K Cell : 9448951859

Chief Editor	:	**M. Janaki Brahmavara** President Karnataka Tulu Sahithya Academy
Publisher	:	**Chandrahasa Rai B** Registrar Karnataka Tulu Sahithya Academy
Published by	:	**Karnataka Tulu Sahithya Academy** Tulu Bhavana, Urvastore, Ashoka Nagar Post, Mangaluru - 575006 Tel: 0824-2459389 email: tulu.academy@yahoo.co.in
©	:	Karnataka Tulu Sahithya Academy
First Edition	:	2016
No. of Copies	:	300
Pages	:	88
Price	:	70 /-
Design & Printed at	:	**Pavan Graphics Industries** First Floor, N.D. Complex, Opp.Gokarnanatheshwara Temple, Alake Kudroli, Mangalore. Ph. : 9242885743
Designed by	:	Jagadish Anchan

ಅಧ್ಯಕ್ಷರ ಮಾತು

ತುಳುನಾಡು, ತುಳುನುಡಿ, ಹಾಗೆನೇ ಕೃಷಿ ಆಧಾರಿತ ಬದುಕಿನಲ್ಲಿ ತುಳುವರು ರೂಢಿಸಿಕೊಂಡ ಸಂಸ್ಕೃತಿಯ ಬಗೆಗಿನ ಅಧ್ಯಯನಕ್ಕೆ ಬಹಳಷ್ಟು ಅವಕಾಶವಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಈ ತರಹದ ಅಧ್ಯಯನಕ್ಕೆ ಮಹತ್ವ ನೀಡಿ, ತನ್ನ ಕ್ರಿಯಾಯೋಜನೆಯಲ್ಲಿ ಫೆಲೋಶಿಪ್ ಅಧ್ಯಯನ ಯೋಜನೆಯನ್ನೂ ಅಳವಡಿಸಿಕೊಂಡಿತು. ಸರಕಾರದ ಅನುದಾನವನ್ನು ಬಳಸಿಕೊಂಡು ಅರ್ಹ ವಿದ್ವಾಂಸರನ್ನು ಮುಖತ: ಸಂದರ್ಶನದ ಮೂಲಕ ಆಯ್ಕೆಮಾಡಿ, ಫೆಲೋಶಿಪ್ ನೀಡಿ, ಈ ಅಧ್ಯಯನಾತ್ಮಕ ಕೆಲಸದಲ್ಲಿ ತೊಡಗಿಸಿತು. 2012ನೇ ಇಸವಿಯಿಂದಲೇ ಆರಂಭಗೊಂಡ ಈ ಫೆಲೋಶಿಪ್ ಆಧಾರಿತ ಅಧ್ಯಯನ ಮುಂದುವರಿಯುತ್ತಾ ಬರುತಿದ್ದು, ಈಗಾಗಲೇ ಸಿದ್ಧಗೊಂಡ ಬರಹಗಳು ಇದೀಗ ಪ್ರಕಟಗೊಳ್ಳುತ್ತಿವೆ.

2012-2013ನೇ ಸಾಲಿನ ಫೆಲೋಶಿಪ್ ಪಡೆದು ಅಧ್ಯಯನಕ್ಕೆ ನಿಯುಕ್ತರಾದ ಡಾ. ಸುಂದರ ಕೇಣಾಜೆ, 'ತುಳು ಜನಪದ ಸಾಹಿತ್ಯ ಶಿಕ್ಷಣ' ಎಂಬ ವಿಷಯದಲ್ಲಿ ಡಾ. ಗಣೇಶ ಅಮೀನ್ ಸಂಕಮಾರ್‌ರವರ ಮಾರ್ಗದರ್ಶನದಲ್ಲಿ ನಡೆಸಿದ ಅಧ್ಯಯನ ವಿಚಾರಗಳನ್ನು ಕೃತಿರೂಪದಲ್ಲಿ ಅಕಾಡೆಮಿಗೆ ಸಲ್ಲಿಸಿರುತ್ತಾರೆ. ತುಳುನಾಡಿನಲ್ಲಿ, ತುಳು ಭಾಷೆಯಲ್ಲಿ ಅಪಾರವಾದ ಜನಪದ ಸಾಹಿತ್ಯವಿದೆ. ತುಳು ಸಂಸ್ಕೃತಿ ಮತ್ತು ತುಳು ಭಾಷೆಯ ಶಬ್ದಸಂಪತ್ತಿನ ಕೋಶದಂತಿರುವ ಇವು ಇತ್ತೀಚಿನ ವರ್ಷಗಳಲ್ಲಿ ದೇಶ ವಿದೇಶಗಳ ಜಾನಪದ ವಿದ್ವಾಂಸರನ್ನು ಆಕರ್ಷಿಸುತಿದ್ದು, ತುಳು ಜನಪದ ಸಾಹಿತ್ಯದಲ್ಲಿ ಬಹಳಷ್ಟು ಅಧ್ಯಯನ ನಡೆಯುತ್ತಿದೆ. ಕೆಲವು ಮೌಲಿಕ ಕೃತಿಗಳೂ ಪ್ರಕಟವಾಗಿವೆ. ತುಳು ಜನಪದ ಸಾಹಿತ್ಯ ಶಿಕ್ಷಣದ ಕ್ರಮವು ಆಧುನಿಕ ಶಿಕ್ಷಣ ಕ್ರಮದಲ್ಲೂ ಅಳವಡಲು ಅರ್ಹವಾದುದು. ಈ ವಿಚಾರದಲ್ಲಿ ಅಧ್ಯಯನ ನಡೆಸಿ, ಬರೆಯಲಾದ 'ತುಳು ಜನಪದ ಸಾಹಿತ್ಯ ಶಿಕ್ಷಣ' ಕೃತಿಯನ್ನು ಅಕಾಡೆಮಿಯು ಪ್ರಕಟಿಸುತ್ತಿದೆ. ಈ ಸಂದರ್ಭದಲ್ಲಿ ಡಾ.ಸುಂದರ ಕೇಣಾಜೆಯವರನ್ನು ಅಭಿನಂದಿಸುತ್ತಾ, ಮಾರ್ಗದರ್ಶನ ಮಾಡಿದ ಡಾ. ಗಣೇಶ ಅಮೀನ್ ಸಂಕಮಾರ್‌ರವರಿಗೆ ಶುಭವನ್ನು ಹಾರೈಸುತ್ತಿದೆ. ಮತ್ತು ಮುದ್ರಣದಲ್ಲಿ ಸಹಕರಿಸಿದ 'ಪವನ್ ಗ್ರಾಫಿಕ್ಸ್' ನ ಪ್ರಸನ್ನ ಮತ್ತು ಬಳಗದವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದೆ.

ಎಮ್. ಜಾನಕಿ. ಬ್ರಹ್ಮಾವರ
ಅಧ್ಯಕ್ಷರು
ಕರ್ನಾಟಕ ತುಳು ಸಾಹಿತ್ಯಅಕಾಡೆಮಿ, ಮಂಗಳೂರು.

14-10-2016

ಲೇಖಕರ ಮಾತು

ಈ ಕೃತಿ ಜನಪದ ಮತ್ತು ಶಿಕ್ಷಣ ಇವೆರಡನ್ನು ಗಮನದಲ್ಲಿರಿಸಿಕೊಂಡು ರಚನೆಗೊಂಡಿದೆ. ಈ ಕೃತಿ ರಚನೆಗೆ ಕಾರಣ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ. ಕೆಲವು ವರ್ಷಗಳ ಹಿಂದೆ ಫೆಲೋಶಿಪ್ ಯೋಜನೆಯ ಸಂಶೋಧನೆಗೆ ನನ್ನನ್ನು ಆಯ್ಕೆ ಮಾಡಿ ತುಳು ಜನಪದ ಸಾಹಿತ್ಯ ಶಿಕ್ಷಣ ಎಂಬ ವಿಷಯದಲ್ಲಿ ಅಧ್ಯಯನ ನಡೆಸಲು ಸೂಚಿಸಿತು. ತುಳುವರು ಜನಪದ ಸಾಹಿತ್ಯಗಳನ್ನು ಹೇಗೆ ಅಭ್ಯಾಸ ಮಾಡುತ್ತಾರೆ? ತಲೆಮಾರಿನಿಂದ ತಲೆಮಾರಿಗೆ ಅದನ್ನು ಯಾವ ತಂತ್ರದ ಮೂಲಕ ವರ್ಗಾಯಿಸುತ್ತಾರೆ? ಅದಕ್ಕೂ ಆಧುನಿಕ ಪರಿಭಾಷೆಯ ಶಿಕ್ಷಣಕ್ಕೂ ಇರುವ ಸಂಬಂಧವೇನು? ಇತ್ಯಾದಿ ವ್ಯಾಪ್ತಿಯನ್ನೊಳಗೊಂಡ ಚರ್ಚೆ ಇಲ್ಲಿಯದು. ಸಂಶೋಧನಾ ಸ್ವರೂಪ ಮತ್ತು ಚೌಕಟ್ಟನ್ನು ಇಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ. ಆದರೆ ಕೆಲವು ಮಿತಿಗಳ ಮಧ್ಯೆ ಈ ವ್ಯಾಪ್ತಿಯನ್ನು ಅತ್ಯಂತ ಸಮರ್ಪಕವಾಗಿ ತಲುಪಲು ಸಾಧ್ಯವಾಗಿದೆ ಎಂದು ನನಗನಿಸುವುದಿಲ್ಲ, ವಾಸ್ತವಿಕವಾಗಿ ತುಳು ಜನಪದ ಶಿಕ್ಷಣ ಒಂದು ಪಿಎಚ್.ಡಿ ಸಂಶೋಧನೆಯನ್ನೂ ಮೀರಿ ವಿಸ್ತೃತವಾದುದು. ಈ ಕೆಲಸಕ್ಕೆ ತೊಡಗಿಕೊಂಡಾಗ ಅದರ ಸ್ಪಷ್ಟ ಅರಿವು ನನಗಾಯಿತು. ಇಲ್ಲಿ ಜನಪದ ಮತ್ತು ಶಿಕ್ಷಣ ಇವೆರಡರ ಸೈದ್ಧಾಂತಿಕ ನೆಲೆಗಟ್ಟುಗಳು ಮತ್ತು ಪರಿಸರ ಸಹಜವಾದ ಸ್ಥಿತಿಗತಿಗಳು ಇವುಗಳನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಬಹುದಾದ ಅಗತ್ಯ ಅನಿವಾರ್ಯವಾಗಿ ಇದೆ. ಆದರೆ ಅಂತಹಾ ಸಂಶೋಧನೆಗೆ ಸೀಮಿತ ಯೋಜನೆಗಳಲ್ಲಿ ಅವಕಾಶಗಳು ಕಡಿಮೆ. ಆದ್ದರಿಂದ ಜಾನಪದ ಮತ್ತು ಶಿಕ್ಷಣ ಕ್ಷೇತ್ರ ಅದೂ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡ ಅಧ್ಯಯನಾಸಕ್ತರಿಗೆ ಈ ಕೃತಿ ಒಂದು ಪುಟ್ಟ ಮುನ್ನುಡಿ. ಇಲ್ಲಿ ಹೇಳಿರುವ ಪ್ರತೀ ಅಧ್ಯಾಯಗಳನ್ನೂ ಬಹಳಷ್ಟು ವಿಸ್ತಾರವಾಗಿ ನೋಡಿದ್ದೇ ಆದರೆ ಸಮಕಾಲೀನ ಶಿಕ್ಷಣ ವ್ಯವಸ್ಥೆಗೆ ಸಿದ್ಧ ಮಾದರಿಯೊಂದನ್ನು ಪರಿಚಯಿಸಬಹುದು. ಆ ಕೆಲಸ ಈ ಕೃತಿಯ ಮೂಲಕ ಮುಂದೆ ನಡೆಯಲಿ ಎನ್ನುವುದು ನನ್ನ ಕಳಕಳಿ.

ಈ ಕೃತಿಗೆ ಫೆಲೋಶಿಪ್ ನೀಡಿದ್ದು ಶ್ರೀ ಉಮಾನಾಥ ಕೋಟ್ಯಾನ್‌ರವರು ಅಧ್ಯಕ್ಷರಾಗಿದ್ದ ಪ್ರಥಮ ವರ್ಷದಲ್ಲಿ. ಅಧ್ಯಯನ

ನಡೆಸಲು ಅನುಮತಿ ದೊರೆತದ್ದು ಶ್ರೀಮತಿ ಜಾನಕಿ ಬ್ರಹ್ಮಾವರ ಇವರ ಅಧ್ಯಕ್ಷತೆಯ ಎರಡನೇ ವರ್ಷದಲ್ಲಿ. ಪ್ರಬಂಧ ಸಲ್ಲಿಕೆ ಮತ್ತು ಇದೀಗ ಕೃತಿ ಪ್ರಕಟಣೆಗೆ ಅವಕಾಶ ಸಿಗುತ್ತಿರುವುದು ಇವರದೇ ಅಧ್ಯಕ್ಷಾವಧಿಯ ಕೊನೆಯ ವರ್ಷದಲ್ಲಿ. ಹಲವು ತಾಂತ್ರಿಕ ಸಮಸ್ಯೆಗಳ ಮಧ್ಯೆಯೂ ಸಂಶೋಧನೆಗೆ ಅವಕಾಶ ಮಾಡಿಕೊಟ್ಟ ಈ ಈರ್ವರು ಅಧ್ಯಕ್ಷರುಗಳಿಗೆ ಮತ್ತು ಅವರೊಂದಗಿನ ಸರ್ವಸದಸ್ಯರ ಕೂಟಗಳಿಗೆ ಮೊದಲ ಕೃತಜ್ಞತೆಗಳು. ನನ್ನ ಹಿರಿಯ ಸ್ನೇಹಿತರು ಮತ್ತು ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಚಂದ್ರಹಾಸ ರೈ ಸ್ನೇಹತ್ವಕ್ಕೂ ಮಿಗಿಲಾದ ಬದ್ಧತೆ ಮತ್ತು ಅವರ ಆತ್ಮೀಯ ಸಲಹೆ-ಸಹಕಾರಕ್ಕೆ ವಂದನೆಗಳು. ಈ ಸಂಶೋಧನೆಗೆ ಮಾರ್ಗದರ್ಶನ ನೀಡಿದ ಜಾನಪದ ಮತ್ತು ಶಿಕ್ಷಣ ಈ ಎರಡೂ ಕ್ಷೇತ್ರದ ವಿದ್ವಾಂಸ, ಲೇಖಕ ಡಾ.ಗಣೇಶ್ ಅಮೀನ್ ಸಂಕಮಾರ ಇವರಿಗೆ ಧನ್ಯವಾದಗಳು. ಮಾಹಿತಿ, ಸಲಹೆ, ಸಹಕಾರ ನೀಡಿದ ಎಲ್ಲಾ ತಜ್ಞರು ಮತ್ತು ನನ್ನ ಇಲಾಖೆಯ ಹಿರಿಯ-ಕಿರಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ನನ್ನ ಮನೆಯವರು, ಸ್ನೇಹಿತರು ಇವರೆಲ್ಲರಿಗೂ ನಮನಗಳು. ಈ ಕೃತಿಯ ಅಕ್ಷರ ಜೋಡಿಸಿದ ವೈಕುಂಠ ಪ್ರಭು, ಮುಖಪುಟದೊಂದಿಗೆ ಆಕಾರ ಕೊಟ್ಟಿರುವ 'ಪವನ ಗ್ರಾಫಿಕ್ಸ್' ನ ಶ್ರೀ ಪ್ರಸನ್ನ ಹಾಗೂ ಅವರ ಬಳಗಕ್ಕೆ ಮತ್ತು ತುಳು ಅಕಾಡೆಮಿಯ ಸಿಬ್ಬಂದಿಯವರಿಗೆ ನನ್ನ ಪ್ರೀತಿಯ ನಮಸ್ಕಾರಗಳು.

ಸುಳ್ಯ
15.12.2016

ಸುಂದರ ಕೇನಾಜೆ

ತುಳು ಜನಪದ ಸಾಹಿತ್ಯ ಶಿಕ್ಷಣ

ಪ್ರಸ್ತಾವನೆ
1. ಪೀಠಿಕೆ
2. ಅಧ್ಯಯನದ ಉದ್ದೇಶ
3. ಅಧ್ಯಯನದ ವ್ಯಾಪ್ತಿ
4. ಅಧ್ಯಯನ ವಿಧಾನ
5. ಅಧ್ಯಯನದ ಇತಿಹಾಸ
6. ಅಧ್ಯಯನದ ಫಲಿತಗಳು

ಅಧ್ಯಾಯ 1–ಜನಪದ ಸಾಹಿತ್ಯ ಶಿಕ್ಷಣ ಬೆಳೆದು ಬಂದ ಬಗೆ
1.1. ಜನಪದ ಮತ್ತು ಶಿಕ್ಷಣ ಇವುಗಳ ಸಂಬಂಧ
1.2. ಜನಪದ ಸಾಹಿತ್ಯ ಶಿಕ್ಷಣದ ಲಕ್ಷಣ
1.3. ಶಿಕ್ಷಣದ ಅರ್ಥ ಮತ್ತು ವ್ಯಾಪ್ತಿ

ಅಧ್ಯಾಯ 2–ಜನಪದ ಸಾಹಿತ್ಯ ಕಲಿಕೆ– ತಂತ್ರ ಮತ್ತು ವಿನ್ಯಾಸ
2.1. ಉರಲ್
2.2. ಕಬಿತೆ
2.3. ಪಾಡ್ದನ ಮತ್ತು ಜನಪದ ಕಾವ್ಯ
2.4. ಗಾದೆ,ಒಗಟು
2.5. ಕತೆ

ಅಧ್ಯಾಯ 3–ಆಧುನಿಕ ಅಥವಾ ಔಪಚಾರಿಕ ಕಲಿಕೆಯಲ್ಲಿನ ಸಾಧ್ಯತೆ ಮತ್ತು ಮಿತಿಗಳು
3.1. ಆಲಿಸುವಿಕೆ
3.2. ಆಲಿಸುವಿಕೆ ಮತ್ತು ಜನಪದ ಸಾಹಿತ್ಯ ಶಿಕ್ಷಣ
3.3. ಸಾಹಿತ್ಯ ಕಲಿಕೆಯ ವಿವಿಧ ಪದ್ಧತಿಗಳು
3.4. ವಿವಿಧ ಪದ್ಧತಿಗಳು ಮತ್ತು ಜನಪದ ಸಾಹಿತ್ಯ ಶಿಕ್ಷಣ
3.5. ಗುರುಕುಲ
3.6. ಇಂಗ್ಲೀಷ್ ಶಿಕ್ಷಣ
3.7. ವೃತ್ತಿ ಶಿಕ್ಷಣ ಮತ್ತು ತಂತ್ರಜ್ಞಾನದ ಬಳಕೆ
3.8. ಭಿನ್ನ ಶಿಕ್ಷಣ ಕ್ರಮಗಳು ಮತ್ತು ಜನಪದ ಸಾಹಿತ್ಯ ಶಿಕ್ಷಣ

ಅಧ್ಯಾಯ 4–ಶಿಕ್ಷಣದಲ್ಲಿ ಸಮನ್ವಯ–ಜನಪದ ತಂತ್ರಗಳ ಅಳವಡಿಕೆ
ಅಧ್ಯಾಯ 5–ಉಪಸಂಹಾರ
5.1 ಅಧ್ಯಯನದ ಪರಿಮಿತಿ
5.2 ಅಧ್ಯಯನದ ಫಲಿತಗಳು
ಅನುಬಂಧಗಳು
1. ಸಾಂಸ್ಕೃತಿಕ ವಿವರಣೆ
2. ಸಾಂಸ್ಕೃತಿಕ ಪದಕೋಶ
3. ಪರಾಮರ್ಶನಾ ಗ್ರಂಥಸೂಚಿ
4. ಮಾಹಿತಿದಾರರ ವಿವರ

ತುಳು ಜನಪದ ಸಾಹಿತ್ಯ ಶಿಕ್ಷಣ

ಪ್ರಸ್ತಾವನೆ

ಪೀಠಿಕೆ

ಪ್ರಾಣಿ ಪ್ರಭೇದಗಳಲ್ಲಿ ಮಾನವನ ಹುಟ್ಟು ವೈಶಿಷ್ಟ್ಯಪೂರ್ಣವೂ ಮಹತ್ವಪೂರ್ಣವೂ ಆದ ಸಂಗತಿ. ಕೋಟ್ಯಂತರ ಜೀವಸಂಕುಲದ ಮಧ್ಯೆ ಉನ್ನತ ಯೋಚನೆಯನ್ನು ಮಾಡುತ್ತಾ ತನಗೆ ಬೇಕಾದಂತೆ ಜೀವಿಸಬಲ್ಲ ಏಕೈಕ ಜೀವಿ ಎಂದರೆ ಮಾನವ. ಆದ್ದರಿಂದಲೇ ಮಾನವ ಉಳಿದೆಲ್ಲಾ ಜೀವಿಗಳಿಗಿಂತ ಭಿನ್ನ. ತನ್ನ ಬೇಕು ಬೇಡಗಳಿಗೆ ಈ ಪ್ರಕೃತಿಯ ಎಲ್ಲಾ ಚರಾಚರಗಳನ್ನು ಬಳಸಿಕೊಳ್ಳುವುದರ ಜೊತೆಗೆ ಅದರಲ್ಲಿ ನಾವಿನ್ಯತೆಯನ್ನು ಕಾಣುತ್ತಾ ಹೋದದ್ದು ಮಾನವ ಇತಿಹಾಸದ ಹೆಗ್ಗಳಿಕೆ. ಈ ಹೊಸತನದ ಹಿಂದೆ ನಿರಂತರ ಕಲಿಕಾ ಧೋರಣೆಯೇ ಮಾನವನನ್ನು ಇತರ ಪ್ರಾಣಿಗಳಿಂದ ಪ್ರತ್ಯೇಕಿಸಲು ಕಾರಣವಾದುದು. ಆರಂಭದಲ್ಲಿ ಉಳಿದ ಜೀವಿಗಳ ಭಾಗವೆಂಬಂತೆ ಜೀವಿಸುತ್ತಿದ್ದ ಜೀವಿಯೊಂದನ್ನು ಮಾನವನೆಂದು ಗುರುತಿಸಿ ಅದಕ್ಕೆ ಪೂರಕವಾಗಿ ತನ್ನ ಬುದ್ಧಿಮತ್ತೆಯನ್ನು ಬೆಳೆಸಿಕೊಂಡು ಬಂದದ್ದೂ ಇದೇ ಮಾನವ. ಇದನ್ನು ವಿಕಾಸದ ಹಾದಿ ಎಂದೂ ಕರೆಯಲಾಯಿತು. ಆದರೆ ಮಾನವನಲ್ಲಿದ್ದ ಕಲಿಕಾ ಪ್ರವೃತ್ತಿಯಿಂದಾಗಿಯೇ ಆತ ಜಗತ್ತಿನ ಶ್ರೇಷ್ಠ ಜೀವಿಯೆಂದು ಕರೆದುಕೊಳ್ಳುವಂತಾಯಿತು. ಹಾಗಾಗಿ ಮನುಷ್ಯ ಉಳಿದ ಜೀವಿಗಳಿಗಿಂತ ಭಿನ್ನ ಎನಿಸಲು ಇರುವ ಏಕೈಕ ಕಾರಣವೆಂದರೆ ಆತನ ಮೆದುಳಿನಲ್ಲಿ ರಚಿತವಾಗಿರುವ ಕಲಿಕಾ ಪ್ರವೃತಿ ಎನ್ನುವುದು ನಿರ್ವಿವಾದ ಸತ್ಯ.

ಒಂದು ನಿರ್ದಿಷ್ಟ ಬದುಕನ್ನು ಬದುಕಲು ಏನೆಲ್ಲಾ ಬೇಕು ಎನ್ನುವುದನ್ನು ಕಾಲಾಂತರಗಳಲ್ಲಿ ತನ್ನ ಅರಿವಿಗೆ ತಂದುಕೊಳ್ಳುವ ಪ್ರಕ್ರಿಯೆಯೇ ಕಲಿಕೆ. ಈ ಕಲಿಕೆಗೆ ನಿರ್ದಿಷ್ಟ ಕಾಲ ಮತ್ತು ವ್ಯಾಪ್ತಿಯ ಎಲ್ಲೆಗಳಿಲ್ಲ. ಅದು ನಿರಂತರ ಮತ್ತು ಅನಂತ. ಆದರೆ ಈ ನಿರಂತರ ಮತ್ತು ಅನಂತ ವ್ಯಾಪ್ತಿಯ ಕಲಿಕೆಗೆ ಒಳಪಟ್ಟ ವಿಧಾನ, ಸಂದರ್ಭ ಮತ್ತು ಸಮುದಾಯಗಳಲ್ಲಿ ಮಾತ್ರ ವ್ಯತ್ಯಾಸವಿದೆ. ಅಂದರೆ ಜಗತ್ತಿನ ಎಲ್ಲಾ ಮೂಲೆಗಳಲ್ಲಿಯೂ ಏಕಪ್ರಕಾರವಾಗಿ ಮಾನವನ ಬೌದ್ಧಿಕತೆ ಬೆಳೆಯಲಿಲ್ಲ ಎನ್ನುವುದು ಮಾನವನ ನಾಗರಿಕ ಚರಿತ್ರೆಯಿಂದ ತಿಳಿದು ಬಂದ ವಿಚಾರ. ಒಂದು ನಿರ್ದಿಷ್ಟ ಸ್ವರ ಸಂಜ್ಞೆಯಿಂದ ಭಾಷೆಗೆ, ಆ ಭಾಷೆಯಿಂದ ಮತ್ತೆ ಲಿಪಿಗೆ ದಾಟಿದ ಅಥವಾ ಬೇಟೆಯಿಂದ ಬೇಸಾಯಕ್ಕೆ ಆ ಬೇಸಾಯದಿಂದ ನವನಾಗರಿಕತೆಗೆ ಸಾಗಿದ ಮಾನವ ಬದುಕಿನಲ್ಲಿರುವುದೆಲ್ಲವೂ ಹಂತ ಹಂತವಾದ ಕಲಿಕೆ. ಈ ಕಲಿಕಾ ಪ್ರವೃತಿಯೇ ಉಳಿದ ಪ್ರಾಣಿಗಳ ಬದುಕಿಗಿಂತ ಭಿನ್ನವಾಗಿ ಮಾನವನನ್ನು ರೂಪಿಸುತ್ತಾ ಬಂದು ಈ ಹಂತಕ್ಕೆ ತಂದು ನಿಲ್ಲಿಸಿದೆ.

ಆದ್ದರಿಂದ ಕಲಿಕೆ, ತಿಳುವಳಿಕೆ ಅಥವಾ ಅರಿವು ಗಳಿಸುವ ಪ್ರಕ್ರಿಯೆ ಇವೆಲ್ಲವೂ ಮಾನವ ಮೆದುಳಿನ ಪ್ರಕೃತಿದತ್ತವಾದ ಸಂರಚನೆ. ಈ ಸಂರಚನೆಯನ್ನು ಆತ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ ಎನ್ನುವುದೇ ಇಂದು ಚರ್ಚಿತವಾಗುತ್ತಿರುವ ಪ್ರಧಾನ ವಿಚಾರ. ಈ ಚರ್ಚೆಯಲ್ಲಿನ ಅತ್ಯಂತ ಸಣ್ಣ ಘಟಕವೆಂಬಂತೆ ಈ ಪ್ರಬಂಧವನ್ನು ರೂಪಿಸಿದ್ದೇನೆ. ಇಲ್ಲಿ ಮಾನವ ಕಲಿಕೆಯಲ್ಲಿನ ಜನಪದ ಮತ್ತು ಶಿಷ್ಟ ಎಂಬ ಎರಡು ಪ್ರಧಾನ ಪ್ರಕ್ರಿಯೆಗಳ ಬಗ್ಗೆ ಚರ್ಚಿಸಲಾಗಿದೆ ಮತ್ತು ಅವುಗಳ ನಡುವಿನ ಅಂತರ್ ಸಂಬಂಧಗಳ ಬಗ್ಗೆಯೂ ಇಲ್ಲಿ ವಿವೇಚಿಸಲಾಗಿದೆ.[*1] ಅಗಾಧ ಜಾನಪದ ಪ್ರಪಂಚದ ಒಂದು ಭಾಗವಾದ ಜನಪದ ಸಾಹಿತ್ಯದ ಕಲಿಕೆ[*2] ಹೇಗೆ ನಡೆದಿದೆ ಎನ್ನುವುದನ್ನು ಈ ಅಧ್ಯಯನದ ಮೂಲಕ ದಾಖಿಲಿಸುವುದೇ ಇಲ್ಲಿಯ ಮುಖ್ಯ ವಿಷಯವಾಗಿದೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಉದ್ದೇಶ : ಈ ಅಧ್ಯಯನ ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಮಹತ್ವವನ್ನು ಪಡೆಯುತ್ತದೆ ಎಂಬ ಉದ್ದೇಶದಿಂದ ಇದನ್ನು ಕೈಗೆತ್ತಿಗೊಳ್ಳಲಾಗಿದೆ. ಆಧುನಿಕ ಶಿಕ್ಷಣ ಜಾರಿಯಾದ ನಂತರ ಜಗತ್ತಿನಾದ್ಯಂತ ಕಂಡು ಬಂದ ಕ್ಷಿಪ್ರ ಬದಲಾವಣೆ ಮಾನವ ಜನಾಂಗವನ್ನೇ ದಿಗ್ಮೂಢಗೊಳಿಸಿದೆ. ಜೊತೆಗೆ ಇನ್ನೊಂದೆಡೆಯಿಂದ ದಿಗಿಲುಗೊಳಿಸುತ್ತಲೂ ಇದೆ. ಜ್ಞಾನ ಶಾಖೆಯ ವಿಸ್ತಾರ ಹಾಗು ಅದು ಸಾಗುತ್ತಿರುವ ಅನಿರ್ದಿಷ್ಟ ವೇಗ ಮಾನವ ಯೋಚನಾ ಸಾಮರ್ಥ್ಯಕ್ಕೂ ಮಿಗಿಲಾಗಿದೆ ಎನ್ನುವ ಆತಂಕ ಇಂದು ಮನಮಾಡಿಕೊಂಡಂತೆ ಕಾಣುತ್ತಿದೆ. ನಿರ್ದಿಷ್ಟ ವ್ಯಾಪ್ತಿಯ ಭೂಮಿ ಮತ್ತು ಅಷ್ಟೇ ಪರಿಮಿತ ಸಂಪನ್ಮೂಲಗಳ ಮಧ್ಯೆ ಅಪರಿಮಿತ ಆಸೆ-ಆಕಾಂಕ್ಷೆಗಳನ್ನು ಹೊರಿಸುವ ಶಿಕ್ಷಣ ವ್ಯವಸ್ಥೆ ಇಂದು ಜಗತ್ತಿನಾದ್ಯಂತ ಜಾರಿಯಲ್ಲಿದೆ. ಭಾಷೆ ಲಿಪೀಕರಣಕೊಂಡ ನಂತರ ಮೌಖಿಕದೊಂದಿಗೆ ಲಿಖಿತ ಎಂಬ ಇನ್ನೊಂದು ಆಯಾಮವನ್ನು ಪಡೆದುಕೊಂಡ ಶಿಕ್ಷಣ ಪ್ರಕ್ರಿಯೆ ಇಂದು ಹೆಚ್ಚು ಬಲಿಷ್ಟಗೊಂಡಿದೆ. ಆದರೆ ಮೌಖಿಕ ವ್ಯವಸ್ಥೆಯಲ್ಲಿಯೇ ತಲತಲಾಂತರಗಳಿಂದ ಸಾಗಿಬಂದ ಶಿಕ್ಷಣದಲ್ಲಿನ ಬದ್ಧತೆ ಮತ್ತು ಸಹಜತೆ ಲಿಖಿತ ಪರಂಪರೆಯ ಹಂತದಲ್ಲಿ ಸ್ಥಿತ್ಯಂತರಗೊಂಡಿದೆ. ಈ ಸ್ಥಿತ್ಯಂತರವನ್ನು ದಾಖಲಿಸಬೇಕು.

ಆಧುನಿಕ ಶಿಕ್ಷಣ ಪದ್ಧತಿ ಅನೇಕ ಪ್ರಜ್ಞಾಪೂರ್ವಕ ಆವಿಷ್ಕಾರಗಳ ಫಲ. ಇಲ್ಲಿ ಆವಿಷ್ಕಾರ ಮೊದಲು, ಪ್ರತಿಫಲ ನಂತರ. ಆದರೆ ಶಿಕ್ಷಣದಲ್ಲಿನ ಪ್ರಯೋಗವೆಂದರೆ ಒಂದು ತಲೆಮಾರಿನ ಮೇಲೆ ನಡೆಸುವ ಪ್ರಯೋಗ ಎಂದರ್ಥ. ಇದರ ಫಲಶೃತಿ ಎಂದರೆ ಒಂದು ಪೂರ್ಣ ಬದುಕು. ಅಂದರೆ ಆಧುನಿಕ ಶಿಕ್ಷಣ ವ್ಯವಸ್ಥೆಗೆ ಒಳಪಟ್ಟ ವ್ಯಕ್ತಿಗೆ ಒಂದು ಮಿತಿ ಎಂಬುದಿದೆ, ಅದು ಒಂದು ಪರಿಪೂರ್ಣ ಅಥವ ಅಪೂರ್ಣ ಬದುಕನ್ನು ನಿರ್ಧರಿಸುತ್ತದೆ. ಆದರೆ ಇದಕ್ಕೆ ತೀರಾ ಭಿನ್ನವಾದ ತಲೆಮಾರುಗಳಿಂದ ಸಾಗಿಬಂದ ಬದುಕಿನ ಕ್ರಮ ಮತ್ತು ಅತ್ಯಂತ ವ್ಯವಸ್ಥಿತ ಜೀವನ ವಿಧಾನವನ್ನು ಕಟ್ಟಿಕೊಳ್ಳುತ್ತಾ ಬರುವ ಅಲಿಖಿತ ಬೋಧನಾ ಕ್ರಮವೊಂದಿದೆ. ಅದೇ ನಮ್ಮ ಹಿರಿಯರನ್ನು ಶತಶತಮಾನಗಳಿಂದ ಕೈಹಿಡಿದು ಸಾಗಿಸುತ್ತಾ ಬಂದಿದೆ ಎನ್ನುವ ಸತ್ಯ. ಈ ಬೋಧನಾ

ಕ್ರಮ ಹೇಗಿದೆ, ಅದರ ಸ್ವರೂಪವೇನು ಮತ್ತು ಅದು ಈ ತಲೆಮಾರಿಗೆ ಹೇಗೆ ಪ್ರಸ್ತುತವಾಗುತ್ತದೆ ಎನ್ನುವುದನ್ನು ತಿಳಿಯಬೇಕು.

ಜನಪದ ಶಿಕ್ಷಣವೆನ್ನುವುದು ಜನರ ಶಿಕ್ಷಣ. ಪ್ರಜಾಪ್ರಭುತ್ವದ ವ್ಯಾಖ್ಯಾನದಂತೆ ಜನರಿಂದ ಜನರಿಗಾಗಿ ಇರುವ ಜನರ ಶಿಕ್ಷಣ. ಸುಖೀ ಬದುಕೇ ಇದರ ಮೂಲ ಗುರಿ. ಇಲ್ಲಿ ಬಡವ–ಶ್ರೀಮಂತ,ಮೇಲು–ಕೀಳು ಎಲ್ಲವೂ ನಗಣ್ಯ. ಆಯಾ ಜನಾಂಗ, ಸ್ತರ ಇವೆಲ್ಲವುಗಳ ಅಂತಿಮ ಗುರಿ ಸುಖ, ಸಂತೋಷ ಮತ್ತು ವ್ಯವಸ್ಥಿತ ಬದುಕು. ಇದನ್ನು ಪಡೆಯುವುದಕ್ಕಾಗಿ ಇರುವ ಅಲಿಖಿತ ಕಾನೂನು, ನೀತಿ–ನಿರೂಪಣೆಗಳಿಗೆ ಮಾಧ್ಯಮವೆಂಬಂತೆ ಹುಟ್ಟಿಕೊಂಡದ್ದೇ ಜಾನಪದ.*3 ಈ ಜಾನಪದ ಗರ್ಭದಲ್ಲಿ ಅಡಕವಾಗಿರುವ ಅನೇಕ ಪ್ರಕಾರಗಳಲ್ಲಿ ಜನಪದ ಸಾಹಿತ್ಯವೂ ಒಂದು. ಜನಪದ ಸಾಹಿತ್ಯ ಮೌಖಿಕವಾಗಿ ರಚನೆಗೊಂಡು ಶೈಕ್ಷಣಿಕವಾಗಿ ಹೇಗೆ ತಲೆಮಾರುಗಳಿಂದ ಹರಿದು ಬಂದಿದೆ. ಅದರ ತಂತ್ರ ಮತ್ತು ಪ್ರಭಾವ ಹೇಗಿದೆ ಎನ್ನುವುದನ್ನು ತಿಳಿದುಕೊಳ್ಳುವುದು ಅನಿವಾರ್ಯ.

ಭಾರತೀಯ ಭಾಷೆ ಮತ್ತು ಪ್ರದೇಶಗಳಲ್ಲಿ ತುಳು ಹಾಗೂ ಪಶ್ಚಿಮ ಕರಾವಳಿಯ ನಿರ್ದಿಷ್ಟ ಪ್ರದೇಶ ಅಂದರೆ ಪಶ್ಚಿಮ ಘಟ್ಟಗಳ ಕೆಳಭಾಗದ ಭೂಪ್ರದೇಶಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ದ್ರಾವಿಡ ಭಾಷಾವರ್ಗದಲ್ಲಿ ದೀರ್ಘ ಇತಿಹಾಸವಿರುವ ಮತ್ತು ಲಿಪಿಗಿಂತಲೂ ಮೌಖಿಕವಾಗಿಯೇ ಬೆಳೆದು ನಿಂತಿರುವ ಬಹು ಸಮುದಾಯದ ಭಾಷೆ ತುಳು. ವಿಶೇಷ ಜನಪದ ಸಂಸ್ಕೃತಿಯನ್ನು ತನ್ನೊಡಲಲ್ಲಿ ಉಳಿಸಿ ಬೆಳೆಸಿಕೊಂಡು ಬಂದಿರುವ ನಾಡು ತುಳುನಾಡು. ಇಲ್ಲಿಯ ಸಾಂಸ್ಕೃತಿಕ ಬೇರು ಗಟ್ಟಿಯಾಗಿ ತಳವೂರಿಕೊಂಡಿರುವುದಕ್ಕೆ ಪರಿಣಾಮಕಾರಿ ಅನೌಪಚಾರಿ ಶಿಕ್ಷಣವೇ ಕಾರಣ. ಅದೇ ಮುಂದೆ ಇಲ್ಲಿ ಔಪಚಾರಿಕ ಶಿಕ್ಷಣ ಹುಟ್ಟಿಕೊಳ್ಳುವುದಕ್ಕೂ ಕಾರಣವಾಯಿತೋ ಏನೋ? ಈ ಜಿಜ್ಞಾಸೆಗೆ ಪರಿಹಾರ ಹುಡುಕಬೇಕು, ಹೀಗೆ ಭಿನ್ನ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ವ್ಯಾಪ್ತಿ : ಜಾನಪದ ಶಿಕ್ಷಣ ಎನ್ನುವ ಶೀರ್ಷಿಕೆಯಡಿಯಲ್ಲಿ ಅಧ್ಯಯನವೊಂದನ್ನು ನಡೆಸಿದ್ದೇ ಆದರೆ ಅದರ ವ್ಯಾಪ್ತಿ ಬಹಳ ವಿಸ್ತೃತವಾಗಿರುತ್ತದೆ. ಅಂದರೆ ಇಲ್ಲಿ ಎರಡು ಪ್ರಧಾನ ಕ್ಷೇತ್ರಗಳಾದ 'ಜಾನಪದ' ಮತ್ತು 'ಶಿಕ್ಷಣ' ಇವೆರಡನ್ನೂ ಆಮೂಲಾಗ್ರವಾಗಿ ಅಧ್ಯಯನ ನಡೆಸಿ ವಿಶ್ಲೇಷಿಸಬೇಕಾಗುತ್ತದೆ. ಅಲ್ಲದೇ ಈ ಎರಡೂ ಕ್ಷೇತ್ರಗಳಿಗೆ ಜಾಗತಿಕ ಮಟ್ಟದ ಪ್ರಾದೇಶಿಕ ವ್ಯಾಪ್ತಿಯೂ ಇದೆ. ಆದರೆ ಪ್ರಸ್ತುತ ಅಧ್ಯಯನವನ್ನು ಅಷ್ಟೊಂದು ವಿಸ್ತೃತವಾಗಿ ನೋಡಲು ಅಸಾಧ್ಯವಾಗುತ್ತದೆ. ಆದ್ದರಿಂದ ವಿಷಯ ಮತ್ತು ಪ್ರದೇಶದ ಒಂದು ಘಟಕವನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಅಂದರೆ ವಿಷಯಕ್ಕೆ ಸಂಬಂಧಿಸಿದಂತೆ ಜಾನಪದ ಕ್ಷೇತ್ರದ ಒಂದು ಪ್ರಧಾನ ವಿಭಾಗವಾದ 'ಜನಪದ ಸಾಹಿತ್ಯ' ಎಂಬ ಪಠ್ಯವನ್ನೂ ಪ್ರಾದೇಶಿಕತೆಗೆ ಸಂಬಂಧಿಸಿದಂತೆ ತುಳುನಾಡು (ಅವಿಭಜಿತ ದಕ್ಷಿಣ ಕನ್ನಡ,ಕಾಸರಗೋಡು) ಈ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ತುಳು ಜನಪದ ಸಾಹಿತ್ಯವನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಇಲ್ಲಿ ಮುಖ್ಯವಾಗಿ ತುಳು ಜನಪದ ಸಾಹಿತ್ಯದ ಪ್ರಕಾರಗಳಾದ ಉರಲ್, ಕಬಿತ, ಪಾಡ್ದನ, ಜನಪದ ಕಾವ್ಯ, ಗಾದೆ, ಒಗಟು, ಕತೆ ಇವುಗಳನ್ನು ಕಲಿಯುವ ಮತ್ತು ಕಲಿಸುವ ವಿಧಾನ, ತಂತ್ರ, ವಿನ್ಯಾಸ ಇತ್ಯಾದಿಗಳನ್ನು

ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಜನಪದ ಸಾಹಿತ್ಯಗಳ ಕಲಿಕಾ ವಿಧಾನವನ್ನು ಔಪಚಾರಿಕ(ಆಧುನಿಕ) ಶಿಕ್ಷಣದಲ್ಲಿ ಬಳಸಿಕೊಳ್ಳಬಹುದಾದ ಸಾಧ್ಯತೆ, ಆ ಹಿನ್ನಲೆಯಲ್ಲಿ ಔಪಚಾರಿಕ(ಆಧುನಿಕ) ಶಿಕ್ಷಣದ ಆವಿಷ್ಕೃತ ಪದ್ಧತಿಗಳೊಂದಿಗೆ ತೌಲನಿಕವಾಗಿ ಅಧ್ಯಯನ ನಡೆಸಲಾಗಿದೆ. ಆದ್ದರಿಂದ ಈ ಅಧ್ಯಯನ ವ್ಯಾಪ್ತಿಯಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆಯ ವಿಭಿನ್ನ ಪದ್ಧತಿಗಳ ಬಗ್ಗೆಯೂ ಗಮನ ಹರಿಸಲಾಗಿದೆ.

ವಿಧಾನ : ಈ ಅಧ್ಯಯನಕ್ಕೆ ಜಾನಪದ ನಲೆಗಟ್ಟಿನ ಅಧ್ಯಯನ ವಿಧಾನವನ್ನು ಅವಲಂಬಿಸಬೇಕಾದ ಅಗತ್ಯವಿದೆ. ತುಳು ಜನಪದ ಕ್ಷೇತ್ರದ ಕ್ಷೇತ್ರಕಾರ್ಯ, ಸಂಗ್ರಹ, ವಿಸ್ತೃತ ಅಧ್ಯಯನ, ವಿಶ್ಲೇಷಣೆಗಳು ಈಗಾಗಲೇ ನಡೆದಿದ್ದರೂ ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕ್ಷೇತ್ರಕಾರ್ಯ ನಡೆಸಲಾಗಿದೆ. ಈಗಾಗಲೇ ಸಂಗ್ರಹಿಸಿದ ಪಠ್ಯಗಳಿಗಿಂತ ಆ ಪಠ್ಯಗಳ ಸಂರಚನೆ ಒಬ್ಬ ವಕ್ತೃವಿನಲ್ಲಿ ಹೇಗೆ ನಡೆದಿದೆ ಎನ್ನುವುದನ್ನು ತಿಳಿಯುವುದೇ ಈ ಅಧ್ಯಯನದ ಪ್ರಧಾನ ಉದ್ದೇಶ, ಹಾಗಿರುವಾಗ ಈಗಾಗಲೇ ಸಂಗ್ರಹಿತ ಪಠ್ಯ ಪ್ರಸ್ತುತ ಅಧ್ಯಯನಕ್ಕೆ ಅಷ್ಟೊಂದು ಪ್ರಯೋಜನಕ್ಕೆ ಬರಲಾರದು. ಇಲ್ಲಿ ಕ್ಷೇತ್ರಕಾರ್ಯವೆಂದರೆ ಜನಪದ ಸಾಹಿತ್ಯದ ಸಂಗ್ರಹಕ್ಕಿಂತಲೂ ಅದು ವಕ್ತೃವಿನಲ್ಲಿ ರೂಪುಗೊಂಡ ಬಗೆ, ಅದರ ಅಭಿವ್ಯಕ್ತಿ, ಆ ಅಭಿವ್ಯಕ್ತಿಯಲ್ಲಿನ ವ್ಯತ್ಯಾಸ, ಆತನ ಸ್ಮರಣಶಕ್ತಿ, ಕಲಿಕಾ ಸಾಮರ್ಥ್ಯ, ಆತನ ಮೇಲೆ ಈ ಸಾಹಿತ್ಯ ಬೀರಿದ ಪರಿಣಾಮ ಈ ರೀತಿ ಒಬ್ಬ ವಕ್ತೃವಿನ ಬೌದ್ಧಿಕ, ಭಾವನಾತ್ಮಕ ಮತ್ತು ಸಾಂಸ್ಕೃತಿಕ ಸ್ವರೂಪಗಳಿಗೆ ಸಂಬಂಧಿಸಿದ್ದಾಗಿದೆ. ಹಾಗಾಗಿ ಇದುವರೆಗೆ ನಡೆದ ಕ್ಷೇತ್ರಕಾರ್ಯಗಳ ಸಂಗ್ರಹಿತ ಮಾಹಿತಿ ಇಲ್ಲಿ ಹೆಚ್ಚು ಪರಿಣಾಮ ಬೀರದೇ ಈ ಮೇಲಿನ ದೃಷ್ಟಿಕೋನದಿಂದ ಕ್ಷೇತ್ರಕಾರ್ಯ ನಡೆಸಬೇಕಾಗಿದೆ.

ಮೇಲಿನ ಉದ್ದೇಶಕ್ಕನುಗುಣವಾಗಿ ಕ್ಷೇತ್ರಕಾರ್ಯ ನಡೆಸುವ ಹಂತದಲ್ಲಿ ಪ್ರದರ್ಶನದ ಅವಲೋಕನ, ವಕ್ತೃವಿನ ಸಂದರ್ಶನ, ಅಲ್ಲದೇ ಆತನ ಸಹಜ ಬದುಕಿನ ಮೇಲೆ ಜನಪದ ಸಾಹಿತ್ಯ ಬೀರಿರುವ ಪ್ರಭಾವ ಇವೆಲ್ಲವನ್ನೂ ಗಮನಿಸಿ ಗುರುತಿಸಬೇಕಾಗುತ್ತದೆ. ಸೈದ್ಧಾಂತಿಕ ನೆಲೆಗಟ್ಟಿನ ಹಿನ್ನಲೆಯಲ್ಲಿ ಮೌಖಿಕ ಸೂತ್ರ ಸಿದ್ಧಾಂತವನ್ನು ಇಲ್ಲಿ ಹೆಚ್ಚು ಅವಲಂಬಿಸಬೇಕಾಗುತ್ತದೆ. ಅದರೊಂದಿಗೆ ಪ್ರದರ್ಶನ, ಸಾಂದರ್ಭಿಕ, ಅವಲೋಕನ, ರಾಚನಿಕ, ತೌಲನಿಕ ಮತ್ತು ವ್ಯಕ್ತಿತ್ವ ವಿಕಸನ ಇವೇ ಮೊದಲಾದ ಸಿದ್ಧಾಂತಗಳನ್ನೂ ಸಂದರ್ಭಾನುಸಾರ ಬಳಸಿಕೊಳ್ಳಬೇಕಾಗುತ್ತದೆ. ಇದಲ್ಲದೇ ಜನಪದ ಕ್ಷೇತ್ರದಲ್ಲಿ ಪ್ರಕಟಗೊಂಡಿರುವ ಮಹತ್ವದ ಕೃತಿಗಳು, ಶಿಕ್ಷಣ ಕ್ಷೇತ್ರದಲ್ಲಿ ನಡೆದ ಆವಿಷ್ಕಾರಗಳು, ಸಿದ್ಧಾಂತಗಳು ಮತ್ತು ಪ್ರಮುಖ ಕೃತಿಗಳು ಇವೆಲ್ಲವನ್ನು ಅಧ್ಯಯನದ ಆಕರಗಳಾಗಿ ಪರಾಮರ್ಶಿಸಲಾಗುವುದು.

ಈ ಮೇಲಿನ ವಿಧಾನಗಳೊಂದಿಗೆ ಕೆಲವು ಅಗತ್ಯದ ಛಾಯಾಚಿತ್ರಗಳು, ರೇಖಾಚಿತ್ರಗಳು, ಅಧ್ಯಯನಕ್ಕೆ ಅನುಕೂಲಿಸುವ ವಿಡಿಯೋ ದಾಖಲೆಗಳು–ಇವುಗಳನ್ನು ಪರಿಶೀಲಿಸಲಾಗುವುದು. ಅಧ್ಯಯನ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ ಪ್ರಮುಖ ಅಧ್ಯಯನ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ಆಕರಗಳನ್ನೂ ಬಳಸಿಕೊಳ್ಳಲಾಗುವುದು.

ಅಧ್ಯಯನದ ಇತಿಹಾಸ ಮತ್ತು ಫಲಿತಗಳು:

ಇತಿಹಾಸ : ಈ ಮೇಲೆ ತಿಳಿಸಿದಂತೆ ಜನಪದ ಕ್ಷೇತ್ರಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯ, ಸಂಗ್ರಹ, ವಿಶ್ಲೇಷಣೆ ಮತ್ತು ಸಂಶೋಧನಗಳು ತುಳುನಾಡಿನಲ್ಲಿ ದೇಶಿಯ ಮತ್ತು ವಿದೇಶಿಯ ಸಂಶೋಧಕರಿಂದ, ವಿದ್ವಾಂಸರಿಂದ ಶ್ಲಾಘನಾರ್ಹವಾಗಿ ನಡೆದಿದೆ. ಆದರೆ ಶೈಕ್ಷಣಿಕ ದೃಷ್ಟಿಕೋನದಿಂದ ಜನಪದವನ್ನು ಅದರಲ್ಲೂ ತುಳು ಜನಪದವನ್ನು ಅಧ್ಯಯನ ನಡೆಸಿರುವುದು ತೀರಾ ಅಪರೂಪ. ದೇಶೀ ವಿದ್ವಾಂಸರಲ್ಲಿ ಡಾ. ಬಿ.ಎ.ವಿವೇಕ ರೈಯವರು ನಡೆಸಿದ ಕಾರ್ಯವೇ ಮೊದಲಿನದು. ಅವರು 1985 ರಲ್ಲಿ ಅಧ್ಯಯನ ನಡೆಸಿ ಪ್ರಕಟಿಸಿದ 'ತುಳು ಜಾನಪದ ಸಾಹಿತ್ಯ' ಎನ್ನುವ ಕೃತಿ ತುಳು ಜನಪದ ಶಿಕ್ಷಣದ ಕುರಿತಾಗಿ ಬೆಳಕು ಚೆಲ್ಲುತ್ತದೆ. ಜೊತೆಗೆ ಈ ಕೃತಿಯು ಈ ವಿಷಯಕ್ಕೆ ಸಂಬಂಧಿಸಿ ಕೆಲವು ಪರೋಕ್ಷ ಮಾಹಿತಿಯನ್ನೂ ನೀಡುತ್ತದೆ. ಅದೆಂದರೆ ಪಾಡ್ದನ, ಕಬಿತ, ಉರಲ್, ಕತೆ ಈ ಜನಪದ ಸಾಹಿತ್ಯ ಇವುಗಳ ಪಾಠಾಂತರಗಳು ಪ್ರದೇಶದಿಂದ ಪ್ರದೇಶಕ್ಕೆ ಬಿನ್ನವಾಗಿರುವುದನ್ನು ದಾಖಲಿಸಿರುತ್ತಾರೆ. ಇದರರ್ಥ ಜಾನಪದ ಪಠ್ಯಕ್ರಮಗಳು ಒಂದೇ ಆಗಿದ್ದರೂ ಪಠ್ಯಗಳಲ್ಲಿ ವ್ಯತ್ಯಾಸವಿರುತ್ತದೆ ಮತ್ತು ಅದು ಕಲಿಕಾ ಕ್ರಮಗಳಲ್ಲಿ ಆಗಿರುವ ಭಿನ್ನತೆ ಇವುಗಳನ್ನು ತಿಳಿದುಕೊಳ್ಳಬಹುದು. ಅಲ್ಲದೇ ಜನಪದ ಸಾಹಿತ್ಯದ ಕಲಿಕೆಯಲ್ಲಿ ಸಾರ್ವತ್ರಿಕವಾಗಿ ಒಂದು ಏಕಸೂತ್ರವಿದೆ ಎನ್ನುವ ಅಂಶವೂ ತಿಳಿದು ಬರುತ್ತದೆ. ಈ ಅಧ್ಯಯನ ಒಬ್ಬ ವಕ್ತೃವಿನ ಕಲಿಕಾ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ತಿಳಿಸಿಕೊಡುವುದಕ್ಕೆ ಸಹಕಾರಿಯಾಗಿದೆ.

ನಂತರದ ಹಂತದಲ್ಲಿ ಡಾ.ಚಿನ್ನಪ್ಪ ಗೌಡರು 1990ರಲ್ಲಿ ಪ್ರಕಟಿಸಿದ ಭೂತಾರಾಧನೆ ಒಂದು ಜಾನಪದ ಅಧ್ಯಯನ ಎಂಬ ಕೃತಿಯಲ್ಲಿ ಪಾಡ್ದನಗಳ ಕಲಿಕೆಗೆ ಸಂಬಂಧಿಸಿದ ಸೂತ್ರಗಳನ್ನು ತಿಳಿಸಿರುತ್ತಾರೆ. ಜನಪದ ಪಾಡ್ದನಗಳ ಕಲಿಕೆ ಮತ್ತು ಅಭಿವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೈದ್ಧಾಂತಿಕ ನೆಲೆಯಲ್ಲಿ ಕೆಲವೊಂದು ಅಂಶಗಳ ಬಗ್ಗೆ ಡಾ.ಅಮೃತ ಸೋಮೇಶ್ವರರು 1997 ರಲ್ಲಿ ಪ್ರಕಟಿಸಿದ ಕೃತಿ 'ತುಳು ಪಾಡ್ದನ ಸಂಪುಟ'ದ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

1999 ರಲ್ಲಿ ಪ್ರೊ.ಎ.ವಿ.ನಾವಡರು ಪ್ರಕಟಪಡಿಸಿದ 'ಗಿಡಿಕೆರೆ ರಾಮಕ್ಕ ಮುಗೇರ್ತಿ ಕಟ್ಟಿದ ಸಿರಿ ಪಾಡ್ದನ' ಕೃತಿಯಲ್ಲಿ ಮಿಲ್‌ಮ್ಯಾನ್ ಪ್ಯಾರಿಯವರ ಮೌಖಿಕ ಸೂತ್ರಾತ್ಮಕ ಸಿದ್ಧಾಂತವನ್ನು ಅಳವಡಿಸಿದ ಕುರಿತು ಸುದೀರ್ಘ ಪ್ರಸ್ತಾವನೆಯನ್ನು ನೀಡಿರುತ್ತಾರೆ. ಅಲ್ಲದೇ ಇವರದೇ ಕೃತಿ 'ಒಂದು ಸೊಲ್ಲು ನೂರು ಸ್ವರ' ಇದರಲ್ಲಿ ಮೌಖಿಕ ಸೂತ್ರಾತ್ಮಕ ಸಿದ್ಧಾಂತವನ್ನು ಚರ್ಚಿಸಿದ್ದಾರೆ. ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರು 'ಜಾನಪದ ಮಿನದನ', ಡಾ.ಪುರುಷೋತ್ತಮ ಬಿಳಿಮಲೆಯವರ 'ಕರಾವಳಿ ಜಾನಪದ' ಡಾ.ರಾಜಶ್ರೀಯವರ' 'ಬೆನ್ಪಿ ಪೊಣ್ಣನ ಕನತ ಕದಿಕೆ ಕಬಿತೊಲು' ಡಾ.ಪಾದೆಕಲ್ಲು ವಿಷ್ಣು ಭಟ್‌ರವರು ಸಂಪಾದಿಸಿದ 'ತುಳು ಛಂದೋವಿನ್ಯಾಸ' ಇವೇ ಮೊದಲಾದ ಕೃತಿಗಳಲ್ಲಿ ಜನಪದ ಸಾಹಿತ್ಯದ ಕಲಿಕೆಗೆ ಸಂಬಂಧಿಸಿದಂತೆ ಪ್ರಾಸಂಗಿಕ ವಿವರಣೆ, ವ್ಯಾಖ್ಯಾನ ಹಾಗೂ ಉದ್ಧರಣೆಗಳನ್ನು ಬಳಸಿಕೊಳ್ಳಲಾಗಿದೆ. ತುಳುನಾಡಿನ ಜನಪದ ಸಾಹಿತ್ಯದ ಸಂಗ್ರಹಣೆ ಹಾಗೂ ನಾನಾ ದೃಷ್ಟಿಕೋನದಿಂದ ಅದರ ವಿಶ್ಲೇಷಣೆಯನ್ನು

ಅನೇಕ ವಿದ್ವಾಂಸರು ನಡೆಸಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಅದು ಇಲ್ಲಿಗೆ ಅನ್ವಯವಾಗುವುದು ಕಡಿಮೆ. ಆದ್ದರಿಂದ ಅದನ್ನು ಇಲ್ಲಿ ಪ್ರಸ್ತಾಪಿಸಿರುವುದಿಲ್ಲ.

ವಿದೇಶಿ ವಿದ್ವಾಂಸರಲ್ಲಿ ಪೀಟರ್.ಜೆ.ಕ್ಲಾಸ್ ರವರು ತುಳು ಮೌಖಿಕ ಸಾಹಿತ್ಯದ ಬಗ್ಗೆ ನಡೆಸಿದ ಅಧ್ಯಯನ ಅತ್ಯಂತ ಮಹತ್ವವಾದುದು. ಮನಶಾಸ್ತ್ರೀಯ ನೆಲೆಯಲ್ಲಿ ಜನಪದ ಸಾಹಿತ್ಯದ ಸಂರಚನೆ ಮತ್ತು ಕಲಿಕೆಯನ್ನು ಈ ಕೃತಿ ವಿಶ್ಲೇಷಿಸುತ್ತದೆ.

ಫಲಿತಗಳು : ಈ ಅಧ್ಯಯನದಿಂದಾಗಿ ಪರಂಪರಾಗತವಾಗಿ ಸಾಗಿಬಂದ ಅನೌಪಚಾರಿಕ ಕಲಿಕಾ ವಿಧಾನವೊಂದನ್ನು ತಿಳಿದುಕೊಳ್ಳಬಹುದು. ಆ ವಿಧಾನವನ್ನು ಆಧುನಿಕ ಶಿಕ್ಷಣದಲ್ಲಿ ಅದರಲ್ಲೂ ಸಾಹಿತ್ಯದ ಅಧ್ಯಯನದಲ್ಲಿ ಬಳಸಿಕೊಳ್ಳಲು ಸಾಧ್ಯವಿದೆ. ಸೃಜನಶೀಲ ಸಾಹಿತ್ಯ ಸೃಷ್ಟಿ ಒಬ್ಬ ವ್ಯಕ್ತಿಯ ಪ್ರತಿಭೆ. ಈ ಪ್ರತಿಭೆ ಬೆಳೆಯಲು ಅವಕಾಶ ನೀಡುವ ಪೂರಕ ಕಲಿಕೆಯ ಅಗತ್ಯವಿದೆ. ಒಬ್ಬ ಜನಪದ ಸಾಹಿತಿಯೂ ಹೇಗೆ ತನ್ನೊಳಗೆ ಸೃಜನಶೀಲ ಗುಣವನ್ನು ಇರಿಸಿಕೊಂಡಿರುತ್ತಾನೆ ಎಂಬುವುದು ಅತ್ಯಂತ ಕುತೂಹಲದ ವಿಚಾರ. ಅದು ಒಬ್ಬ ಶಿಷ್ಟ ಕವಿ, ಸಾಹಿತಿಯ ಹುಟ್ಟಿಗೆ ಕಾರಣವಾಗಬಹುದು. ಇಂತಹಾ ಸಾಹಿತ್ಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಂಶಗಳನ್ನು ಇದರಿಂದ ಪಡೆದುಕೊಳ್ಳಲು ಸಾಧ್ಯವಿದೆ.

ಕಲಿಕೆಯ ಅಂತಿಮ ಗುರಿ ಸಂತೋಷ ಮತ್ತು ಸಮೃದ್ಧ ಬದುಕನ್ನು ಕಟ್ಟಿಕೊಳ್ಳುವುದು. ಕಲಿಕೆ ಇಂದು ಯಾಂತ್ರಿಕವಾಗುತ್ತದೆ ಮತ್ತು ಕಲಿಕಾರ್ಥಿ ತನ್ನ ಆಸಕ್ತಿಯನ್ನು ಕಳೆದುಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗುತ್ತಿದೆ ಎಂದು ಶಿಕ್ಷಣ ತಜ್ಞರು ಕಳವಳ ವ್ಯಕ್ತಪಡಿಸುತ್ತಿರುವ ಈ ಕಾಲದಲ್ಲಿ ಜನಪದರು ಕಲಿಕೆಯನ್ನು ಹೇಗೆ ಉಲ್ಲಾಸದಾಯಕವಾಗಿ ನಡೆಸುತ್ತಿದ್ದರು ಎನ್ನುವ ಉತ್ತರವನ್ನು ಇಲ್ಲಿ ಕಾಣಲು ಸಾಧ್ಯವಿದೆ.

ಇಲ್ಲಿ ಮುಖ್ಯವಾಗಿ ತುಳು ಜನಪದ ಸಾಹಿತ್ಯದ ಬೇರೆಬೇರೆ ಘಟಕಗಳನ್ನು ಮತ್ತು ಆಧುನಿಕ ಶಿಕ್ಷಣದ ಬೇರೆಬೇರೆ ಪದ್ಧತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಇವೆರಡರ ಅಭ್ಯಾಸ ವಿಧಾನದ ಗುಣದೋಷಗಳನ್ನು ಕಂಡುಕೊಳ್ಳಲಾಗುವುದು. ಈ ಅಭ್ಯಾಸ ವಿಧಾನ ಆಧುನಿಕ ಶಿಕ್ಷಣಕ್ಕೆ ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎನ್ನುವುದನ್ನು ಈ ಅಧ್ಯಯನದಿಂದ ತಿಳಿದು ಕೊಳ್ಳಲಾಗುವುದು. ಆದ್ದರಿಂದ ಜನಪದ ವಿದ್ವಾಂಸರು ಇದುವರೆಗೆ ಅಷ್ಟೊಂದು ಗಮನ ಕೊಡದ ಹಾಗೂ ಶಿಕ್ಷಣ ತಜ್ಞರ ಅವಜ್ಞೆಗೊಳಗಾದ ಜಾನಪದ ಕಲಿಕಾ ವಿಧಾನ ಮತ್ತು ವಿನ್ಯಾಸ ತಂತ್ರಗಳ ಬಗ್ಗೆ ಈ ಅಧ್ಯಯನದ ಮೂಲಕ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬಹುದಾಗಿದೆ. ವ್ಯಾಪ್ತಿಯ ದೃಷ್ಟಿಯಿಂದ ಜಾನಪದದ ಒಂದು ಘಟಕವಾದ ಜನಪದ ಸಾಹಿತ್ಯವನ್ನು ಮಾತ್ರ ಇಲ್ಲಿ ಬಳಸಿಕೊಂಡಿದ್ದರೂ ಅಧ್ಯಯನದ ಮುಂದಿನ ಭಾಗವಾಗಿ ಸಮಗ್ರ ಜಾನಪದವನ್ನು ಅಧ್ಯಯನಕ್ಕೆ ಬಳಸಿಕೊಳ್ಳುವ ಆ ಮೂಲಕ ತುಳು ಸಂಸ್ಕೃತಿಯಲ್ಲಿ ಅನೌಪಚಾರಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವ ಆಶಯ ಇದಾಗಿದೆ.

ಮೇಲ್ನೋಟಕ್ಕೆ ಬಾಯ್ದೆರೆ ಮತ್ತು ಅನುಕರಣೆಯ ಮೂಲಕ ಕಲಿಯುವ ವಿಧಾನ ಜಾನಪದದ್ದಾಗಿದೆ ಎಂದು ತಿಳಿದುಕೊಂಡರೂ ಜನಪದ ಸಾಹಿತ್ಯವನ್ನು ಈ

ವಿಧಾನವೊಂದರಿಂದಲೇ ಕಲಿತುಕೊಳ್ಳುವುದು ಸುಲಭ ಸಾಧ್ಯದ ಮಾತಲ್ಲ. ಅದರ ಹೊರತಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಕಲಿಕೆಯಲ್ಲಿ ಭಿನ್ನತೆ ಮತ್ತು ಸೃಜನಶೀಲತೆ ವ್ಯಕ್ತಗೊಳ್ಳುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ಆಕರ್ಷಕ ಅಂಶಗಳೇ ಕಾರಣವೆನ್ನಬೇಕು. ಈ ಅಂಶಗಳು ಈ ಅಧ್ಯಯನದಿಂದ ತಿಳಿದುಕೊಳ್ಳುವಂತಾಗುತ್ತದೆ.

*1 ಇದನ್ನು ಪ್ರಸ್ತುತ ಅಧ್ಯಯನದಲ್ಲಿ ಔಪಚಾರಿಕ ಶಿಕ್ಷಣವೆಂದು ಕರೆಯಲಾಗಿದೆ.ಇದು ಆಧುನಿಕ ಶಿಕ್ಷಣವೂ ಹೌದು, ಶಿಷ್ಟ ಶಿಕ್ಷಣವೂ ಹೌದು.

*2 ಜನಪದ ಕಲಿಕೆಯನ್ನು ಪ್ರಬಂದದುದ್ದಕ್ಕೂ ಅನೌಪಚಾರಿಕ ಶಿಕ್ಷಣವೆಂದು ಗುರುತಿಸಲಾಗಿದೆ.

*3 ಜಾನಪದ ಎನ್ನುವುದು ಸಮಗ್ರತೆಯನ್ನು ಸೂಚಿಸುತ್ತದೆ. ಜನಪದ ಅದರ ಅಂಗವಾಗಿದೆ. ಡಾ.ದೇಜಗೌ– ಜಾನಪದ ಸಾಹಿತ್ಯ

ಅಧ್ಯಾಯ-1

ತುಳು ಜನಪದ ಸಾಹಿತ್ಯ ಶಿಕ್ಷಣ ಬೆಳೆದು ಬಂದ ಬಗೆ

ಪೀಠಿಕೆ:

ಜನಪದ ಸಾಹಿತ್ಯ ಶಿಕ್ಷಣ ಎನ್ನುವ ಪರಿಕಲ್ಪನೆ ನಿರ್ದಿಷ್ಟವಾಗಿ ಒಂದು ಕಾಲಘಟ್ಟ ಅಥವಾ ಒಂದು ಚೌಕಟ್ಟಿನಲ್ಲಿ ಬೆಳೆದು ಬಂದ ಪ್ರಕ್ರಿಯೆ ಏನೂ ಅಲ್ಲ. ಮಾನವನಲ್ಲಿ ಯೋಚನಾ ಸಾಮರ್ಥ್ಯ ಬೆಳೆಯಲು ಆರಂಭವಾದಲ್ಲಿಂದ ಆ ಯೋಚನೆಗಳನ್ನು ಪರಸ್ಪರ ವರ್ಗಾಹಿಸುವ ಪ್ರಕ್ರಿಯೆ ಸಹಜವಾಗಿಯೇ ಆರಂಭವಾಯಿತು. ಈ ವರ್ಗಾವಣೆಯೇ ಶಿಕ್ಷಣ. ಈ ವರ್ಗಾವಣೆಯಲ್ಲಿ ಆಚರಣೆ-ಆರಾಧನೆ, ಆಚಾರ-ವಿಚಾರ, ನಂಬಿಕೆ-ನಡವಳಿಕೆ, ವೃತ್ತಿ-ಪ್ರವೃತಿ ಹೀಗೆ ಮೌಖಿಕ ಮತ್ತು ಆಂಗಿಕ ರೂಪದ ಎಲ್ಲವೂ ಒಳಗೊಂಡಿರುತ್ತಿತ್ತು. ಇದರಲ್ಲಿ ಮೌಖಿಕ ಭಾಗದ ಅಂಶಗಳು ಜಾನಪದ ವಿಚಾರವಾಗಿ ಜನಪದ ಸಾಹಿತ್ಯದ ಪಠ್ಯವಾಗಿ ಜನರ ಮಧ್ಯೆ ಕೆಲಸ ಮಾಡುತ್ತಾ ಬಂದಿದೆ. ತಲತಲಾತರದಿಂದ ಹರಿದು ಬಂದ ಈ ಪಠ್ಯ ಕಾಲ, ಸಂದರ್ಭ, ಸನ್ನಿವೇಶ ಮತ್ತು ಪ್ರದೇಶಗಳಿಗನುಗುಣವಾಗಿ ಬದಲಾಗಿತ್ತಲೂ ಬಂದಿದೆ. ಈ ರೀತಿ ನಮ್ಯಗೊಳ್ಳುವ ಗುಣ ಜಾನಪದ ಪಠ್ಯಗಳಿಗಿರುವ ಕಾರಣ ಅದು ಅಳಿವಿಲ್ಲದೇ ತನ್ನ ಅಸ್ಥಿತ್ವವನ್ನು ನಿರಂತರ ಉಳಿಸಿಕೊಂಡಿದೆ.

ಪ್ರಸ್ತುತ ಈ ಅಧ್ಯಾಯದಲ್ಲಿ ಜಾನಪದ ಮತ್ತು ಶಿಕ್ಷಣ ಇವುಗಳ ಮಧ್ಯೆ ಇರುವ ಸಂಬಂಧವನ್ನು ಆಧುನಿಕ ಪರಿಭಾಷೆಯಲ್ಲಿ ವಿಶ್ಲೇಷಿಸಲಾಗುವುದು. ಅದರೊಂದಿಗೆ ಜನಪದ ಸಾಹಿತ್ಯದ ಲಕ್ಷಣ, ಜಾನಪದ ವಿದ್ವಾಂಸರು ಸೂಚಿಸಿರುವ ಅದರ ವ್ಯಾಪ್ತಿ ಅಲ್ಲದೇ ಶಿಕ್ಷಣ ತಜ್ಞರು ಶಿಕ್ಷಣಕ್ಕೆ ನೀಡಿರುವ ಅರ್ಥ, ವ್ಯಾಪ್ತಿಯನ್ನು ತಿಳಿಸಲಾಗಿದೆ. ಮುಂದಿನ ಅಧ್ಯಾಯಗಳಿಗೆ ಪೂರಕವಾಗುವ ದೃಷ್ಟಿಯಿಂದ ಇಲ್ಲಿ ಈ ಮಾಹಿತಿ ಬಳಸಲಾಗಿದೆ.

1.1 .ಜಾನಪದ ಮತ್ತು ಶಿಕ್ಷಣ ಇವುಗಳ ಸಂಬಂಧ

(ಆಧುನಿಕ ಶಿಕ್ಷಣಕ್ಕೆ ಜನಪದ ಕಲಿಕಾ ವಿಧಾನವೇ ಮೂಲ)

ಮೇಲೆ ತಿಳಿಸಿದಂತೆ 'ಜಾನಪದ' ಎನ್ನುವ ವಿಷಯ ವಾಪ್ತಿಯಲ್ಲಿ 'ಶಿಕ್ಷಣ' ಎನ್ನುವ ಪರಿಕಲ್ಪನೆಯನ್ನು ಕಾಣಲು ಸಾಧ್ಯವಿಲ್ಲ. ಆದರೆ ಆಧುನಿಕ ಪರಿಭಾಷೆಯ ಶಿಕ್ಷಣ ಪ್ರಕ್ರಿಯೆಗಿಂತ ಭಿನ್ನವಾದ ಅಥವಾ ಅದನ್ನು ಹೋಲುವ ಬೋಧನೆ ಮತ್ತು ಕಲಿಕಾ ವಿಧಾನವೊಂದು ಅತ್ಯಂತ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು. ಈ ವಿಧಾನವನ್ನು ಅನೌಪಚಾರಿಕ ಶಿಕ್ಷಣವೆಂದೂ ಕರೆಯಲಾಗಿದೆ. ಅಂದರೆ ಔಪಚಾರಿಕವಾಗಿ ಶಿಕ್ಷಣ ಪದ್ಧತಿಯೊಂದನ್ನು ಜನಪದರು ಅಳವಡಿಸಿಕೊಂಡಿಲ್ಲದಿದ್ದರೂ ತಮ್ಮ ಮುಂದಿನ ತಲೆಮಾರಿನ ಸುಸ್ಥಿರ ಬದುಕಿಗೆ ಪೂರಕವಾದ ಕಲಿಕೆಯುನ್ನು ವರ್ಗಾಯಿಸುವ ಕಾರ್ಯವನ್ನು

ಪ್ರಜ್ಞಾಪೂರ್ವಕವಾಗಿಯೇ ಮಾಡುತ್ತಿದ್ದರು. ಇದು ಯಾವ ಆಧುನಿಕ ಶಿಕ್ಷಣ ಪದ್ಧತಿಗೂ ಕಡಿಮೆ ಎನಿಸಿದ್ದಲ್ಲ.

ಒಂದು ತರಗತಿ ಕೋಣೆ ಅಥವಾ ನಿರ್ದಿಷ್ಟ ಶಿಸ್ತಿಗೆ ಒಳಗಾಗಿಲ್ಲದೇ ನಡೆಯುತ್ತಿದ್ದ ಕಲಿಕೆ ಜನಪದ ಶಿಕ್ಷಣ. ಜಾನಪದ ವಿಚಾರಗಳೇ ಇಲ್ಲಿಯ ಪಠ್ಯ ಎನ್ನುವುದು ಸಾಮಾನ್ಯ ಅಭಿಪ್ರಾಯ. ಆದರೆ ಲಿಖಿತ ರೂಪವನ್ನು ಹೊರತುಪಡಿಸಿ ಮೌಖಿಕವಾದ ಎಲ್ಲಾ ಶೈಕ್ಷಣಿಕ ಮೌಲ್ಯಗಳೂ ಇದರಲ್ಲಿ ಅಡಕವಾಗಿತ್ತು ಎನ್ನುವುದಕ್ಕೆ ಜಾನಪದದ ಅಧ್ಯಯನ ವ್ಯಾಪ್ತಿಯೇ ಉದಾಹರಣೆ. ತುಳು ಜನಪದ ಮೌಖಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಂದಿಗೂ ಅಸ್ತಿತ್ವದಲ್ಲಿ ಇರುವ ಉರಲ್, ಕಬಿತ, ಪಾಡ್ದನ, ಜನಪದ ಕಾವ್ಯ, ಗಾದೆ, ಒಗಟು, ಕತೆ *[1] ಇವೆಲ್ಲವೂ ಇಂದಿನ ಶಿಸ್ತು ಬದ್ದ ಔಪಚಾರಿಕ ಅಧ್ಯಯನಕ್ಕೆ ಕಾರಣವಾಗಿವೆ. ಅಲ್ಲದೇ ಇವೆಲ್ಲವೂ ಒಂದು ನಿರ್ದಿಷ್ಟ ಕಲಿಕಾ ವಿಧಾನದಿಂದಲೇ ವರ್ಗಾವಣೆಗೊಂಡಿವೆ.

ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ರೂಪಿಸಿಗೊಂಡಿರುವ ಕಲಿಕಾ ಹಂತಗಳು ಜನಪದ ಕಲಿಕಾ ವಿಧಾನದಲ್ಲೂ ಇವೆ. ಯಾವುದೇ ಜನಪದ ಮೌಖಿಕ ಸಾಹಿತ್ಯವನ್ನು ಓರ್ವ ಕಲಿಕಾರ್ಥಿ ಕಲಿಯುವಾಗಲೂ ನಿರ್ದಿಷ್ಟವಾದ ಹಂತಗಳನ್ನು ದಾಟುತ್ತಲೇ ಮುಂದಕ್ಕೆ ಹೋಗಬೇಕಾಗಿತ್ತು. ಆದರೆ ಈ ಕಲಿಕಾ ಹಂತಗಳು ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ವಸ್ತುವಿನಿಂದ ವಸ್ತುವಿಗೆ ವ್ಯತ್ಯಾಸವಿದ್ದುದನ್ನು ಗಮನಿಸಬಹುದಾಗಿದೆ. ವ್ಯಕ್ತಿಯ ಆಸಕ್ತಿ, ಸ್ಮರಣಶಕ್ತಿ, ವಸ್ತು (ಸಾಹಿತ್ಯ) ಮತ್ತು ಸಾಹಿತ್ಯದ ಬಳಕೆಯ ಅವಕಾಶಗಳೇ ಕಲಿಕೆಯನ್ನು ನಿರ್ಧರಿಸುವ ಅಂಶಗಳಾಗಿದ್ದವು. ಬಹುತೇಕ ಸಾಹಿತ್ಯಗಳು ವೃತ್ತಿಗೆ ಪೂರಕವಾಗಿ ಬಳಕೆಯಾಗುತ್ತಾ ಇದ್ದುದರಿಂದ ವೃತ್ತಿಯ ನಿರ್ವಹಣೆ ಹೆಚ್ಚಾದಂತೆ ಕಲಿಕೆಯ ಅವಕಾಶ ಮತ್ತು ತೀವ್ರತೆ ಹೆಚ್ಚಾಗುತ್ತಿತ್ತು. ಸಾಮಾನ್ಯವಾಗಿ ಔಪಚಾರಿಕ ಕಲಿಕೆಯಲ್ಲಿ ತರಗತಿ ಕೋಣೆ, ಶಿಕ್ಷಕ, ವಿದ್ಯಾರ್ಥಿ, ವಿಧಾನ(ಪ್ರಾಯೋಗಿಕತೆ), ಮಾಧ್ಯಮ, ಪಠ್ಯವಸ್ತು ಇವೇ ಮೊದಲಾದ ಅಂಶಗಳು ಪ್ರಧಾನ ಪಾತ್ರವಾಗಿ ಕಾಣಸಿಗುತ್ತವೆ. ಇವೆಲ್ಲವನ್ನೂ ಜನಪದ ಸಾಹಿತ್ಯ ಶಿಕ್ಷಣದಲ್ಲೂ ಗುರುತಿಸಬಹುದು.*[2]

ತರಗತಿ ಕೋಣೆ, ಶಿಕ್ಷಕ, ವಿದ್ಯಾರ್ಥಿ

ಗದ್ದೆ ಬೇಸಾಯ, ಭೂತಾರಾಧನೆ ಅಥವಾ ಒಳಾಂಗಣ ಕೆಲಸಗಳ ಪ್ರದೇಶಗಳೇ ಜನಪದ ಸಾಹಿತ್ಯದ ಕಲಿಕೆಯ ತರಗತಿ ಕೋಣೆಗಳು. ಬೇಸಾಯದ ಗದ್ದೆ ಉಳುವಾಗ ಉರಲ್, ನೇಜಿ ತೆಗೆಯುವಾಗ ಪಾಡ್ದನ, ನೆಡುವಾಗ ಕಬಿತ, ಕೊಯ್ಯುವಾಗ ಕತೆ, ಒಗಟು, ಒಟ್ಟು ನಿರ್ವಹಣೆಯ ಮಧ್ಯೆ ಗಾದೆ ಇವು ಬಹುತೇಕ ಸಂದರ್ಭದಲ್ಲಿ ಬಳಕೆಯಾಗುತ್ತವೆ. ಗದ್ದೆಯಲ್ಲಿ ಹಿರಿಯರೆನಿಸಿದ ಅಥವಾ ತಿಳಿದವರೆನಿಸಿದ ವ್ಯಕ್ತಿ(ಗುರು) ಮುಖೇನ ಕಿರಿಯರಿಗೆ ಅಥವಾ ಕೇಳುಗನಿಗೆ(ಕಲಿಕಾರ್ಥಿ)*[3] ಈ ಸಾಹಿತ್ಯಗಳು ವರ್ಗಾವಣೆಗೊಳ್ಳುತ್ತವೆ. ಭೂತಾರಾಧನೆಯಲ್ಲಾದರೆ ಭೂತ(ದೈವ)ದ ವೇಷಭೂಷಣ ಆರಂಭಗೊಂಡಲ್ಲಿಂದ ಅದು 'ಮದಿಪು' ನೀಡುವ ಹಂತದವರೆಗೂ ಪಾಡ್ದನಗಳ ಬಳಕೆ ಬೇರೆಬೇರೆ ಹಂತದಲ್ಲಿ ನಡೆಯುತ್ತದೆ. ಇಲ್ಲಿಯೂ ಹಿರಿಯರು ಕಿರಿಯರಿಗೆ ಕಲಿಸಿ ಕೊಡುತ್ತಾರೆ. ಆಲಿಸುವ ಪ್ರಕ್ರಿಯೆಯೇ ಇಲ್ಲಿಯ ಮುಖ್ಯ ವಿಧಾನ. ಜನಪದ

ಕತೆ, ಗಾದೆ, ಒಗಟುಗಳು ಬಹುತೇಕವಾಗಿ ಸಂದರ್ಭೋಚಿತ ಮತ್ತು ಬಿಡುವಿನ ವೇಳೆಯ ಬಳಕೆಯಾಗುತ್ತದೆ. ಇದಕ್ಕೊಂದು ವಿಶಾಲ ತರಗತಿ ಕೋಣೆಯ ವ್ಯಾಪ್ತಿ ಇರುತ್ತದೆ. ಆದ್ದರಿಂದ ಗದ್ದೆ, ಭೂತ ಕೋಲದ 'ಕೊಡಿಯಡಿ' ಮತ್ತು ಸಂದರ್ಭೋಚಿತ ಬಳಕೆಯಾಗುವ ಮನೆಯ ಚಾವಡಿ ಹಾಗೂ ಇತರ ಪ್ರದೇಶಗಳು ತರಗತಿ ಕೋಣೆಯ ಕಾರ್ಯವನ್ನು ಪೂರೈಸುತ್ತದೆ. ಆಲಿಸುವ ಮತ್ತು ಮಾತನಾಡುವ ಎರಡೂ ಸಾಮರ್ಥ್ಯದ ಸಮರ್ಪಕ ಬಳಕೆಯನ್ನು ಈ ತರಗತಿ ಕೋಣೆಯಲ್ಲಿ ಕಾಣಬಹುದು.

ವಿಧಾನ(ಪ್ರಾಯೋಗಿಕತೆ)

ಪ್ರಾಯೋಗಿಕ(ರಂಗ ತಂತ್ರ) ಕಲಿಕೆಯೇ ಇಲ್ಲಿಯ ಪ್ರಧಾನ ವಿಧಾನ. ಜನಪದ ಸಾಹಿತ್ಯಗಳ ಕಲಿಕೆಯಲ್ಲಿ ಪ್ರಾಯೋಗಿಕತೆಯ ಬಳಕೆಯನ್ನು ಗುರುತಿಸಬಹುದು. ಇದಕ್ಕೆ ಭೂತದ ಕೋಲ ಉತ್ತಮ ಉದಾಹರಣೆ. ಪಾಡ್ದನಗಳನ್ನು ಹಾಡುತ್ತಾ ಒಬ್ಬ ವ್ಯಕ್ತಿ ಒಂದು ಪಾತ್ರವಾಗುವುದು, ಶಿಕ್ಷಣದಲ್ಲಿನ ರಂಗಕಲೆಯ ಪರಿಕಲ್ಪನೆ ಮೂಲರೂಪವೆನ್ನಬಹುದು. ಪಾಡ್ದನದ ಆಶಯಕ್ಕೆ ಪೂರಕವಾಗಿ ಕಲಿಕಾರ್ಥಿ ಅಭಿನಯಿಸುವುದರಿಂದ ಕಲಿಕೆ ಪರಿಣಾಮಕಾರಿಯಾಗುತ್ತದೆ ಮತ್ತು ಕಲಿಕಾ ವೇಗ ಹೆಚ್ಚುತ್ತದೆ. ಇದು ಬೇಸಾಯ ಗದ್ದೆಯಲ್ಲಿಯೂ ಕಂಡುಬರುವುದಿದೆ. ಉದಾ: 'ಈಜೋ ಮಂಜೊಟಿಗೋಣ' *4 ಎನ್ನುವ ಕಬಿತದ ಸಂದರ್ಭದಲ್ಲಿ ಬೇಸಾಯದ ಗದ್ದೆಯಲ್ಲಿ ಹಾಡಿನೊಂದಿಗೆ ಅಭಿನಯವೂ ಪರಿಣಾಮ ಬೀರುತ್ತದೆ ಮತ್ತು ಕಲಿಕೆಗೆ ಹೆಚ್ಚು ಅವಕಾಶ ನೀಡುತ್ತದೆ. ಆದರೆ ಒಂದು ಸಂದರ್ಭಕ್ಕೆ ಅನುಸಾರವಾಗಿ ಗಾದೆಗಳ ಬಳಕೆಯಾಗುತ್ತದೆ. ಅದು ಕಲಿಕಾರ್ಥಿಯ ಮುಂದೆ ಒಂದು ಸನ್ನಿವೇಶವನ್ನು ಸೃಷ್ಟಿಸುವುದರಿಂದ ಕಲಿಕೆ ಸ್ಪಷ್ಟವಾಗುತ್ತದೆ ಹಾಗೂ ನೆನಪಿನ ಕ್ರಿಯೆಗೂ ಸಹಾಯವಾಗುತ್ತದೆ.

ಮಾಧ್ಯಮ

ಬಹುಸಂಖ್ಯಾತರು ಬಳಸುತ್ತಿರುವ ಸ್ಥಳೀಯ ಭಾಷೆಗಳೇ(ತುಳು) ಇಲ್ಲಿಯ ಮಾಧ್ಯಮ. ಸಾಮಾನ್ಯವಾಗಿ ಬಹುಸಂಖ್ಯಾತರು ಬಳಸುವ ಭಾಷೆ ಜನಪದ ಸಾಹಿತ್ಯದ ರಚನೆಯಲ್ಲಿ ಮುಖ್ಯ ಪಾತ್ರ ವಹಿಸಿರುತ್ತದೆ. ತುಳುನಾಡಿಗೆ ಸಂಬಂಧಿಸಿದಂತೆ ತುಳು ಭಾಷೆಯಲ್ಲಿ ಅತೀ ಹೆಚ್ಚಿನ ಜನಪದ ಸಾಹಿತ್ಯಗಳು ಸೃಷ್ಟಿಯಾಗಿವೆ. ತುಳುನಾಡಿನಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮಾತೃಭಾಷೆ ತುಳು ಮತ್ತು ಈ ವರ್ಗವು ವೃತ್ತಿ ಸಂಬಂಧಿ ಚಟುವಟಿಕೆಯಲ್ಲಿ ಹೆಚ್ಚು ತೊಡಗಿಕೊಳ್ಳುವ ಕಾರಣ ತುಳು ಭಾಷಿಕ(ಮಾಧ್ಯಮ) ಸಾಹಿತ್ಯಗಳ ಕಲಿಕೆ ಸುಲಭ ಸಾಧ್ಯವಾಗಿದೆ. ಹಾಗೆಂದು ತುಳುನಾಡಿನಲ್ಲಿ ವಾಸಿಸುತ್ತಿರುವ ಇತರ ಭಾಷಿಕರು ತುಳು ಜನಪದ ಸಾಹಿತ್ಯವನ್ನು ಬಳಸುತ್ತಿಲ್ಲವೆಂದು ಅರ್ಥವಲ್ಲ. ಆದರೆ ತುಳುವರು ಬಳಸುವಷ್ಟೇ ಸ್ಪಷ್ಟ ಹಾಗೂ ಖಚಿತವಾಗಿ ಬಳಸುತ್ತಿದ್ದ ಉದಾಹರಣೆಗಳು ಕಡಿಮೆ. ಆದ್ದರಿಂದ ತುಳು ನಾಡೆಂಬ ಪ್ರಾದೇಶಿಕ ವ್ಯಾಪ್ತಿಯಲ್ಲಿ ತುಳು ಮಾಧ್ಯಮದ ಕಲಿಕೆಗೆ ಹೆಚ್ಚು ಅವಕಾಶವಿದ್ದುದನ್ನು ಗುರುತಿಸಬಹುದು.

ಪಠ್ಯವಸ್ತು

ಐತಿಹ್ಯ, ಇತಿಹಾಸ, ಅತಿಮಾನುಷ ಕಲ್ಪನೆ ಹಾಗೂ ವಾಸ್ತವ ಚಿತ್ರಣಗಳೇ ತುಳು ಜನಪದ ಸಾಹಿತ್ಯ ಕಲಿಕೆಯ ಪಠ್ಯವಸ್ತು. ತುಳುನಾಡು ಎಂದರೆ ಪಶ್ಚಿಮ ಘಟ್ಟ ಹಾಗೂ ಬೋರ್ಗರೆಯುವ ಕಡಲಿನ ಮಧ್ಯದ ಪ್ರದೇಶ. ಅದರೊಂದಿಗೆ ಬಹುತೇಕ ಕಾಡು, ಬೆಟ್ಟಗಳಿಂದ ಆವರಿಸಿದ ಬಯಲುಗಳು, ಮಳೆ ಎಂದರೆ ಭೀಕರ ಮಳೆ, ಬಿಸಿಲೆಂದರೆ ರಣಬಿಸಿಲು. ಒಂದು ರೀತಿಯ ಅಸಹಜ, ಅನುಮಾನಾಸ್ಪದ ವಾತಾವರಣ. ಇದು ಸಹಜವಾಗಿಯೇ ಇಲ್ಲಿ ಅತಿಮಾನುಷ ಶಕ್ತಿಗಳ ಬಗೆಗಿನ ನಂಬಿಕೆಗೆ ಅವಕಾಶ ಮಾಡಿಕೊಟ್ಟಿತು. ಆದ್ದರಿಂದ ಇಲ್ಲಿಯ ಜನಪದ ಸಾಹಿತ್ಯದ ವಸ್ತುಗಳು ಕಾಲ್ಪನಿಕತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿವೆ. ಅತಿಮಾನುಷ ರೂಪದಲ್ಲಿರುವ ಪಾಡ್ದನ, ವಾಸ್ತವ ಚಿತ್ರಣಗಳನ್ನು ವರ್ಣಿಸುವ ಕಬಿತ, ಜೀವನಾನುಭವವನ್ನು ತಿಳಿಸುವ ಗಾದೆ ಒಗಟು, ಕಾಲ್ಪನಿಕಕ್ಕೆ ಒತ್ತು ನೀಡುವ ಕತೆಗಳು ಹೆಚ್ಚು ಸ್ವಾರಸ್ಯಕರವೂ ರಂಜನೀಯವೂ ಆಗಿರುವುದರಿಂದ ಕಲಿಕೆ ಸುಲಭ ಸಾಧ್ಯವಾಗುತ್ತದೆ. ಆದರೆ ಇವೆಲ್ಲವೂ ಜೀವನಾನುಭವದ ಭಾಗವೇ ಆಗಿವೆ. ಆದ್ದರಿಂದ ಪಠ್ಯವಸ್ತುವಿನಲ್ಲಿ ಅತ್ಯಂತ ಸುಲಲಿತವಾದ ರಚನೆಯನ್ನು ಕಾಣಲು ಸಾಧ್ಯವಿದೆ.

ಈ ರೀತಿ ಜನಪದ ಮೂಲದಲ್ಲಿ ಚಾಲ್ತಿಯಲ್ಲಿದ್ದ ಕಲಿಕಾ ವ್ಯವಸ್ಥೆಗಳೆಲ್ಲವೂ ಶೈಕ್ಷಣಿಕ ಸಂಬಂಧವನ್ನು ಪಡೆದುಕೊಂಡಿರುವ ತರಗತಿ ಕೋಣೆ, ಶಿಕ್ಷಕ, ವಿದ್ಯಾರ್ಥಿ, ವಿಧಾನ (ಪ್ರಾಯೋಗಿಕತೆ), ಮಾಧ್ಯಮ, ಪಠ್ಯವಸ್ತು ಇವುಗಳಲ್ಲಿ ನೇರ ಸಂಬಂಧವನ್ನು ಪಡೆದುಕೊಂಡಿವೆ. ಸೃಜನಶೀಲ ಸಾಹಿತ್ಯಕ್ಕೆ ಹೇಗೆ ಜನಪದ ಸಾಹಿತ್ಯ ಮೂಲವಾಗಿದೆಯೋ ಹಾಗೆ ಆಧುನಿಕ ಶಿಕ್ಷಣಕ್ಕೂ ಜನಪದ ಕಲಿಕಾ ವಿಧಾನವೇ ಮೂಲವಾಗಿದೆ.

1.2. ತುಳು ಜನಪದ ಸಾಹಿತ್ಯ ಶಿಕ್ಷಣದ ಲಕ್ಷಣ

ತುಳು ಜನಪದ ಸಾಹಿತ್ಯವೆನ್ನುವುದು ಕರ್ನಾಟಕ ಹಾಗೂ ಜಾಗತಿಕ ಜನಪದ ಸಾಹಿತ್ಯಗಳಿಂತ ಒಂದಷ್ಟು ಭಿನ್ನ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಇಲ್ಲಿ ಕಂಡು ಬರುವ ಪಾಡ್ದನ ಮತ್ತು ಕಬಿತ ಎನ್ನುವ ಪ್ರಕಾರ ಜಾಗತಿಕ ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನಪದ ಕಾವ್ಯಗಳಿಂತ ಭಿನ್ನವಾಗಿವೆ. ಈ ಭಿನ್ನತೆಯನ್ನು ಗಮನಿಸುತ್ತಾ ತುಳು ಜನಪದ ಸಾಹಿತ್ಯದ ಕಲಿಕೆಯ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

1. ತುಳು ಜನಪದ ಸಾಹಿತ್ಯದ ಹುಟ್ಟು-ಬಳಕೆಯ ಹಿಂದೆ ಶ್ರಮ ವಿಭಜನೆಯು ಮುಖ್ಯ ಪಾತ್ರ ವಹಿಸುತ್ತದೆ.
2. ಹಿರಿಯರು ಕಿರಿಯರಿಗೆ ಹೇಳಿಕೊಡುವ ವಿಧಾನ ಜನಪದ ಸಾಹಿತ್ಯ ಶಿಕ್ಷಣದಲ್ಲಿ ಕಂಡುಬರುತ್ತದೆ.
3. ಒಂದು ನಿರ್ದಿಷ್ಟ ಘಟನೆಯ ಸಂದರ್ಭ (ಗದ್ದೆಯ ಉಳುಮೆ, ನಾಟಿ, ಕೊಯಿಲು, ಭೂತಾರಾಧನ, ಸಮಾರಂಭ ಇತ್ಯಾದಿ)ವನ್ನು ಹೊರತುಪಡಿಸಿಯೂ ಜನಪದ ಸಾಹಿತ್ಯದ ಕಲಿಕೆ ನಡೆಯುತ್ತದೆ. ಅಂದರೆ ಬಿಡುವಿನ ವೇಳೆಯಲ್ಲಿ ತಂದೆ, ತಾಯಿ ಅಥವಾ ಬಂಧುಗಳು ತಮ್ಮ ಮಕ್ಕಳಿಗೆ ಅಥವಾ ಕಿರಿಯರಿಗೆ ಹೇಳಿಕೊಡುವ ಕ್ರಮ ಇದೆ.

4. ಜನಪದ ಸಾಹಿತ್ಯ ಶಿಕ್ಷಣ ಸಾಮೂಹಿಕವಾಗಿ ಅಥವಾ ವೈಯಕ್ತಿಕವಾಗಿ ನಡೆಯುವ ಸಂದರ್ಭಗಳೂ ಇವೆ.
5. ಜನಪದ ಸಾಹಿತ್ಯಗಳ ಕಲಿಕೆಯು ಯಾವುದೇ ನಿರ್ದಿಷ್ಟವಾದ ಕಾಲಕ್ಕೆ ಸೀಮಿತವಾಗಿರುವುದಿಲ್ಲ. ಬಿಡುವಿನ ವೇಳೆ ಅಥವಾ ಕೆಲಸದ ವೇಳೆ ಇದು ನಡೆಯುತ್ತದೆ.
6. ಜನಪದ ಸಾಹಿತ್ಯ ಶಿಕ್ಷಣದಲ್ಲಿ ಮುಖ್ಯವಾಗಿ ಎರಡು ಶೈಕ್ಷಣಿಕ ಕೌಶಲಗಳಿಗೆ ಮಾತ್ರ ಆದ್ಯತೆ ನೀಡಲಾಗುತ್ತದೆ. ಅವೆಂದರೆ ಆಲಿಸುವ ಮತ್ತು ಮಾತನಾಡುವ ಕೌಶಲಗಳಿಗೆ ಸಂಬಂಧಿಸಿದ್ದಾಗಿದೆ. ಮೌಖಿಕ ವಿಧಾನ ಮಾತ್ರವಿರುವುದರಿಂದ ಲಿಖಿತ ರೂಪವಾದ ಓದುವ ಮತ್ತು ಬರೆಯುವ ಕೌಶಲಗಳ ಬಳಕೆ ಎಲ್ಲೂ ನಡೆಯುವುದಿಲ್ಲ.
7. ಜನಪದ ಸಾಹಿತ್ಯ ಶಿಕ್ಷಣವು ಮೌಖಿಕ ಸೂತ್ರ ಸಿದ್ಧಾಂತ ಪ್ರಕಾರ ನಡೆಯುತ್ತದೆ.*5 ಜನಪದ ಸಾಹಿತ್ಯ ಶಿಕ್ಷಣ ಸಾಮಾನ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದ ವ್ಯಕ್ತಿ ಮತ್ತು ಜನಾಂಗಗಳ ಮಧ್ಯೆ ನಡೆಯುತ್ತದೆ.
8. ಜನಪದ ಸಾಹಿತ್ಯವು ಒಂದು ನಿರ್ದಿಷ್ಟ ಕಾಲದಲ್ಲಿ ರಚನಗೊಂಡಿದೆ. ಕಲಿಕೆಯ ಹಂತದಲ್ಲಿ ಅದರ ಪಠ್ಯ ಪ್ರದೇಶದಿಂದ ಪ್ರದೇಶಕ್ಕೆ ಮತ್ತು ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ.
9. ತುಳು ಜನಪದ ಸಾಹಿತ್ಯಗಳಾದ ಪಾಡ್ದನ, ಕಬಿತ, ಉರಲ್, ಕತೆ, ಗಾದೆ, ಒಗಟು, ಇವೆಲ್ಲವುಗಳ ವಸ್ತುವಿನಲ್ಲಿರುವ ವ್ಯತ್ಯಾಸಗಳಂತೆ ಕಲಿಕೆಯಲ್ಲಿಯೂ ವ್ಯತ್ಯಾಸವಿದೆ.
10. ಜನಪದ ಸಾಹಿತ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣಕ್ಕೂ ಹೆಚ್ಚಿನ ಆಧ್ಯತೆ ಇತ್ತು. ಅಂದರೆ ವೃತ್ತಿಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಆ ವೃತ್ತಿಯನ್ನು ನಿರ್ವಹಿಸುವ ಹಂತದಲ್ಲಿ ನೀಡಲಾಗುತ್ತಿತ್ತು. ಉದಾ: ಪಾಡ್ದನದಲ್ಲಿ ಬರುವ ಬೇಟೆ, ಬೇಸಾಯ, ಕುಲಕಸುಬುಗಳ ಬಗೆಗಿನ ವಿವರಣೆಗಳು.

ಒಟ್ಟಿನಲ್ಲಿ ಜನಪದ ಸಾಹಿತ್ಯಗಳ ಕಲಿಕೆಯಲ್ಲಿ ಆಲಿಸುವ ಮತ್ತು ಅಭಿವ್ಯಕ್ತಿಸುವ ಸಾಮರ್ಥ್ಯಕ್ಕೆ ಹೆಚ್ಚಿನ ಆದ್ಯತೆ ದೊರಕುತ್ತದೆ. ಅಕ್ಷರದ ಅರಿವಿಲ್ಲದ ಜನ ಪಠ್ಯವನ್ನು ಮತ್ತೆ ಮತ್ತೆ ಓದಿ ತಿಳಿದುಕೊಳ್ಳಲು ಅವಕಾಶವಿಲ್ಲದಿರುವುದರಿಂದ ಅವಕಾಶ ಸಿಕ್ಕಿದಾಗೆಲ್ಲ ಮತ್ತೆ ಮತ್ತೆ ಕೇಳುವ ಕಡೆಗೆ ಗಮನ ಕೊಡಬೇಕಾಗುತ್ತದೆ. ಅಲ್ಲದೇ ಗಮನಿಸಿದ ಅಂಶಗಳನ್ನು ತಮ್ಮದೇ ತಂತ್ರದ ಮೂಲಕ ನೆನಪಿನಲ್ಲಿಟ್ಟು ಅಭಿವ್ಯಕ್ತಿ ಪಡಿಸಬೇಕಾಗುತ್ತದೆ. ಈ ಪ್ರಕ್ರಿಯೆ ನಡೆಯಲು ಒಂದಷ್ಟು ಕಾಲಾವಕಾಶದ ಅಗತ್ಯವೂ ಬೇಕಾಗುತ್ತದೆ

1.3. ಶಿಕ್ಷಣದ ಅರ್ಥ, ಸ್ವರೂಪ, ವಿಧ

ಶಿಕ್ಷಣ ಎಂದರೆ ಏನು ಎಂಬ ಪ್ರಶ್ನೆಗೆ ಜಾಗತಿಕ ಮಟ್ಟದಲ್ಲಿ ಶಿಕ್ಷಣ ಪ್ರಕ್ರಿಯೆ ಹುಟ್ಟಿಕೊಂಡಂದಿನಿಂದ ಇಂದಿನ ವರೆಗೆ ನಿರಂತರ ಚರ್ಚೆ, ವ್ಯಾಖ್ಯಾನ, ವಿವರಣೆ,

ವಿಶ್ಲೇಷಣೆ ನಡೆಯುತ್ತಲೇ ಬಂದಿದೆ. ಆದರೆ ವಾಸ್ತವಿಕವಾಗಿ ಇಂದಿನ ವರೆಗೂ ಇದಮಿತ್ಥಂ ಎನ್ನುವ ಅರ್ಥ ವಿಶ್ಲೇಷಣೆ ಹುಟ್ಟಿಕೊಂಡಿಲ್ಲ. ಕಾರಣ ಶಿಕ್ಷಣದ ವ್ಯಾಪ್ತಿ ಮಾನವ ಯೋಚನೆಗೂ ಮಿಗಿಲಾದುದು. ಆದರೆ ಔಪಚಾರಿಕ ಶಿಕ್ಷಣದ ಪರಿಕಲ್ಪನೆ ಹುಟ್ಟಿಕೊಂಡ ಕ್ರಿಸ್ತಪೂರ್ವದಾದಿಯಿಂದ ಅನೇಕ ತತ್ವಜ್ಞಾನಿಗಳು, ಶಿಕ್ಷಣ ತಜ್ಞರು, ವಿದ್ವಾಂಸರು ಶಿಕ್ಷಣದ ಬಗ್ಗೆ ವಿವರಣೆ ನೀಡುತ್ತಾ ಬಂದಿದ್ದಾರೆ.

ಜರ್ಮನಿಯ ಪ್ರಸಿದ್ಧ ಶಿಕ್ಷಣ ತಜ್ಞರಾದ ಪೆಸ್ಟಾಲಜಿಯವರು ಶಿಕ್ಷಣದ ಅರ್ಥಕ್ಕೆ ತನ್ನದೇ ಆದ ವಿವರಣೆ ನೀಡಿದ್ದಾರೆ, "ಶಿಕ್ಷಣವು ಮನುಷ್ಯನ ಎಲ್ಲ ಶಕ್ತಿಗಳನ್ನೂ ಸ್ವಾಭಾವಿಕವಾಗಿ ವಿಕಾಸಗೊಳಿಸಿ, ಪ್ರಗತಿಶೀಲವಾದ ವಿರೋಧವಿಲ್ಲದ ವಿಕಾಸ ಮಾಡುವುದು." ಗ್ರೀಕ್ ಸುಪ್ರಸಿದ್ಧ ತತ್ವಜ್ಞಾನಿ ಅರಿಸ್ಟಾಟಲ್‌ನ ಪ್ರಕಾರ "ಸ್ವಸ್ಥ ಶರೀರದಲ್ಲಿ ಸ್ವಸ್ಥ ಮಾನವನನ್ನು ನಿರ್ಮಾಣ ಮಾಡುವುದೇ ಶಿಕ್ಷಣ." ಸ್ಟೇಯರ್‌ನ ಪ್ರಕಾರ "ಶಿಕ್ಷಣ ವಿದ್ವಾಂಸರ ಪ್ರಕಾರ ಕಾರ್ಯಗಳಲ್ಲಿ ಬದಲಾವಣೆ ತರುವ ಒಂದು ಶಾಸ್ತ್ರ. ಅಂದರೆ ಶಿಕ್ಷಣವೂ ಶಿಕ್ಷಿತ ಮತ್ತು ಅಶಿಕ್ಷಿತ ವ್ಯಕ್ತಿಯ ಮಧ್ಯೆ ಇರುವ ಅಂತರ". ಭಾರತೀಯ ನೆಲೆಗಟ್ಟಿನಿಂದ ವಿಶ್ಲೇಷಣೆ ಮಾಡಿದ ಸ್ವಾಮಿ ವಿವೇಕಾನಂದರ ಪ್ರಕಾರ "ಮನುಷ್ಯರ ಅಂತರ್ಗತ ಪೂರ್ಣತೆಯ ಅಭಿವ್ಯಕ್ತಿಯೇ ಶಿಕ್ಷಣ." ಜಿ. ಹೆಚ್. ಥಾಂಸನ್‌ರವರ ಪ್ರಕಾರ, "ಶಿಕ್ಷಣವು ಹೊರ ವಾತಾವರಣದ ಪ್ರಕಾರ ಸಮನ್ವಿತ ರೂಪ. ಅದರ ಮೂಲಕ ಮನುಷ್ಯನ ಆಚಾರ ವಿಚಾರ ರೂಢಿ ವ್ಯವಹಾರಗಳ ಸುಧಾರಣೆಯಾಗುತ್ತದೆ. ಅಂದರೆ ಮನುಷ್ಯನ ಉತ್ತಮೋತ್ತಮ ಗುಣಗಳ ವಿಕಾಸವಾಗುತ್ತದೆ." ಶಿಕ್ಷಣ ಒಂದು ಸಾಧನ, ಅದರ ಮೂಲಕ ಪರಿಸ್ಥಿತಿಗಳು ಮತ್ತು ವಾತಾವರಣದ ಮೇಲೆ ವಿಜಯವನ್ನು ಹೊಂದಿ ಒಂದು ಹೊಸ ವಾತಾವರಣವನ್ನು ಸೃಷ್ಟಿ ಮಾಡುತ್ತದೆ. ಆದರೆ ಮೇಲೆ ಹೇಳಿರುವ ವಿವರಣೆಗಳು ಶಿಕ್ಷಣದ ಪೂರ್ಣ ಅರ್ಥವನ್ನು ನೀಡುತ್ತಿಲ್ಲ. ಯಾಕೆಂದರೆ 'ಶಿಕ್ಷಣ' ಎನ್ನುವುದಕ್ಕೆ ಸಂಕುಚಿತ ಮತ್ತು ಬಹಳ ವಿಸ್ತಾರವಾದ ವ್ಯಾಪಕ ಎಂಬ ಎರಡು ಅರ್ಥಗಳಿವೆ.*6

ಸಂಕುಚಿತ ಅರ್ಥ

ಮಗುವಿನ ಹಂತದಲ್ಲಿ 'ಶಿಕ್ಷಣ' ಶಬ್ದವನ್ನು ಸಂಕುಚಿತ ಅರ್ಥದಲ್ಲಿ ಪ್ರಯೋಗ ಮಾಡಲಾಗುತ್ತದೆ. ಅದರ ಪ್ರಕಾರ ಶಿಕ್ಷಣವು ಕೆಲವು ವಿಶೇಷ ಪ್ರಭಾವ ಮತ್ತು ವಿಷಯಗಳ ಅಧ್ಯಯನ. ವಯಸ್ಕ ವರ್ಗದವರು ಯಾವುದು ಜೀವನಕ್ಕೆ ಉಪಯೋಗವಾಗುತ್ತದೆ ಎನ್ನುತ್ತಾರೋ ಅದನ್ನು ಮಾತ್ರ ಮಗುವಿಗೆ ಕಲಿಸಿ ಅದನ್ನು ಶಿಕ್ಷಣ ಎಂದು ಕರೆದಿದ್ದಾರೆ. ಶಿಕ್ಷಣವು ಒಂದು ಪೂರ್ವ ನಿಶ್ಚಿತ ಯೋಜನೆಯ ಪ್ರಕಾರ ಪ್ರಾಪ್ತವಾಗುತ್ತದೆ. ಕೆಲವು ವರ್ಷಗಳು ಮಾತ್ರ ಈ ಶಿಕ್ಷಣವು ಕೊಡಲ್ಪಡುತ್ತದೆ. ಶಾಲಾ ಕಾಲೇಜುಗಳು ಇಂತಹಾ ಶಿಕ್ಷಣದ ಕೇಂದ್ರವಾಗಿವೆ. ಶಿಕ್ಷಕರು ಈ ಶಿಕ್ಷಣದ ಕೇಂದ್ರ ಸ್ಥಾನದಲ್ಲಿರುವವರು. ಪುಸ್ತಕಗಳನ್ನು ಓದುವುದು ಮತ್ತು ಓದಿಸುವುದು ಮಾತ್ರ ಶಿಕ್ಷಣ ಎಂದರ್ಥವಾಗಿದೆ. ಆದರೆ ಕೇವಲ ಓದುವುದರಿಂದ ಮಗುವಿನ ಸರ್ವಾಂಗೀಣ ವಿಕಾಸವಾಗುತ್ತದೆ ಎನ್ನುವ ಖಾತ್ರಿ ಈ ಸಂಕುಚಿತಾರ್ಥದಲ್ಲಿ ಇಲ್ಲ. ಬಾಯಿಪಾಠದ ಪಾಂಡಿತ್ಯ, ವ್ಯವಹಾರ ಜ್ಞಾನದ ಕೊರತೆ,

ಮಾನಸಿಕ ಮತ್ತು ಚಾರಿತ್ರಿಕ ವಿಕಾಸಶೀಲ ಗುಣ ಇರುವುದಿಲ್ಲ. ಆದುದರಿಂದ ಇದನ್ನು ಶಿಕ್ಷಣ ಎಂದು ಹೇಳದೇ ಅಧ್ಯಾಪನ ಮತ್ತು ನಿರ್ದೇಶನ ಎಂದು ಹೇಳಬಹುದು ಎಂದು ಅನೇಕ ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ವ್ಯಾಪಕ ಅರ್ಥ

ವ್ಯಾಪಕ ಅರ್ಥದಲ್ಲಿ ಶಿಕ್ಷಣವು ಒಂದು ಕ್ರಿಯೆ. ಅದರ ಮೂಲಕ ಮನುಷ್ಯನ ಜೀವನ ವಿಕಾಸವಾಗುತ್ತದೆ. ಪರಿಸ್ಥಿತಿಗಳ ಮೇಲೆ ವಿಜಯವನ್ನು ಗಳಿಸುತ್ತಾನೆ. ಪ್ರಸಿದ್ಧ ಶಿಕ್ಷಣ ತಜ್ಞರಾದ ಡಿ. ರೇಮೆಂಟ್‌ರವರ ಪ್ರಕಾರ, "ಶಿಕ್ಷಣವು ಒಂದು ವಿಕಾಸ ಕ್ರಮವಾಗಿದೆ. ಅದರ ಮೂಲಕ ಮನುಷ್ಯ ತನ್ನ ಅವಶ್ಯಕತೆಗೆ ಅನುಸಾರವಾಗಿ ಭೌತಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ವಾತಾವರಣವನ್ನು ಬದಲಾಯಿಸುತ್ತಾನೆ. ಈ ಶಿಕ್ಷಣದ ಕಾರ್ಯ ಜೀವನ-ಪರ್ಯಂತ ನಡೆಯುತ್ತಲೇ ಇರುತ್ತದೆ. ಅಂದರೆ ಹುಟ್ಟಿನಿಂದ ಸಾವಿನವರೆಗೆ ಜರುಗುತ್ತದೆ. ಸಂಪೂರ್ಣ ಜೀವನವೇ ಶಿಕ್ಷಣದ ಸಮಯವಾಗಿದೆ." ವ್ಯಕ್ತಿ ತನ್ನ ತಂದೆ ತಾಯಿ, ಸೋದರ ಸೋದರಿಯರು, ಅಧ್ಯಾಪಕರು, ಮಿತ್ರರು ಮತ್ತು ನೆರೆಹೊರೆಯವರಿಂದ ಪ್ರತಿಕ್ಷಣವು ಏನಾದರೂ ಒಂದು ಕಲಿಯುತ್ತಿರುತ್ತಾನೆ. ಇದು ಮನೆ ಮತ್ತು ಸ್ಕೂಲಿಗೆ ಮಾತ್ರ ಸೀಮಿತವಾದುದ್ದಲ್ಲ. ಜಡ ಪ್ರಕೃತಿಯಿಂದ ಕೂಡ ಅವನು ಶಿಕ್ಷಣವನ್ನು ಗ್ರಹಿಸುತ್ತಾನೆ. ಜೀವನದಲ್ಲಿ ಅನೇಕಾನೇಕ ಸಮಸ್ಯೆಗಳನ್ನು ಬಗೆಹರಿಸಿ, ಕರ್ತವ್ಯವನ್ನು ಪಾಲಿಸುತ್ತಾನೆ. ಹೀಗೆ ಶಿಕ್ಷಣದ ಅರ್ಥ ಬಹಳ ವ್ಯಾಪಕವಾದದ್ದು. ರೂಸೋ ಮತ್ತು ವರ್ಡ್ಸವರ್ತ್, ಪ್ರಕೃತಿವಾದದ ಮೂಲಕ ಶಿಕ್ಷಣವನ್ನು ಪಡೆಯಬೇಕೆಂದು ಒತ್ತಾಯಪಡಿಸಿದ್ದಾರೆ. ಇವರು ಹೇಳಿರುವಂತೆ, ಪ್ರಪಂಚದ ಎಲ್ಲಾ ವ್ಯಕ್ತಿಗಳು ಶಿಕ್ಷಣಾರ್ಥಿಗಳು ಮತ್ತು ಶಿಕ್ಷಕರು. ಅಂದರೆ ಮನುಷ್ಯ ಸ್ವತಃ ಕಲಿಯುತ್ತಾನೆ ಮತ್ತು ಬೇರೆಯವರಿಗೂ ಕಲಿಸುತ್ತಾನೆ.

ಶಿಕ್ಷಣ ಶಬ್ದವು ಸಂಸ್ಕೃತದ "ಶಿಕ್ಷ್" ಧಾತುವಿನಿಂದ ಹುಟ್ಟಿಕೊಂಡಿದೆ. ಇದರ ಅರ್ಥ ಕಲಿಯುವುದು. ಕಲಿಯುವ ಪ್ರಕ್ರಿಯೆಯು ಶಿಕ್ಷಕ, ವಿದ್ಯಾರ್ಥಿ ಮತ್ತು ಪಠ್ಯಕ್ರಮದ ಮೂಲಕ ಜರುಗುತ್ತದೆ. ಮಹಾತ್ಮ ಗಾಂಧಿಯವರು ಶಿಕ್ಷಣವನ್ನು "ಸರ್ವಾಂಗೀಣ ವಿಕಾಸ ಅಂದರೆ ಶಾರೀರಿಕ, ಆಧ್ಯಾತ್ಮಿಕ ಮತ್ತು ಮಾನಸಿಕ ವಿಕಾಸದ ಪ್ರಕ್ರಿಯೆ" ಎಂದು ಹೇಳಿದ್ದಾರೆ.

ಶಿಕ್ಷಣವನ್ನು ಆಂಗ್ಲ ಭಾಷೆಯಲ್ಲಿ 'ಎಜ್ಯುಕೇಷನ್' ಎಂದು ಕರೆಯುತ್ತಾರೆ. ಲ್ಯಾಟಿನ್ ಭಾಷೆಯ 'ಎಜುಕೇರ್' ಎಂಬ ಶಬ್ದದಿಂದ 'ಎಜ್ಯುಕೇಷನ್' ಶಬ್ದ ಬಂದಿದೆ. ಅದರ ಅರ್ಥ ಶಿಕ್ಷಣವನ್ನು ಕೊಡುವುದು. 'ಎಜ್ಯು' ಅಂದರೆ ಒಳಗಿಂದ, 'ಕೇಷನ್' ಎಂದರೆ ಮುಂದುವರಿಯುವುದು, ಆದುದರಿಂದ ಎಜ್ಯುಕೇಷನ್ ಎಂದರೆ ಆಂತರಿಕ ಶಕ್ತಿಗಳನ್ನು ಹೊರಬರುವಂತೆ ಮಾಡಿ ವಿಕಾಸಗೊಳಿಸುವುದು ಎಂದು ಅರ್ಥ. ಜ್ಞಾನವನ್ನು ಒಳಗೆ ಹೇರುವುದಲ್ಲ. ಶಿಕ್ಷಣದ ಉದ್ದೇಶ ಆಂತರಿಕ ಶಕ್ತಿಗಳ ಸರ್ವಾಂಗೀಣ ವಿಕಾಸ. ಎಡಿಸನ್ ಅವರ ಪ್ರಕಾರ, "ಶಿಕ್ಷಣ ಒಂದು ಕ್ರಿಯೆ ಅದರ ಮೂಲಕ ಮನುಷ್ಯ ತನ್ನಲ್ಲಿ ಅಡಗಿರುವ ಶಕ್ತಿಗಳು ಮತ್ತು ಗುಣಗಳನ್ನು ನೋಡುತ್ತಾನೆ. ಇವುಗಳು ಶಿಕ್ಷಣದ ಮೂಲಕವೇ ಸಾಧ್ಯ. ನಿರ್ದೇಶನವೆಂದರೆ ಕಲಿಸುವುದರ ಮೂಲಕ ಮಗುವಿಗೆ ಜ್ಞಾನವನ್ನು

ಆರ್ಜಿಸುವಂತೆ ಮಾಡುವುದು. ಅಧ್ಯಾಪನ ಮಾಡಿಸುವಾಗ ಅನೇಕ ವಿಧಿಗಳನ್ನು ಪ್ರಯೋಗಿಸುತ್ತಾರೆ. ಇದರಲ್ಲಿ ಜ್ಞಾನ ಒಳಗಿನಿಂದ ಉತ್ಪತ್ತಿಯಾಗುವುದಿಲ್ಲ. ಅಧ್ಯಾಪಕ ಜ್ಞಾನವನ್ನು ಮಗುವಿಗೆ ವರ್ಗಾಯಿಸುತ್ತಾನೆ. ಮಗುವು ಜ್ಞಾನವನ್ನು ಪಡೆಯಲಿ ಅಥವಾ ಪಡೆಯದಿರಲಿ ಅವನ ಮೇಲೆ ಹೇರುವುದು ಶಿಕ್ಷಕರ ಗುರಿಯಾಗಿರುತ್ತದೆ. ಆದುದರಿಂದ ಇದು ನಿಜವಾದ ಶಿಕ್ಷಣವಾಗುವುದಿಲ್ಲ. ಮಗುವು ಜ್ಞಾನದ ಅನ್ವೇಷಣೆ ಮಾಡಿ, ತನಗೆ ತಾನೇ ಕಲಿಯುವಂತೆ ಮಾಡುವುದು ನಿಜವಾದ ಶಿಕ್ಷಣ.

ಆಡ್ಯಂ ಶಿಕ್ಷಣವನ್ನು 'ದ್ವಿಮುಖ' ಪ್ರಕ್ರಿಯೆ ಎಂದಿದ್ದಾರೆ. ಅವರ ಪ್ರಕಾರ ಶಿಕ್ಷಣದಲ್ಲಿ ಎರಡು ಅಂಗಗಳಿವೆ. ಒಂದು ಮಗು, ಇನ್ನೊಂದು ಶಿಕ್ಷಕ. ಶಿಕ್ಷಣ ಪಡೆಯುವಾಗ ಇವರ ಮಧ್ಯೆ ಆಧಾನ ಪ್ರಧಾನವಾಗುತ್ತದೆ. ಶಿಕ್ಷಕನು ತನ್ನ ವ್ಯಕ್ತಿತ್ವದ ಮೂಲಕ ಮತ್ತು ಜ್ಞಾನದ ವಿಭಿನ್ನ ಅಂಗಗಳ ಮೂಲಕ ಮಗುವಿನ ಆಚಾರ ವಿಚಾರಗಳಲ್ಲಿ ಪರಿವರ್ತನೆಯನ್ನು ತರುತ್ತಾನೆ. ಇದರಿಂದ ಮಗುವಿನ ವಿಕಾಸವಾಗುತ್ತದೆ. ಈ ಪರಿವರ್ತನೆ ಸ್ಕೂಲಿಗೆ ಸೀಮಿತವಾಗದೆ ಜೀವನ ಪರ್ಯಂತ ನಡೆಯುತ್ತದೆ. ಈ ರೀತಿ ಶಿಕ್ಷಣವು ಅತಿ ಸೂಕ್ಷ್ಮವಾದ ಮತ್ತು ಉತ್ತಮವಾದ ಉಚ್ಚ ಸ್ಥಾನವನ್ನು ಪಡೆದಿದೆ. ಡ್ಯೂಯಿಯವರ ಪ್ರಕಾರ, "ಶಿಕ್ಷಣ ಒಂದು ಪ್ರಕ್ರಿಯೆ, ಮನೋ ವಿಜ್ಞಾನ ಮತ್ತು ಸಮಾಜ ಅದರ ಎರಡು ಮುಖಗಳು. ಇವೆರಡರಿಂದಲೇ ಮಗುವಿನ ವಿಕಾಸವಾಗುತ್ತದೆ. ಮಗುವಿನ ಮೂಲ ಪ್ರವೃತ್ತಿ ಮತ್ತು ಶಕ್ತಿಗಳನ್ನು ಮನೋ ವೈಜ್ಞಾನಿಕ ಅಂಗಗಳು ಬೆಳೆಸುತ್ತವೆ. ಸಾಮಾಜಿಕ ಅಂಗದ ಮೂಲಕ ಅವನು ಕ್ರಿಯಾಶೀಲನಾಗಿ, ಶಿಕ್ಷಣವನ್ನು ಪಡೆಯುತ್ತಾನೆ. ಏಕೆಂದರೆ ಮನುಷ್ಯ ಒಂದು ಸಾಮಾಜಿಕ ಪ್ರಾಣಿ, ಸಮಾಜದಿಂದಲೇ ಎಲ್ಲವನ್ನೂ ಕಲಿಯುತ್ತಾನೆ. ಮಗು ಸಮಾಜದ ಅಂಗ. ಸಾಮಾಜಿಕ ವಾತಾವರಣದಲ್ಲೇ ಮಗುವಿನ ವಿಕಾಸವಾಗುತ್ತದೆ. ಹೀಗೆ ಶಿಕ್ಷಕ, ವಿದ್ಯಾರ್ಥಿ ಮತ್ತು ಸಮಾಜ ಎಂಬ ತ್ರಿಭುಜ ಪ್ರಕ್ರಿಯೆ (Tripolar Process)ಆಗುತ್ತದೆ" ಎಂದು ಹೇಳುತ್ತಾರೆ. ಮೇಲೆ ಹೇಳಿರುವ ವಿಚಾರಗಳಿಂದ ತಿಳಿಯುವುದೇನೆಂದರೆ "ಶಿಕ್ಷಣ ಒಂದು ಸವಿಚಾರ ಪ್ರಕ್ರಿಯೆ, ಅದರ ಮೂಲಕ ವ್ಯಕ್ತಿಯ ಆಚಾರ-ವಿಚಾರ ವ್ಯವಹಾರಗಳಲ್ಲಿ ಪರಿವರ್ತನ, ವ್ಯಕ್ತಿ ಮತ್ತು ಸಮಾಜದ ಏಳಿಗೆ ಆಗುತ್ತದೆ.*7

ಶಿಕ್ಷಣವು ಜ್ಞಾನ ಅಥವಾ ಅನುಭವಗಳ ಸಂಕಲನ. ಮಾತ್ರವಲ್ಲ ಮನಸ್ಸಿನ ವಿಶಿಷ್ಟ ಮತ್ತು ಸಾಮಾನ್ಯ ಯೋಗ್ಯತೆಗಳ ವಿಕಾಸ. 'ಎಜುಕೇಷನ್' ಶಬ್ದಕ್ಕೆ ನಿರ್ದೇಶನ (Instruction), ವಿದ್ಯಾಲಯೀಕರಣ (Schooling), ಟ್ಯೂಶನ್ (Tuition), ಪ್ರಶಿಕ್ಷಣ (Training), ಅನುಶಾಸನ ಅಥವಾ ವಿನಯ (Discipline), ಶಿಕ್ಷಣ (Teaching), ಪಾಲನ-ಪೋಷಣೆ, (Breeding) ಸಂಸ್ಕೃತಿ (Culture) ಮುಂತಾದ ಶಬ್ದಗಳಿಗೆ ಸಮಾನಾರ್ಥಕ ಪದಗಳೆಂದು ಪರಿಗಣಿಸಿದ್ದಾರೆ.

ಶಿಕ್ಷಣದ ಸ್ವರೂಪ

ಶಿಕ್ಷಣವು ಒಂದು ಪ್ರಕ್ರಿಯೆ. ಇದರ ಪ್ರಮುಖ ಸ್ವರೂಪವನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಶಿಕ್ಷಣವು ಒಂದು ಸದಾಚಾರ ಪ್ರಕ್ರಿಯೆ.
2. ಶಿಕ್ಷಣ ಪ್ರಕ್ರಿಯೆ ಉದ್ದೇಶ ಪೂರ್ವಕವಾದುದು.
3. ಈ ಉದ್ದೇಶ ಪರಿವರ್ತನೆ ಮತ್ತು ವಿಕಾಸಕ್ಕೆ ಸಂಬಂಧಪಟ್ಟದ್ದಾಗಿದೆ.
4. ಶಿಕ್ಷಣ ಕಲಿಸುವ ಮತ್ತು ಕಲಿಕೆಯ ಪ್ರಕ್ರಿಯೆ.
5. ಶಿಕ್ಷಣ ಪ್ರಕ್ರಿಯೆ ವಿದ್ಯಾರ್ಥಿ ಮತ್ತು ಅಧ್ಯಾಪಕರ ಮಧ್ಯೆ ನಡೆದರೆ ಅದನ್ನು 'ದ್ವಿಮುಖ' ಪ್ರಕ್ರಿಯೆ ಎಂದು ಹೇಳುತ್ತಾರೆ.
6. ಈ ಪ್ರಕ್ರಿಯೆ ವಿದ್ಯಾರ್ಥಿ, ಅಧ್ಯಾಪಕ, ಪಠ್ಯ ವಸ್ತುಗಳ ಮಧ್ಯೆ ನಡೆದರೆ 'ತ್ರಿಮುಖ' ಪ್ರಕ್ರಿಯೆ ಎಂದಾಗುತ್ತದೆ.
7. ನಿಜವಾದ ಅರ್ಥದಲ್ಲಿ ಶಿಕ್ಷಣವು ಬಹುಮುಖಿ ಪ್ರಕ್ರಿಯೆ ಲೋಕತಂತ್ರದ ವಾತಾವರಣದಲ್ಲಿ ವಿದ್ಯಾಲಯ ಮತ್ತು ಶಿಕ್ಷಕರ ಗೋಜಿಲ್ಲದೆ, ಸ್ವತಃ ಕಲಿಯುವುದೇ ಇದರ ಪ್ರಕ್ರಿಯೆಯಾಗಿದೆ. ಶಿಕ್ಷಣದ ಮೂಲಕ ಸ್ವತಂತ್ರವಾಗಿ ಕಂಡು ಹಿಡಿಯುವುದು ಮತ್ತು ಸೃಜನಾತ್ಮಕ ಕಾರ್ಯವನ್ನು ಮಾಡುವುದೇ ಆಗಿದೆ.

ಶಿಕ್ಷಣದ ವಿಧಗಳು

1. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ : ಔಪಚಾರಿಕ ಶಿಕ್ಷಣವನ್ನು ನಿಯಮಿತ ಶಿಕ್ಷಣವೆಂದು ಕರೆಯುತ್ತಾರೆ. ಇದು ವಿಚಾರಪೂರ್ವಕವಾಗಿ ತಿಳಿದುಕೊಂಡು ಕೊಡಲ್ಪಡುತ್ತದೆ. ಮಗುವು ಈ ಶಿಕ್ಷಣವನ್ನು ಅರ್ಥ ಮಾಡಿಕೊಂಡೆ ಕಲಿಯುತ್ತಾನೆ. ಈ ಶಿಕ್ಷಣದ ಯೋಜನೆಯನ್ನು ಮೊದಲೇ ಯೋಜಿಸಲ್ಪಟ್ಟು ಅದರ ಲಕ್ಷ್ಯಗಳನ್ನು ನಿರ್ಧರಿಸುತ್ತಾರೆ. ವಿದ್ಯಾರ್ಥಿಗಳಿಗೆ ನಿಶ್ಚಿತ ಸಮಯದಲ್ಲಿ, ನಿಯಮಿತ, ನಿಶ್ಚಿತ, ಜ್ಞಾನವನ್ನು ಕೊಡಲ್ಪಡುತ್ತದೆ. ಇದನ್ನು ಶಾಲಾ,ಕಾಲೇಜುಗಳಲ್ಲಿ ಕೊಡುವ ವ್ಯವಸ್ಥೆ ಇದೆ.

ಅನೌಪಚಾರಿಕ ಶಿಕ್ಷಣ ಮಗುವಿನ ಆರನೆಯ ತಿಂಗಳಿನಿಂದಲೇ ಪ್ರಾರಂಭವಾಗುತ್ತದೆ. ತಾಯಿಯ ಮೂಲಕವೇ ಈ ಶಿಕ್ಷಣ ಪ್ರಾರಂಭವಾಗುತ್ತದೆ. ಈ ಶಿಕ್ಷಣವು ಅನಾಯಾಸವಾಗಿ, ಆಕಸ್ಮಿಕವಾಗಿ ದೊರಕುತ್ತದೆ. ಇದು ಜೀವನ ಪರ್ಯಂತ ನಡೆಯುತ್ತಿರುತ್ತದೆ. ಮಗು ಮನೆಯಲ್ಲಿ, ಮನೆಯ ಹೊರಗೆ, ಆಟದ ಮೈದಾನದಲ್ಲಿ ಮಿತ್ರರೊಂದಿಗೆ ಮಾತನಾಡುತ್ತಿರುವಾಗ, ಎದ್ದಾಗ, ಕುಳಿತಾಗ ಪ್ರತಿಕ್ಷಣ ಜ್ಞಾನವನ್ನು ಪಡೆದುಕೊಳ್ಳುತ್ತಿರುತ್ತಾನೆ. ತಂದೆ ತಾಯಿ, ಅಕ್ಕ, ತಂಗಿಯರು, ಮಿತ್ರರು ಪಡೆದಿರುವ ಜ್ಞಾನವನ್ನು ಅನುಕರಣೆ ಮಾಡಿ ಕಲಿಯುತ್ತಾನೆ. ಈ ಶಿಕ್ಷಣಕ್ಕೆ ನಿಶ್ಚಿತ ಸಮಯ, ನಿಶ್ಚಿತ ಜ್ಞಾನ ಮತ್ತು ನಿಶ್ಚಿತ ಯೋಜನೆ ಇರುವುದಿಲ್ಲ. ಪರಿವಾರ, ಧರ್ಮ, ಸಮಾಜ, ರಾಜ್ಯ, ಮಾಧ್ಯಮ, ಆಟದ ಮೈದಾನ, ಮಿತ್ರರ ಸಮೂಹ ಮುಂತಾದವುಗಳಲ್ಲಿ ಜ್ಞಾನರ್ಜನೆ ನಡೆಯುತ್ತಿರುತ್ತದೆ.

2. ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಶಿಕ್ಷಣ : ಪ್ರತ್ಯಕ್ಷ ಶಿಕ್ಷಣವನ್ನು ವೈಯುಕ್ತಿಕ ಶಿಕ್ಷಣವೆಂದು

ಕರೆಯುತ್ತಾರೆ. ಇದು ಅಧ್ಯಾಪಕರ ಮೂಲಕ ವಿದ್ಯಾರ್ಥಿಗಳಿಗೆ ಲಭಿಸುತ್ತದೆ. ಅಧ್ಯಾಪಕರು ತಮ್ಮ ಜ್ಞಾನ, ಉದ್ದೇಶಗಳ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಪ್ರಭಾವಗೊಳ್ಳುವಂತೆ ಮಾಡುತ್ತಾರೆ. ಅಪ್ರತ್ಯಕ್ಷ ಶಿಕ್ಷಣವನ್ನು **Impersonal Education** ಅವೈಯುಕ್ತಿಕ ಶಿಕ್ಷಣ ಎಂದೂ ಕರೆಯುತ್ತಾರೆ. ಇದು ವಿಭಿನ್ನ ಪ್ರಕಾರದ ಅಪ್ರತ್ಯಕ್ಷ ಸಾಧನಗಳ ಮೂಲಕ ದೊರಕುತ್ತದೆ.

3. ವೈಯುಕ್ತಿಕ ಮತ್ತು ಸಾಮೂಹಿಕ ಶಿಕ್ಷಣ : ವೈಯುಕ್ತಿಕ ಶಿಕ್ಷಣವು ಒಬ್ಬ ಮಗುವಿಗೆ ಸಂಬಂಧಪಟ್ಟದ್ದು. ಈ ಶಿಕ್ಷಣವು ಒಬ್ಬ ಬಾಲಕನಿಗೆ ಮಾತ್ರ ನೀಡಲ್ಪಡುತ್ತದೆ. ಮಗುವಿನ ಅಭಿರುಚಿ, ಪ್ರಕೃತಿ, ಯೋಗ್ಯತೆ, ವೈಯುಕ್ತಿಕ ಭಿನ್ನತೆ ಮುಂತಾದವುಗಳನ್ನು ದೃಷ್ಟಿ ಪಥದಲ್ಲಿಟ್ಟು ಶಿಕ್ಷಣ ನೀಡಲ್ಪಡುತ್ತದೆ. ಇದಕ್ಕೆ ಅನುಕೂಲವಾಗುವಂತಹ ಶಿಕ್ಷಣ ವಿಧಿಗಳನ್ನು ಅನುಸರಿಸುತ್ತಾರೆ. ಈ ವಿಧಿಗಳನ್ನು ಬಾಲಕೇಂದ್ರಿತ ವಿಧಿಗಳೆಂದು ಕರೆಯುತ್ತಾರೆ. ಸಾಮೂಹಿಕ ಶಿಕ್ಷಣವು ಮಗು ಸಮೂಹಕ್ಕೆ ಕೊಡಲ್ಪಡುತ್ತದೆ. ಇದು ತರಗತಿಯ ಶಿಕ್ಷಣವೂ ಹೌದು. ಇದರಲ್ಲಿ ವ್ಯಕ್ತಿಗತ ಅಭಿರುಚಿಗಳು, ಪ್ರವೃತ್ತಿಗಳು, ಯೋಗ್ಯತೆಗಳು ಮತ್ತು ವೈಯುಕ್ತಿಕ ಭಿನ್ನತೆಗಳು ಗಮನದಲ್ಲಿಡುವುದಿಲ್ಲ. ಇದನ್ನು ಎಲ್ಲ ದೇಶಗಳಲ್ಲೂ ಅನುಸರಿಸುತ್ತಿದ್ದಾರೆ.

*1 ತುಳುವಿನಲ್ಲಿ ಮುಖ್ಯವಾಗಿ ಇರುವ ಸಾಹಿತ್ಯಗಳು ಇವುಗಳಾಗಿವೆ. ಇದರ ಹೊರತಾಗಿ ಇಲ್ಲಿ ಬೇರೆಯಾವುದಿದ್ದರೂ ಪರಿಗಣಿಸಿರುವುದಿಲ್ಲ.

*2 ಇದು ಗುರುತಿಸಬಹುದಾದುದೇ ಹೊರತು,ಅದಿಕೃತವಾದುದೇನೂ ಅಲ್ಲ.

*3 ವಿದ್ಯಾರ್ಥಿಗೆ ಪ್ರಸ್ತುತ ಅಧ್ಯಯನದಲ್ಲಿ ಕಲಿಕಾರ್ಥಿ ಎಂದು ಕರೆಯಲಾಗಿದೆ.

*4 ಇದು ಒಂದು ಉದಾಹರಣೆ ಮಾತ್ರವಾಗಿದೆ.ಇಂತಹಾ ಅನೇಕ ಉದಾಹಣೆಗಳು ಪಾಡ್ದನ,ಕಬಿತದಲ್ಲಿದೆ

*5 ಮುಂದಿನ ಅಧ್ಯಾಯದಲ್ಲಿ ಈ ಸಿದ್ಧಾಂತದ ವಿವರಣೆ ಹಾಗೂ ವಿಶ್ಲೇಷಣೆ ನೀಡಲಾಗಿದೆ.

*6 ಭಾಷೆ ಮತ್ತು ಭಾಷಾ ಬೋಧನೆ –ಡಾ.ಆರ್.ಓಬಳೇಶಘಟ್ಟಿ

*7 ಶಿಕ್ಷಣ ಸಿದ್ಧಾಂತ–ಡಾ.ಎಸ್.ಕೇಶವ ಮೂರ್ತಿ

ಅಧ್ಯಾಯ 2

ಜನಪದ ಸಾಹಿತ್ಯ ಕಲಿಕೆ– ತಂತ್ರ ಮತ್ತು ವಿನ್ಯಾಸ

ಪೀಠಿಕೆ

ಈ ಅಧ್ಯಯನದ ಪ್ರಧಾನ ಅಧ್ಯಾಯ ಜನಪದ ಸಾಹಿತ್ಯ ಕಲಿಕೆಯ ತಂತ್ರ ಮತ್ತು ಅದರ ವಿನ್ಯಾಸಕ್ಕೆ ಸಂಬಂಧಿಸಿದ್ದಾಗಿದೆ. ಇಲ್ಲಿ ತುಳು ಜನಪದ ಸಾಹಿತ್ಯ ಪ್ರಕಾರಗಳಾದ ಉರಲ್, ಕಬಿತ, ಪಾಡ್ದನ, ಜನಪದ ಕಾವ್ಯ, ಗಾದೆ, ಒಗಟು ಮತ್ತು ಕತಾ ಪ್ರಕಾರವನ್ನು ಹೇಗೆ ಒಬ್ಬ ಕಲಿಕಾರ್ಥಿ ಕಲಿಯುತ್ತಾನೆ ಮತ್ತು ಜನಪದ ವಕ್ತೃ ಹೇಗೆ ಅದನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುತ್ತಾನೆ ಎನ್ನುವುದನ್ನು ದೇಶಿಯ ಮತ್ತು ಪಾಶ್ಚಾತ್ಯ ಸಿದ್ಧಾಂತದ ಹಿನ್ನಲೆಯಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯ ಜೊತೆಗೆ ಈ ಸಾಹಿತ್ಯದ ಲಕ್ಷಣ ಅದು ಕಲಿಕಾರ್ಥಿಯ ಕಲಿಕೆಗೆ ಹೇಗೆ ಪೂರಕವಾಗಿರುತ್ತದೆ ಎನ್ನುವುದನ್ನೂ ವಿವರಿಸಲಾಗಿದೆ.

2.1. ಉರಲ್

ತುಳು ಜನಪದ ಗೀತ ಪ್ರಕಾರಗಳಲ್ಲಿ ಕಂಡುಬರುವ ಕೆಲಸದ ಹಾಡುಗಳಲ್ಲೊಂದು ಉರಲ್. ಗಂಡಸರು ಗದ್ದೆ ಉಳುವಾಗ ಎರಡು ಸಾಲುಗಳ ಹಾಡು ಹೇಳಿ ಓ ಓ ಓ....... ಎಂದು ದೀರ್ಘವಾಗಿ ರಾಗ ಎಳೆಯುವ ಈ ದ್ವಿಪದಿಗೆ ಉರಲ್ ಎನ್ನುತ್ತಾರೆ. ಉರಲ್,ಉರಾಲ್,ಒರಳ್ ಎಂದೆಲ್ಲಾ ಕರೆಯುವ ಈ ಪದಕ್ಕೆ ಗದ್ದೆ ಉಳುವಾಗ ಎತ್ತು ಅಥವಾ ಕೋಣಗಳನ್ನು ಹುರಿದುಂಬಿಸಲು ಹಾಡುವ ಚುಟುಕು ಕವನ ಎಂದರ್ಥವಿದೆ. ದ್ರಾವಿಡ ಭಾಷೆಯಲ್ಲಿ 'ಉರ್' ಅಂದರೆ ಉಳುಮೆ ಎಂದರ್ಥ. 'ಅಲ್/ಅಲೆ' ಅಂದರೆ ತೆರೆ. ಉರಲ್ ಅಂದರೆ ಉಳುಮೆಯ ಅವಧಿಯಲ್ಲಿ ತೆರೆಯಂತೆ ಹೊಮ್ಮುವ ಹಾಡು. ಪ್ರಾಣಿಗಳೊಂದಿಗೆ ಸಂವಹನವೆಂಬಂತೆ ಹಾಡುವ ಈ ಹಾಡನ್ನು ಎತ್ತು ಅಥವಾ ಕೋಣಗಳ ಜೊತೆಗಿರುವಾಗ ಮಾತ್ರ ಹಾಡಲಾಗುತ್ತದೆ.

ಛಂದಸ್ಸಿನ ದೃಷ್ಟಿಯಿಂದ ಉರಲ್ ದ್ವಿಪದಿಯ ವರ್ಗಕ್ಕೆ ಸೇರುತ್ತದೆ. ಪದಗಳ ರಚನೆ ಬಹಳ ಸರಳವಾಗಿದ್ದು, ನೈಜಜೀವನಕ್ಕೆ ಹತ್ತಿರದ್ದಾಗಿದೆ. ಇಲ್ಲಿ ಉಳುಮೆಗಾರನ ಭಾವನೆಗೆ ಹೆಚ್ಚು ಆಸ್ಪದವಿರುವ ಕಾರಣ ಒಬ್ಬ ಹಾಡಿದ ಉರಲನ್ನೇ ಇನ್ನೊಬ್ಬನೂ ಹಾಡುತ್ತಾನೆಂಬ ಖಾತ್ರಿ ಏನೂ ಇಲ್ಲ. ಆದರೆ ರಾಗ ಮತ್ತು ಹಾಡಿನ ಲಯ ಏಕ ಪ್ರಕಾರದ್ದಾಗಿದೆ. ಉರಲ್‌ಗಳ ರಾಚನಿಕ ಸ್ವರೂಪಕ್ಕೂ ಆ ಕೆಲಸಕ್ಕೂ ನೇರ ಸಂಬಂಧವಿರುತ್ತದೆ. ಈ ಎಲ್ಲಾ ಕಾರಣಗಳಿಂದ ಜನಪದ ಸಾಹಿತ್ಯಗಳಲ್ಲೇ ಉರಲ್ ಕಲಿಕೆ ಸುಲಭ. ಉಳುವೆಯ ಏಕತಾನತೆಗೆ ಹೊಂದಿಕೊಳ್ಳುವ ರಚನೆ ಉರಲ್‌ನದ್ದಾಗಿದೆ. ಹೇಳಿಕೆ ರೂಪದಲ್ಲಿರುವುದು ಪ್ರಾಸ ಮತ್ತು ರೂಪಸಾದೃಶ್ಯದಿಂದ ಉರಲ್ ಕಲಿಕೆಗೆ ಅನುಕೂಲಿಯಾಗಿದೆ. ಅತ್ಯಂತ ಪ್ರಭಾವಶಾಲಿ ಮೌಲ್ಯಗಳನ್ನು ಅಭಿವ್ಯಕ್ತಿಸುವ ಉರಲ್‌ಗಳು ಬದುಕಿನ ತೀವ್ರ ಅನುಭವಗಳನ್ನು ಬಿಂಬಿಸುತ್ತವೆ. ತುಳು ಬೇಸಾಯಗಾರರು ಎತ್ತು,

ಕೋಣಗಳ ಜೊತೆಗೆ ಆತ್ಮೀಯ ಸಂಬಂಧ ಹೊಂದಿರುವುದರಿಂದ ತನ್ನ ಭಾವನೆಗೆ ಕಾವ್ಯದ ರೂಪ ಕೊಡುವುದು ಮಾತ್ರ ಇಲ್ಲಿಯ ವಿಶೇಷತೆಯಾಗಿದೆ.

ಉದಾ:

ಮೂಡಾಯಿ ಮುಗಾಲ್ ಕೂಡ್‌ಂಡ್ ಮಗಾ
ಕಟ್ಟಿ ಪೊರಿ ಕೂಡಿಜೆ ಮಗಾ ಓಓಓ................. ವ್ವಾ............
(ಮೂಡು ಭಾಗದಲ್ಲಿ ಮೋಡ ಕೂಡಿದೆ ಮಗಾ ....
ಕಟ್ಟಿದ ಸಾಲು ಕೂಡಲಿಲ್ಲ ಮಗಾ ಓಓಓ .... ವ್ವಾ............)

ಈ ಎರಡು ಸಾಲುಗಳಲ್ಲಿ ಮಧ್ಯಪ್ರಾಸಗಳಾದ 'ಕೂಡ್‌ಂಡೇ' ಮತ್ತು 'ಕೂಡಿಜೆ' ಎಂಬ ಎರಡು ಪದಗಳು ರಚನೆಯ ದೃಷ್ಟಿಯಿಂದ ಮಹತ್ವವಾದುದಾಗಿದೆ.

ಕುಮರಡ್ಕದ ಕುಡುವೋ ಕಾಳಗ್
ಕಾಯರಡ್ಕದ ಬಡುವೋ ಬೊಳ್ಳಗ್ ಓಓಓ .... ವ್ವಾ............)
(ಕಮರಿಯಲ್ಲಿ ಬೆಳೆದ ಹುರುಳಿ ಕಾಳ ಎತ್ತಿಗೆ
ಕಾಸರಕನ ಗುಡ್ಡೆಯಲ್ಲಿ ಬೆಳೆದ ಕೋಲು ಬೊಳ್ಳ ಎತ್ತಿಗೆ ಓಓಓ ....ವ್ವಾ............)
ಈಯಾತ್ ಬಚ್ಚಡ ಮಗಾ ಕಾಳಾ
ಯನ್ನನಾತ್ ಬಚ್ಚವಡಾ ಮಗಾ ಬೊಳ್ಳ ಓಓಓ.........ವ್ವಾ.........
(ನೀನಾಗಿ ಆಯಾಸ ಪಡಬೇಡ ಕಾಳಾ
ನನ್ನನ್ನು ಆಯಾಸ ಪಡಿಸಬೇಡ ಬೊಳ್ಳಾ ಓಓಓ...... ವ್ವಾ.........)*[1]

ಈ ಮೇಲಿನ ಎರಡು ಉರಲ್‌ಗಳಲ್ಲಿನ ಪ್ರಾಸ ಅತ್ಯಂತ ಆಕರ್ಷಕವಾದದು. ಕಲಿಕೆಯ ದೃಷ್ಟಿಯಿಂದ ಇಂತಹ ಉರಲ್‌ಗಳು ಕಲಿಕಾರ್ಥಿಯನ್ನು ಬಹುಬೇಗ ಸೆಳೆಯುವ ಸಾಧ್ಯತೆ ಇದೆ. ಎರಡನೇ ಉರಲ್‌ನಲ್ಲಿರುವ ಆದಿ, ಮಧ್ಯ, ಅಂತ್ಯ ಪ್ರಾಸಗಳು ನೆನಪಿಡುವ ದೃಷ್ಟಿಯಿಂದಲೂ ಮುಖ್ಯವಾಗುತ್ತದೆ. ಗದ್ದೆಯ ಬದುವಿನಲ್ಲಿ ಅಥವಾ ಗದ್ದೆಯ ಒಳಗೇ ಕೆಲಸ ನಿರ್ವಹಿಸುತ್ತಿರುವ ಕಲಿಕಾರ್ಥಿ ಇದನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಉರಲ್‌ಗಳು ಜನಪದ ಸಾಹಿತ್ಯಿಕ ಮೌಲ್ಯಗಳನ್ನು ಪಡೆದಿರುತ್ತವೆ. ಇದಲ್ಲದೇ ಇನ್ನೂ ಅನೇಕ ಉರಲ್‌ಗಳು ಸುಲಭವಾಗಿ ಕಲಿಯುವ ಸಾಲುಗಳಾಗಿವೆ. (ನೋಡಿ: ಅನುಬಂಧ-1) ಕಲಿಕೆಯ ದೃಷ್ಟಿಯಿಂದ ಉರಲ್‌ಗಳನ್ನು ಕೆಳಗಿನಂತೆ ವಿಶ್ಲೇಷಿಸಬಹುದು.

1. ಉರಲ್‌ಗಳ ರಚನೆ ಕೇವಲ ಎರಡು ಸಾಲುಗಳು ಹಾಗೂ ಸೀಮಿತ ಪದಗಳನ್ನು ಹೊಂದಿರುತ್ತದೆ. ಇದು ಕಲಿಕೆಗೆ ಅನುಕೂಲವಾಗಿರುತ್ತದೆ.

2. ಉರಲ್‌ಗಳಲ್ಲಿ ಹೆಚ್ಚು ಪ್ರಾಸ ಪದಗಳ ಬಳಕೆಯೇ ಇರುವುದರಿಂದ ನೆನಪಿಟ್ಟುಕೊಳ್ಳಲು ಸುಲಭವಾಗಿರುತ್ತದೆ.

3. ಉರಲ್‌ಗಳು ಒಬ್ಬ ಉಳುಮೆಗಾರನ ಹಾಗೂ ಎತ್ತುಗಳ ಸಂವಹನ ರೀತಿಯಲ್ಲಿರುವುದರಿಂದ ಅದರ ರಚನಗೆ ಹೆಚ್ಚಿನ ಶ್ರಮವಿರುವುದಿಲ್ಲ.

4. ಬಹುತೇಕ ಉರಲ್‌ಗಳು ಪರಿಚಿತ ಪ್ರದೇಶ, ವ್ಯಕ್ತಿ, ಪ್ರಾಣಿಗಳ ಬಗೆಗೆ ರಚನೆಯಾಗಿರುವುದರಿಂದ ಅದನ್ನು ಸುಲಭವಾಗಿ ವರ್ಗಾಹಿಸಲು ಸಾಧ್ಯವಾಗುತ್ತದೆ.

5. ಇದು ಬೇಸಾಯ ವೃತ್ತಿಯ ಅವಧಿಯಲ್ಲಿ ಮಾತ್ರ ಬಳಕೆ ಹಾಗೂ ರಚನೆಗೊಳ್ಳದೇ ಪಶುಸಂಗೋಪನೆಯ ಇತರ ಅವಧಿಯಲ್ಲೂ ಬಳಕೆಯಾಗುತ್ತದೆ. ಆದ್ದರಿಂದ ಪಠ್ಯ ವಸ್ತುವಿನ ಪುನರ್‌ಮನನಕ್ಕೆ ಹೆಚ್ಚಿನ ಅವಕಾಶವಿದೆ.

ಜನಪದ ಸಾಹಿತ್ಯದ ಕಲಿಕೆಯಲ್ಲಿ ಉರಲ್‌ನ್ನು ಹಿರಿಯರು ಕಿರಿಯರಿಗೆ ಹೇಳಿಕೊಡುವ ಪದ್ಧತಿ ಇರುವುದಿಲ್ಲ. ಬದಲಾಗಿ ಉಳುವೆ ನಡೆಸುವ ವ್ಯಕ್ತಿ ಅನಿವಾರ್ಯ ಹಾಗೂ ಸಹಜವಾಗಿಯೇ ಕಲಿತು ಅದನ್ನು ಹಾಡುತ್ತಾನೆ. ಪ್ರಾಣಿಗಳ ಜೊತೆಗೆ ವ್ಯಕ್ತಿ ಸಂವಹನ ನಡೆಸುವುದು ಅದರಲ್ಲೂ ಉಳುವ ಹಂತದಲ್ಲಿ ಅನಿವಾರ್ಯ. ಕೆಲವರು ಯಾವುದೇ ಸಾಹಿತ್ಯಗಳನ್ನು ಸೇರಿಸದೆ ಕೇವಲ ಓಓಓ .... ಎಂದು ಎತ್ತುಗಳನ್ನು ಬೆದರಿಸುವ ಸ್ವರ ಹೊರಡಿಸುವುದೂ ಇದೆ. ಸಾಮಾನ್ಯವಾಗಿ ಇದು ಕಲಿಕಾರ್ಥಿಯ ಆಸಕ್ತಿ, ಜಾಣ್ಮೆ ಮತ್ತು ಗಮನಿಸುವ ಸಾಮರ್ಥ್ಯದ ಹಿನ್ನಲೆಯಲ್ಲಿ ರಚನೆಯಾಗುತ್ತದೆ. ಉರಲ್‌ನ ಪ್ರತಿಯೊಂದು ಕೊನೆಯ ಅಕ್ಷರ ದೀರ್ಘವಾಗಿ ಎಳೆದು ಉಚ್ಚರಣೆಯಾಗುತ್ತದೆ. ಪ್ರತೀ ಪಾದದಲ್ಲೂ 4 ಗಣಗಳು ಇದ್ದು, ಆದಿ, ಮಧ್ಯ ಅಥವಾ ಅಂತ್ಯ ಹೀಗೆ ಯಾವುದಾದರೂ ಒಂದು ಅಥವಾ ಎರಡು ಇಲ್ಲಾ ಮೂರು ಪ್ರಾಸಗಳು ಬರುವುದೂ ಇದೆ. ಈ ರೀತಿಯ ರಚನೆಯಿಂದ ಕಲಿಕಾರ್ಥಿಯಲ್ಲಿ ಆಸಕ್ತಿ ಮತ್ತು ಕುತೂಹಲ ಹೆಚ್ಚಾಗಿದ್ದು ಕಲಿಕೆಗೆ ಅನುಕೂಲವಾಗುವುದೂ ಹೆಚ್ಚು.

ಉಳುಮೆಯ ಸಂದರ್ಭದಲ್ಲಿ ಏರುಸ್ವರದಲ್ಲಿ ಅತ್ಯಂತ ರಾಗವಾಗಿ ಮತ್ತು ಪ್ರಾಸಬದ್ಧವಾಗಿ ಉರಲನ್ನು ಹಾಡುವುದರಿಂದ ಕೇಳಲು ಇಂಪಾಗಿರುತ್ತದೆ. ಇದು ಕೆಲಸದ ಏಕತಾನತೆಯನ್ನು ತಪ್ಪಿಸುವುದರಿಂದ ಉಳುಮೆಗಾರ ಅನಿವಾರ್ಯವಾಗಿ ಇದನ್ನು ಕಲಿಯುತ್ತಾನೆ. ಉಳುಮೆಗಾರನ ಆಯಾಸ ಪರಿಹಾರ ಮಾಡುವ ಸಾಮರ್ಥ್ಯ ಇದಕ್ಕಿದೆ. ಸಾಮಾನ್ಯವಾಗಿ ಉಳುಮೆಗಾರನ ನೆನಪು ಶಕ್ತಿ, ಕರ್ತೃತ್ವ ಶಕ್ತಿ, ಸಾಹಿತ್ಯ ಪ್ರಜ್ಞೆ, ಸ್ವರ ಮತ್ತು ರಾಗವನ್ನು ಅನ್ವಯಿಸಿ ಇದರ ಕಲಿಕೆ ನಡೆಯುತ್ತದೆ. ಇದಲ್ಲದೇ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಲು ಬೇರೆ ಅವಕಾಶಗಳಿಲ್ಲದೇ ಇದ್ದಾಗ ಸಾಮಾಜಿಕ ವಾತಾವರಣದಲ್ಲಿ ಕೆಳವರ್ಗದ ವ್ಯಕ್ತಿಯೊಬ್ಬ ಉರಲ್‌ನ ಮೂಲಕ ತನ್ನ ಒಳಗನ್ನು ಹಂಚಿಕೊಳ್ಳುತ್ತಾನೆ. ಆತನ ದುಃಖ-ದುಮ್ಮಾನ, ಆಸರಿಕೆ-ಬೇಸರಿಕೆ, ಪ್ರತಿಭಟನೆ. ಸಾಂತ್ವನ ಇವೆಲ್ಲವೂ ಉರಲ್ ರಚನೆಯಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು. ಇಂದು ತುಳುವರಲ್ಲಿ ಗದ್ದೆ ಬೇಸಾಯ ಹಾಗೂ ಎತ್ತುಗಳ ಮೂಲಕ ನಡೆಯುವ ಉಳುಮೆ ಕಾರ್ಯ ಕಡಿಮೆಯಾಗಿರುವುದರಿಂದ ಉರಲ್ ರಚನೆ ಹಾಗೂ ಅದನ್ನು ಇನ್ನೊಬ್ಬನಿಗೆ ವರ್ಗಾಯಿಸುವ ಸಾಧ್ಯತೆಗಳು ತೀರಾ ಕಡಿಮೆಯಾಗಿದೆ.

2.2.ಕಬಿತ :

ತುಳುನಾಡಿನ ಏಣಿಲು ಬೆಳೆಯ ನೇಜಿ ನೆಡುವ ಸಂದರ್ಭದಲ್ಲಿ ಕೆಲಸದ ಜೊತೆಗೆ

ಹಾಡುವ ಪದ್ಯ ಪ್ರಕಾರವೊಂದನ್ನು 'ಕಬಿತ' ಎಂದು ಕರೆಯುತ್ತಾರೆ. ಇದು ತುಳು ಜನಪದ ಸಾಹಿತ್ಯದ ಕೆಲಸದ ಹಾಡುಗಳಲ್ಲಿ ಪ್ರಮುಖ ಪ್ರಕಾರಕ್ಕೆ ಸೇರುತ್ತದೆ. 'ಕವಿತ ಎನ್ನುವುದರಿಂದ ಕಬಿತ ಎನ್ನುವ ಪದ ಬಂದಿರಬೇಕು. ಆದರೆ ಕನ್ನಡದ ಕವಿತೆಗಳಷ್ಟೇ ಕ್ಷೇತ್ರ ವೈಶಾಲ್ಯ, ವಿಷಯ ವೈಶಾಲ್ಯ, ರಚನಾ ವೈಖರಿಗಳನ್ನು ತುಳು ಕಬಿತಗಳು ಹೊಂದಿಲ್ಲದಿದ್ದರೂ ಗುಣ, ಗಾತ್ರ, ಧರ್ಮಗಳ ದೃಷ್ಟಿಯಿಂದ ಇದನ್ನು ಒಂದೇ ಜಾತಿಗೆ ಸೇರಿಸಬಹುದು' ಎಂದು ವಿದ್ವಾಂಸರು ಹೇಳಿದ್ದಾರೆ. ಕಬಿತ ಎನ್ನುವುದು ಒಂದು ಸಾಮುದಾಯಿಕ ಗೀತ ಪ್ರಕಾರ. ಕೆಲಸ ಮಾಡುವ ಕೆಲಸಗಾರರ ಸಂತೋಷ, ದುಃಖ, ಭಯ, ಭಕ್ತಿ, ಆಸೆ, ಆಕಾಂಕ್ಷೆ, ಹಾಸ್ಯ, ವಿಡಂಬನೆ ಇತ್ಯಾದಿ ಸಹಜ ಭಾವನೆಗಳ ಅಭಿವ್ಯಕ್ತಿ ಕಾವ್ಯರೂಪ.

ಕಬಿತದ ಲಕ್ಷಣಗಳಲ್ಲಿ ಅದು ಅತ್ಯಂತ ದೀರ್ಘರೂಪದಲ್ಲೂ ಸಾಮಾನ್ಯ ಹತ್ತು ಹದಿನೈದು ಸಾಲುಗಳಲ್ಲೂ ಇರುವುದಿದೆ. ನಾಟಿ ಕೆಲಸದ ಸಂದರ್ಭದಲ್ಲಿ ಹಾಡು ಕಲಿತ ಹೆಂಗಸು (ಅಪರೂಪಕ್ಕೆ ಗಂಡಸು) ಕಬಿತ ಹಾಡಲು ಆರಂಭಿಸುತ್ತಾಳೆ. ಅವಳು ಹಾಡುತ್ತಿದ್ದಂತೆ ಸಹ ಕೆಲಸಗಾರರು ಅದರ ಪಲ್ಲವಿಯನ್ನು ಹಾಡುತ್ತಾರೆ. ಹಾಡುಗಾರ್ತಿ ಕಬಿತದ ವಸ್ತುವಿನ ಸಾಲನ್ನು ಹೇಳುತ್ತಿದ್ದಂತೆ ಸಹ ಕೆಲಸಗಾರರು ಆ ಸಾಲನ್ನು ಮತ್ತೆ ಹಾಡದೇ ಕೇವಲ ಪಲ್ಲವಿಯನ್ನು ಮಾತ್ರ ಹಾಡುತ್ತಾರೆ. ಈ ರೀತಿ ಹಾಡುವುದರಿಂದ ಮುಖ್ಯ ಹಾಡುಗಾರ್ತಿಗೆ ಮುಂದಿನ ಸಾಲನ್ನು ನೆನಪಿಸಲು ಸಮಯಾವಕಾಶ ಮಾಡಿಕೊಡುತ್ತಾರೆ. ಹೀಗೆ ಸುಮಾರು ಎರಡು ಮೂರು ಗಂಟೆಗಳವರೆಗೂ ಮುಖ್ಯ ಹಾಡುಗಾರ್ತಿ ವಸ್ತುವಿನ ನಿರೂಪಣೆಯನ್ನು ಮಾಡುತ್ತಾ ಹೋಗುತ್ತಾಳೆ. ಕೆಲವು ಸಂದರ್ಭದಲ್ಲಿ ಮುಂದಿನ ಸಾಲು ನೆನಪಾಗದೇ ಇದ್ದಾಗ ಮತ್ತೆ ಹಿಂದೆ ಹಾಡಿದ್ದನ್ನು ಹಾಡಿ ನೆನಪನ್ನು ಮಾಡಿಕೊಳ್ಳಲು ಸಮಯಾವಕಾಶವನ್ನು ಪಡೆದುಕೊಳ್ಳುತ್ತಾಳೆ. ಈ ತಂತ್ರ ಕಬಿತ ಹಾಡುವಿಕೆಯಲ್ಲಿ ಕಾಣುತ್ತದೆ.

ವಸ್ತುವಿನ ದೃಷ್ಟಿಯಿಂದ ಕಬಿತದ ರಚನೆ ಅತ್ಯಂತ ಸರಳವಾಗಿರುತ್ತದೆ. ಪರಿಸರದ ನಿತ್ಯ ಘಟನೆ, ಸ್ಥಳ, ವಸ್ತು ಮತ್ತು ವ್ಯಕ್ತಿಯ ಭಾವನೆಗಳಿಗೆ ಸಂಬಂಧಿಸಿದ ವಿಷಯಗಳನ್ನೇ ವಸ್ತುವಾಗಿ ಬಳಸುತ್ತಾರೆ. ವಸ್ತುವಿಗೆ ಮಹತ್ವವಿಲ್ಲದಿದ್ದರೂ ರಾಗ, ಲಯ ಮತ್ತು ಸಂದರ್ಭಕ್ಕೆ ಹೆಚ್ಚಿನ ಆಧ್ಯತೆ ಇರುತ್ತದೆ. ಕಬಿತ ಹಾಡುವ ಸಂದರ್ಭದಲ್ಲಿ ಕೆಲವೊಂದು ಬಾರಿ ಅಭಿನಯಕ್ಕೂ ಆಸ್ಪದವಿರುತ್ತದೆ. ಇದು ಕಬಿತದ ಕಲಿಕೆಗೆ ಹೆಚ್ಚಿನ ಅವಕಾಶ ಮಾಡಿಕೊಡುತ್ತದೆ.

2.2.1.ಕಬಿತದ ಕಲಿಕೆ

ವಸ್ತುವಿನ ದೃಷ್ಟಿಯಿಂದ ಕಬಿತದ ರಚನೆ ಅತ್ಯಂತ ಸರಳ. ಉದಾಹರಣೆಗೆ 'ನಿರೆಯಿಂಡ್ ಮೀನ್ ನಿರೆಯಿಂಡ್' ಎಂಬ ಪಲ್ಲವಿಯ ಈ ಕಬಿತದಲ್ಲಿ (ನೋಡಿ:ಅನುಬಂಧ-2) ಮಳೆಗಾಲದ ಆರಂಭದ ನೆರೆಯಲ್ಲಿ 'ಉಬಾರ್ ಮೀನ್' ಎಂಬ ಒಂದು ಜಾತಿಯ ಮೀನು ನೀರಿಗೆ ಮೇಲ್ಮುಖವಾಗಿ ಸಂಚರಿಸುತ್ತಾ ಹೋಗುತ್ತದೆ. ಅದು ಯಾವ

ಪ್ರದೇಶದಲ್ಲೆಲ್ಲ ಸಂಚರಿಸಿತು ಎನ್ನುವುದನ್ನು ಪ್ರದೇಶವಾರು ಹೇಳುತ್ತಾ ಕೊನೆಗೆ ತಾನು ನಾಟಿ ಕೆಲಸ ಮಾಡುವ ಗದ್ದೆಗೆ ಬಂದು ನಿಲ್ಲುತ್ತದೆ. ಸಾಮಾನ್ಯವಾಗಿ ಈ ರೀತಿಯ ಪ್ರದೇಶದಲ್ಲಿ ಆರಂಭ ಕುಡ್ಲ (ಮಂಗಳೂರು)ದಿಂದ ಆಗಿ ಅದು ಅಲ್ಲಿಂದ ಮುಂದಿನ ಊರು, ಅಲ್ಲಿಂದ ಮತ್ತೆ ಮುಂದಿನ ಊರು ಹೀಗೆ ಊರಿನ ಹೆಸರು ಹೇಳುತ್ತಾ ಕಬಿತ ಸಾಗುತ್ತದೆ. ಸಹ ಕೆಲಸಗಾರರು ಪಲ್ಲವಿ ಹಾಡುತ್ತಿದ್ದಂತೆ ಹಾಡುಗಾರ್ತಿಗೆ ಸ್ಥಳವನ್ನು ನೆನಪಿಸುವ ಅವಕಾಶ ಸಿಗುತ್ತದೆ. ಇದನ್ನು ಸಾಮಾನ್ಯ ಜ್ಞಾನ ಇರುವ ಆದರೆ ರಾಗ, ಲಯದ ಪ್ರಜ್ಞೆ ಇರುವ ಯಾವುದೇ ವ್ಯಕ್ತಿಯಾದರೂ ಕಲಿಯಬಲ್ಲರು. ಕಬಿತವನ್ನು ಕಲಿಯುವ ಸಂದರ್ಭದಲ್ಲಿ ರಾಗ, ಲಯವನ್ನು ಮೊದಲು ಗ್ರಹಿಸುತ್ತಾರೆ. ನಂತರ ಅದರ ವಸ್ತುವನ್ನು ಗ್ರಹಿಸುತ್ತಾರೆ. ಕಬಿತದ ವಸ್ತು ಸುಲಭವಾಗಿರುವ ಕಾರಣ ಮತ್ತು ಕಲಿಕಾರ್ಥಿಯ ಅನುಭವಕ್ಕೆ ಹೆಚ್ಚು ಹತ್ತಿರವಾಗಿರುವ ಕಾರಣ ತಕ್ಷಣವಾಗಿ ರಾಗ, ಲಯ ಜೊತೆಗೆ ವಸ್ತುಗಳನ್ನೂ ಗ್ರಹಿಸುತ್ತಾರೆ. 'ಓ ಬೇಲೆ'*[2] ಯಂತಹ ಕಬಿತದಲ್ಲಿ ಒಂದು ಕತೆಯೂ ಅಡಕವಾಗಿರುತ್ತದೆ.(ನೋಡಿ:ಅನುಬಂಧ–3) ಇದು 'ಈಜೋ ಮಂಜೋಟಿಗೋಣ' ಎಂಬ ಕಬಿತಕ್ಕೂ ಅನ್ವಯಿಸುತ್ತದೆ. ಈ ರೀತಿಯ ಕಬಿತಗಳನ್ನು ಹಾಡುಗಾರ್ತಿ ಹಾಡುವ ಮೊದಲು ಹತ್ತಾರು ಸಾರಿ ಕೇಳಿಸಿಕೊಂಡು ಕತೆ, ರಾಗ, ಲಯವನ್ನು ಮನನ ಮಾಡಿಕೊಂಡಿರುತ್ತಾಳೆ. ನಂತರ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುತ್ತಾಳೆ. ಮುಂದೆ ಸಾಮೂಹಿಕವಾಗಿ ಗದ್ದೆಯಲ್ಲಿ ಹಾಡುತ್ತಾಳೆ. ಗದ್ದೆಯಲ್ಲಿ ಹಾಡುವ ಸಂದರ್ಭದಲ್ಲಿ ಕತೆಯನ್ನು ನೆನಪಿಸುತ್ತಾ ಪಲ್ಲವಿಯ ಅವಧಿಯಲ್ಲಿ ಅದನ್ನು ಹಂತಹಂತವಾಗಿ ಕಟ್ಟುತ್ತಾ ರಾಗದೊಂದಿಗೆ ಹಾಡುತ್ತಾಳೆ. ಸಹ ಕೆಲಸಗಾರರು ಪಲ್ಲವಿ ಹಾಡುವ ನಡುವಿನ ಸಮಯ ಹಾಡುಗಾರ್ತಿಗೆ ಹೆಚ್ಚು ಅನುಕೂಲವಾಗುತ್ತದೆ.

'ಓ ಬೇಲೆ' ಕಬಿತದ ವಿಶೇಷವೆಂದರೆ ಅದು ಕೆಲಸಕ್ಕೆ ನೇರ ಸಂಬಂಧವಿರುವ ಕಬಿತ. ಕೆಲಸಕ್ಕೆ ನೇರ ಸಂಬಂಧವಿರುವ ಕಾರಣ ಅಲ್ಲಿ ಚಟುವಟಿಕೆಗೆ ಅವಕಾಶ ಹೆಚ್ಚು. ಆದ್ದರಿಂದ ಚಟುವಟಿಕೆ ಆಧಾರಿತ ಕಲಿಕೆಯಾದ ಈ ಓ ಬೇಲೆ ಕಬಿತ ಹೆಚ್ಚು ನೆನಪಿನಲ್ಲಿ ಉಳಿಯುತ್ತದೆ. ಬಹುತೇಕ ಎಲ್ಲಾ ಕಬಿತಗಳು ಸುತ್ತಮುತ್ತಲಿನ ವಿದ್ಯಮಾನಗಳಿಗೆ ನೇರ ಸಂಬಂಧಿಸಿದವುಗಳು, ಇದು ಹಾಡುಗಾರ್ತಿಯ ನೆನಪಿಗೆ ನೆರವಾಗುತ್ತದೆ. ಪರಿಸರ ಸಂಬಂಧಿ ವಿಷಯ ಜ್ಞಾನದ ಮೇಲೆ ಆಸಕ್ತಿ ಇರುವ ಹಾಡುಗಾರ್ತಿಯರು ಕಬಿತವನ್ನು ಅತ್ಯಂತ ಸಲೀಸಾಗಿ ಹಾಡುತ್ತಾರೆ. ಇವರು ಸಮೂಹದಲ್ಲಿನ ಯಾವುದೇ ಭಯ ಒತ್ತಡವನ್ನು ಅನುಭವಿಸದೇ ಮುಕ್ತವಾಗಿ ಹಾಡುವುದನ್ನು ಅಭ್ಯಾಸ ಮಾಡುತ್ತಾರೆ. ಇದರ ಪರಿಣಾಮವೇ ಹೊಲದಲ್ಲೇ ಆಶುರೂಪದ ಕಬಿತ ಹುಟ್ಟಿಕೊಳ್ಳುವುದಾಗಿದೆ.

ಸಾಂದರ್ಭಿಕ ವಸ್ತುಗಳ ಮೂಲಕವೇ ಕಬಿತ ಕಟ್ಟುವ ಕಾರ್ಯ ನಡೆಯುವುದರಿಂದ ಇದರ ಇತಿಹಾಸವೇನೂ ಮಹತ್ವ ಪಡೆಯುವುದಿಲ್ಲ. ವರ್ತಮಾನದ ಸಂಗತಿಗಳು ಓರ್ವ ಸಾಮಾನ್ಯ ವ್ಯಕ್ತಿಗೂ ನಿಲುಕುವಂತದ್ದಾಗಿದ್ದರಿಂದ ಇಲ್ಲಿ ಅಭಿವ್ಯಕ್ತಿ ಜಾಣ್ಮೆ ಮಾತ್ರ ಮಹತ್ವ ಪಡೆಯುತ್ತದೆ. ಮಾತುಗಾರಿಕೆ, ವರ್ತಮಾನ ಪ್ರಜ್ಞೆ, ರಾಗ–ಲಯ ಪ್ರಜ್ಞೆ ಮತ್ತು ವಿಷಯದ ಆಸಕ್ತಿ ಇದ್ದ ಹೆಂಗಸರು ಕಬಿತ ಹಾಡುವುದರಲ್ಲಿ ನಿಸ್ಸೀಮರಾಗಿರುತ್ತಾರೆ.

ಈ ಮೇಲಿನ ವಿಶ್ಲೇಷಣೆಯ ಹಿನ್ನಲೆಯಲ್ಲಿ

1. ಕಬಿತದ ವಸ್ತು ಸರಳವಾಗಿರುವುದರಿಂದ ಕಲಿಕೆ ಸುಲಭ.
2. ಕಬಿತದ ಪಲ್ಲವಿಯನ್ನು ಉಳಿದ ಕೆಲಸಗಾರರು ಹಾಡುವುದರಿಂದ ನೆನಪಿಸಲು ಅವಕಾಶ ಹೆಚ್ಚಿರುತ್ತದೆ.
3. ಕಬಿತವನ್ನು ಕಲಿಯುವ ಸಂದರ್ಭದಲ್ಲಿ ವಸ್ತುವಿಗಿಂತಲೂ ಅದರ ರಾಗ ಮತ್ತು ಲಯ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ.
4. ಕಬಿತದ ಕಲಿಕೆ ಮತ್ತು ಅಭಿವ್ಯಕ್ತಿಯಲ್ಲಿ ಓರ್ವ ವ್ಯಕ್ತಿಯ ಪೂರ್ವ ಜ್ಞಾನ ಹೆಚ್ಚು ಪ್ರಭಾವವನ್ನು ಬೀರುತ್ತದೆ.
5. ನಾಟಿ ಕ್ರಿಯೆಯ ಹೊರತಾಗಿ ಕಬಿತವನ್ನು ಮೌಖಿಕವಾಗಿ ಕಲಿಯುವ ಅವಕಾಶ ಕಡಿಮೆ ಇರುತ್ತದೆ.
6. ಬಹುತೇಕ ಕಬಿತಗಳ ರಾಗ, ಲಯದಲ್ಲಿ ವ್ಯತ್ಯಾಸವಿರುತ್ತದೆ. ಹಾಡುಗಾರ್ತಿ ಈ ಭಿನ್ನ ರಾಗವನ್ನು ಅಭ್ಯಾಸ ಮಾಡಬೇಕಾಗುತ್ತದೆ.
7. ಶ್ರಮ ಪರಿಹಾರ ಮತ್ತು ಮನಸ್ಸಿನ ಸಂತೋಷಕ್ಕಾಗಿ ಕಬಿತದ ಬಳಕೆಯಾಗುವುದರಿಂದ ಜನಪದರು ಇದರ ರಚನೆಯನ್ನು ಸುಲಭ ಹಾಗೂ ಹಾಡುಗಬ್ಬವಾಗಿಸಿದ್ದಾರೆ.

ಕಬಿತ ಜನಪದ ಹಾಡುಗಾರ್ತಿಯರ ಮಧ್ಯೆ ಅತ್ಯಂತ ಜನಪ್ರಿಯತೆಯನ್ನು ಪಡೆದ ಸಾಹಿತ್ಯ. ಸಾಮಾನ್ಯ ರಚನೆಗಳಾದರೂ ಸಂಗೀತದ ಮೂಲಕ ಅವುಗಳನ್ನು ಹೆಚ್ಚು ಆಪ್ಯಾಯಮಾನವಾಗಿ ಬಳಕೆ ಮಾಡುವ ತಂತ್ರವನ್ನು ಜನಪದರು ಮಾಡಿದ್ದಾರೆ. ಭಾಷೆಯ ಬಿಗಿತ ಹಾಗೂ ಕಾಠಿಣ್ಯ ಇಲ್ಲದೇ ಇರುವುದು ಕಬಿತದ ಆಶು ರಚನೆ ಮತ್ತು ನಿರರ್ಗಳ ಹಾಡಿಗೆ ಸಹಕಾರಿಯಾಗಿದೆ. ಇದೇ ಕಾರಣದಿಂದ ಕಬಿತದ ಕಲಿಕೆಯು ಉಳಿದ ಜನಪದ ಸಾಹಿತ್ಯಗಳ ಕಲಿಕೆಗಿಂತ ಸುಲಭವಾಗಿರುವುದಾಗಿದೆ.

2.3.ಪಾಡ್ದನ ಮತ್ತು ಜನಪದ ಕಾವ್ಯ

ತುಳು ಸಂಸ್ಕೃತಿಯ ನಾನಾ ಸಂದರ್ಭಗಳಲ್ಲಿ ಬಳಕೆಯಾಗುವ 'ಪಾಡ್ದನ' ಎಂಬ ಪದ್ಯ ಪ್ರಕಾರವೊಂದರ ಕುರಿತು ಅನೇಕ ಜಾನಪದ ವಿದ್ವಾಂಸರು ವಿಸ್ತೃತವಾದ ಚರ್ಚಿಸಿದ್ದಾರೆ. 'ಪಾಡ್ದನ' ಎಂಬ ಪದವೇ ಪಾರ್ದನ, ಪಾರ್ತನ, ಪಾಡ್ದನೊ, ಪಾಡ್ದೊನ, ಪಾಡ್ತನ, ಪಾಡ್ತನೊ ಇತ್ಯಾದಿ ಶಬ್ದಗಳ ರೂಪದಲ್ಲಿ ಬಳಕೆಯಲ್ಲಿದೆ. ಈ ಅಧ್ಯಾಯದಲ್ಲಿ ಪಾಡ್ದನ ಮತ್ತು ಪಾಡ್ದನದ ವಿಸ್ತೃತರೂಪವಾದ ತುಳು ಜನಪದ ಕಾವ್ಯಗಳ ಕಲಿಕೆಯ ಕುರಿತಾಗಿ ಚರ್ಚಿಸಲಾಗಿದೆ.

2.3.1.ಪಾಡ್ದನ ಅರ್ಥ ಮತ್ತು ಸಂದರ್ಭ

ಕಲಿಕಾರ್ಥಿಯ ದೃಷ್ಟಿಯಿಂದ ಪಾಡ್ದನದ ಅರ್ಥ ಮತ್ತು ಹಾಡುವ ಸಂದರ್ಭವನ್ನು ಕಂಡುಕೊಳ್ಳುವುದು ಅತೀ ಅಗತ್ಯ. ಅಂದರೆ ತುಳುನಾಡಿನಲ್ಲಿ ಪಾಡ್ದನ ಪಡೆದಷ್ಟು ಮಾನ್ಯತೆ ಹಾಗೂ ಅದನ್ನು ಕಲಿತವರ ಸಂಖ್ಯೆ ಬೇರಾವ ಜನಪದ ಸಾಹಿತ್ಯಕ್ಕೂ ದೊರಕಿಲ್ಲ ಎನ್ನುವುದು ಸತ್ಯ. ಆದ್ದರಿಂದ ಪಾಡ್ದನವನ್ನು ಬೇರೆಬೇರೆ ಜಾನಪದ ವಿದ್ವಾಂಸರು

ವಿಭಿನ್ನ ದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. ಈ ವಿಶ್ಲೇಷಣೆಗಳೇ ಪಾಡ್ದನದ ಸ್ವರೂಪ ಮತ್ತು ಅದನ್ನು ಕಲಿಕೆಗೆ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿರುವುದನ್ನು ತಿಳಿಸುತ್ತದೆ. ಆದ್ದರಿಂದ ವಿದ್ವಾಂಸರ ಅಭಿಪ್ರಾಯವನ್ನು ಇಲ್ಲಿ ದಾಖಲಿಸಲಾಗಿದೆ.

ಬಿ.ಎ ಸಾಲೆತ್ತೂರು ಅವರು, "ಪಾಡ್ದನ' ಎಂಬ ಶಬ್ದ 'ಹಾಡು' ಎಂಬರ್ಥದ ದ್ರಾವಿಡ ಶಬ್ದವಾದ 'ಪಾಟ್' ಎಂಬುದನ್ನು ಹೋಲುತ್ತದೆ. ಆದರೆ ತುಳು ಪಾಡ್ದನದ ಜಾಯಮಾನವು ಮೂಲತಃ ಪ್ರಾರ್ಥನೆಯಾಗಿದೆ" ಎಂದು ವಿವರಿಸಿದ್ದಾರೆ.

ಮಂಜೇಶ್ವರ ಗೋವಿಂದ ಪೈಯವರು, "ಪಾಡ್ದನ ಶಬ್ದ 'ಪ್ರಾರ್ಥನ' ಎಂಬ ಸಂಸ್ಕೃತ ಶಬ್ದದಿಂದ ಉತ್ಪತ್ತಿಯಾಗಿರಬಹುದು. ಭೂತಗಳ ಚರಿತ್ರೆಗಳನ್ನು ಆದ್ಯಂತವಾಗಿ ಬಣ್ಣಿಸುವ ಪಾಡ್ದನ (ಪ್ರಾರ್ಥನೆ)ಗಳೆಂಬ ವಚನ ಕಾವ್ಯಗಳನ್ನು ಆಯಾ ಭೂತದ ಗುಡಿಯಲ್ಲಿ ಹಾಡುವ ಪದ್ಧತಿ ಉಂಟು" ಎಂದಿದ್ದಾರೆ.

ಈ ಎರಡು ಅಭಿಪ್ರಾಯಗಳನ್ನು ಒಪ್ಪದ ಬಿ.ಎ. ವಿವೇಕ ರೈ ಯವರು, "ಪಾಡ್ದನದ ಸ್ವರೂಪ ಮತ್ತು ಕ್ರಿಯೆ ಪ್ರಾರ್ಥನೆಯ ರೀತಿಯಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. ಪ್ರಾರ್ಥನೆಯೆಂಬ ಸಂಸ್ಕೃತ ಶಬ್ದವು ತುಳುವಿಗೆ ಬರುವಾಗ 'ಪಿರಾರ್ಥನ' ಅಥವಾ 'ಪಿರತ್ತನ' ಎಂದಾಗುತ್ತದೆ. ಈ ರೀತಿಯ ಶಬ್ದ ರೂಪಗಳು ತುಳುವಿನಲ್ಲಿ ರೂಢಿಯಲ್ಲಿಲ್ಲ" ಎಂದು ತಿಳಿಸಿದ್ದಾರೆ.

ಟಿ. ಕೇಶವ ಭಟ್‌ರವರು, "ಪಾಡ್ದನ ಉಚ್ಛರಣೆ ಪಾಡ್ದನವಲ್ಲ' ಪ್ರಾರ್ಥನ 'ಪಾರ್ತನ' ಎಂದಾಗಿದೆ. 'ಪರತ್ ಪಣ್ಪುನ' ಎಂದು ಈ ಸಾಹಿತ್ಯವನ್ನರಿತ ತುಳು ಜನರು ಹೇಳುತ್ತಾರೆ. 'ಪಳಮೆ' ಎಂಬ ಅರ್ಥವಿರುವ 'ಪರತ್ತನ' ಎಂಬುದೇ ಶಬ್ದದ ಮೂಲರೂಪವೆಂದು ತಿಳಿಯಬಹುದು" ಎಂದು ಸಮರ್ಥಿಸುತ್ತಾರೆ.

ಪೀಟರ್ ಜೆ.ಕ್ಲಾಸ್ ಅವರು, "ಹಾಡು' ಎಂಬರ್ಥದ 'ಪಾಡ್' ಎಂಬ ಧಾತುವಿನಿಂದ ಪಾಡ್ದನ ಶಬ್ದ ಉಂಟಾಗಿದೆ" ಎನ್ನುತ್ತಾರೆ. ಬಿ.ಎ. ವಿವೇಕ ರೈಯವರು, "ಹಾಡು ಎಂಬ ಅರ್ಥವುಳ್ಳ 'ಪಾಡ್' ಅಥವಾ 'ಪಾಟ್' ಎಂಬ ಧಾತುವಿಂದ ಪಾಡ್ದನ ಶಬ್ದದ ನಿಷ್ಪತ್ತಿಯಾಗಿದೆ" ಎನ್ನುತ್ತಾರೆ.

ಈ ಎರಡು ವಾದಗಳನ್ನು ಅಲ್ಲಗಳೆಯುವ ಅಮೃತ ಸೋಮೇಶ್ವರರು, "ತುಳುವಿನಲ್ಲಿ ಸಾಮಾನ್ಯವಾಗಿ 'ಪಾಡ್' ಎಂಬ ಧಾತು 'ಹಾಡು' ಎಂಬರ್ಥದ ಪ್ರಯುಕ್ತವಾಗುವುದಿಲ್ಲ ಎನ್ನಬೇಕು. ಹಾಡುವುದಕ್ಕೆ ತುಳುವಿನಲ್ಲಿ ಹೆಚ್ಚಾಗಿ 'ಪದ' ಪಣ್ಪುನಿ' ಎಂದೇ ಹೇಳುತ್ತಾರೆ. 'ಪಾಡುನಿ' ಎಂದು ಹೇಳುವುದಿಲ್ಲ. ಆದ್ದರಿಂದ ಇದು ಸ್ತುತಿ 'ಪ್ರಾರ್ಥನೆ' ಎಂಬ ಅರ್ಥದಲ್ಲಿ ಅನ್ವಯವಾಗುತ್ತದೆ" ಎಂದು ತಿಳಿಸುತ್ತಾರೆ.

ಪಾಡ್ದನಗಳ ಕುರಿತಾಗಿ ವಿದ್ವಾಂಸರು ನಡೆಸಿದ ಈ ಮೇಲಿನ ಚರ್ಚೆಗಳನ್ನು ಗಮನಿಸಿದಾಗ ಎರಡು ಅರ್ಥಗಳಾದ 'ಪ್ರಾರ್ಥನೆ' ಮತ್ತು 'ಹಾಡು' (ಪಾಟ್) ಧಾತುಗಳಿಂದ 'ಪಾಡ್ದನ' ಎಂಬ ಪದ ಹುಟ್ಟಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಎರಡು ಶಬ್ದಗಳ ಆಧಾರದಲ್ಲೇ 'ಪಾಡ್ದನ' ಎಂಬ ಪದ ನಿಷ್ಪತ್ತಿಯ ಕುರಿತು ಚರ್ಚಿಸಲು ಸಾಧ್ಯವಿದೆ.

'ಪಾಡ್ದನ' ಎಂಬುದು ಕೇವಲ 'ಪ್ರಾರ್ಥನೆ' ಮಾತ್ರವಲ್ಲ. ಅಂದರೆ ಪಾಡ್ದನದ

ಸಂದರ್ಭಗಳ ಬಗ್ಗೆ ಚರ್ಚಿಸಿದಾಗ ಇದನ್ನು ಭೂತಾರಾಧನೆಯಾದ ಉತ್ಸವ, ಕೋಲ, ಆಯನ, ಮೆಚ್ಚಿ, ಮೈಮೆ, ಧರ್ಮನೇಮ, ಜಾಲಾಟ ಇತ್ಯಾದಿ ಸಂದರ್ಭದಲ್ಲಿ ಸ್ತುತಿ ರೂಪದಲ್ಲಿ ಲಯಬದ್ಧವಾಗಿ ಹಾಡುವುದನ್ನು ಕಾಣುತ್ತೇವೆ. ಇಲ್ಲಿ ಭೂತದ ಸ್ತುತಿಯು ಗದ್ಯ ರೂಪದಲ್ಲಿ ಇಲ್ಲದೆ ಹಾಡಿನ ರೂಪದಲ್ಲಿರುವುದನ್ನು ಗಮನಿಸಬೇಕು. ಈ ಸ್ತುತಿಯು ಗದ್ಯ ರೂಪದಲ್ಲಿ ಇರುವ ಪ್ರಾರ್ಥನೆಯಾಗಿ ಭೂತಾರಾಧನೆಯ ಸಂದರ್ಭದಲ್ಲಿ ಕಂಡು ಬರುತ್ತದೆ. ಆದರೆ ಇದನ್ನು ಪಾಡ್ದನ ಎಂದು ಕರೆಯುವುದಿಲ್ಲ. ಬದಲಾಗಿ 'ಬಿನ್ನೆ' ಅಥವಾ 'ಮದಿಪು' ಎಂಬುದಾಗಿ ಕರೆಯುತ್ತಾರೆ. ಆದ್ದರಿಂದ 'ಪಾಡ್ದನವೆಂಬುದು ಪ್ರಾರ್ಥನಾ ವಸ್ತುವನ್ನು ಹೊಂದಿದ ಪದ್ಯ ಪ್ರಕಾರ'ಎಂದು ಕರೆಯುವ ಸಾಧ್ಯತೆ ಇದೆ.

ಅದೇ ರೀತಿ ಭೂತಾರಾಧನೆಯನ್ನು ಹೊರತುಪಡಿಸಿಯೂ ಪಾಡ್ದನ ಹಾಡಲಾಗುತ್ತದೆ. ಅದು ಬೇಸಾಯದ ನೇಜಿ ಗದ್ದೆಯಲ್ಲಾಗಿದೆ. ಏಣಿಲು ಬೆಳೆಯ ನೇಜಿಯನ್ನು ಕೀಳುವ ಸಂದರ್ಭದಲ್ಲಿ ಈ ಪಾಡ್ದನ ಹಾಡುತ್ತಾರೆ. ಇಲ್ಲಿ ಅದು ಪ್ರಾರ್ಥನೆಯ (ಸ್ತುತಿ) ರೂಪದಲ್ಲಿ ಹಾಡಲಾಗುತ್ತಿಲ್ಲ. ಬದಲಾಗಿ ಮನರಂಜನೆಯ ರೂಪದಲ್ಲಿದೆ. ಭೂತಾರಾಧನೆಯಂತೆ ಮಧ್ಯಂತರ ಜಗತ್ತೊಂದರ ಸೃಷ್ಟಿಯ ಅನಿವಾರ್ಯ ಬೇಸಾಯ ಸಂದರ್ಭದ ಪಾಡ್ದನಕ್ಕಿರುವುದಿಲ್ಲ. ಆದರೆ ಬೇಸಾಯದ ಸಂದರ್ಭದಲ್ಲಿ ಹಾಡುವ ಪಾಡ್ದನದ ವಸ್ತುವಿನಲ್ಲಿ ಹೆಚ್ಚಿನ ಬದಲಾವಣೆ ಇಲ್ಲ. ಹಾಗೆಂದು ಎಲ್ಲಾ ಪಾಡ್ದನಗಳನ್ನು ನೇಜಿಗದ್ದೆಯಲ್ಲಿ ಹಾಡುವುದರ ಬಗ್ಗೆ ನಿಷೇಧವಿದೆ. ಈ ನಿಷೇಧದ ಮೂಲಕ ಭೂತಾರಾಧನೆಯ ಮಾನ್ಯತೆಯನ್ನು ಕಾಯ್ದುಕೊಳ್ಳಲಾಗಿದೆ. ನೇಜಿಗದ್ದೆಯ ಪಾಡ್ದನವು ಕೇವಲ ಮನರಂಜನೆಯ ಹಾಗೂ ಕೆಲಸ ಸಾಗುವ ದೃಷ್ಟಿಯಿಂದಲೇ ಹಾಡಲಾಗುತ್ತದೆ ಎಂಬುದನ್ನು ಈ ನಿಷೇಧದ ಮೂಲಕ ಗುರುತಿಸಬಹುದಾಗಿದೆ. ಮನಗಳಲ್ಲಿ ರಾತ್ರಿಯ ವೇಳೆ ಮನರಂಜನೆಗಾಗಿ ಕಥೆಗಳನ್ನು ಹೇಳುವಂತೆಯೇ ಸಂದಿಗಳನ್ನು ಹೇಳುವ ಪದ್ಧತಿ ಹಿಂದೆ ಬಳಕೆಯಲ್ಲಿತ್ತು. ಇಲ್ಲಿ ಭೂತಗಳ ಸಂದಿಗಳು ಇರುತ್ತಿದ್ದವು. ಇದರ ಉದ್ದೇಶ ರಂಜನೆಯೇ ಹೊರತು ಆರಾಧನೆಯಲ್ಲ.

ಈ ಮೇಲಿನ ವಿವರಣೆಯನ್ನು ಕಲಿಕೆಯ ದೃಷ್ಟಿಯಿಂದ ಗಮನಿಸಬೇಕಾಗಿದೆ. ಅಂದರೆ ಮನರಂಜನೆಯ ಹಿನ್ನೆಲೆಯಲ್ಲಿರುವ ಪಾಡ್ದನ ಮತ್ತು ಆರಾಧನೆಯ ಹಿನ್ನೆಲೆಯಲ್ಲಿರುವ ಪಾಡ್ದನ. ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಈ ಎರಡು ವಿಭಿನ್ನ ಪಾಡ್ದನಗಳ ಕಲಿಕೆ ಮತ್ತು ಅಭಿವ್ಯಕ್ತಿಯಲ್ಲಿನ ವ್ಯತ್ಯಾಸ ಗಮನಿಸಲಾಗಿದೆ. ಅಂದರೆ ನೇಜಿ ಗದ್ದೆಯಲ್ಲಿ ಹಾಡುವ ಪಾಡ್ದನವು ಸುದೀರ್ಘವೂ, ರಾಗ ಮತ್ತು ಲಯಬದ್ಧವೂ ಆಗಿದೆ. ಆದರೆ ಭೂತಾರಾಧನೆಯಲ್ಲಿ ಹಾಡುವ ಪಾಡ್ದನದ ಲಯದಲ್ಲಿ ವ್ಯತ್ಯಾಸವಿದೆ. ಅಲ್ಲದೇ ಕೆಲವು ಭಾಗಗಳನ್ನು ಮಾತ್ರ ಸಂದರ್ಭಾನುಸಾರ ಹಾಡಲಾಗುತ್ತದೆ. ಹಾಗೆಂದು ಅದು ಬೇಸಾಯ ಗದ್ದೆಯಲ್ಲಿ ಹಾಡುವ 'ಸಂದಿ'ಯಂತೂ ಅಲ್ಲ. ತುಳು ಜಾನಪದದಲ್ಲಿ ಪಾಡ್ದನವನ್ನೇ 'ಸಂದಿ' ಎಂದು ಕರೆಯುತ್ತಾರೆ. ಭೂತಾರಾಧನೆಯಲ್ಲಿ ಬಳಸಲ್ಪಡುವ ಸಂದಿಯನ್ನು ಬೇಸಾಯದ ಹಂತದಲ್ಲೂ 'ಸಂದಿ' ಎಂದೇ ಬಳಸುತ್ತಾರೆ.

ಬಿ.ಎ. ವಿವೇಕ ರೈಗಳವರು "ಒಂದು ದೀರ್ಘ ಕಾವ್ಯದಲ್ಲಿ ಅಧ್ಯಾಯಗಳು ಇರುವಂತೆ ಕೆಲವು ದೀರ್ಘವಾದ ಪಾಡ್ದನಗಳಲ್ಲಿ ಬೇರೆ ಬೇರೆ ಸಂದಿಗಳು ಸ್ವತಂತ್ರ ಖಂಡ

ಕಾವ್ಯಗಳ ಹಾಗೆ ಅಸ್ತಿತ್ವವನ್ನು ಪಡೆಯುತ್ತವೆ. ಕ್ರಮೇಣ ಇಡೀ ಪಾಡ್ದನಕ್ಕೆ ಸಂದಿ ಎನ್ನುವ ಪದ ಬಳಕೆಯಾಗಿರಬಹುದು" ಎಂದಿದ್ದಾರೆ. ಅನೇಕ ಪಾಡ್ದನಗಳು ಅತಿ ದೀರ್ಘವಾಗಿರುವುದರಿಂದ ನೇಜಿ ಗದ್ದೆಯ ಸೀಮಿತ ಅವಧಿಯ ಕೆಲಸದ ಮಧ್ಯೆ ಅದನ್ನು ಪೂರ್ಣಗೊಳಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಇವೆ. ಉದಾಹರಣೆಗೆ ಕೋಟಿ ಚೆನ್ನಯ, ಸಿರಿ ಪಾಡ್ದನಗಳು ಅತ್ಯಂತ ದೀರ್ಘವಾದ ಕಥನ ಕಾವ್ಯಗಳಾಗಿವೆ. ಇವುಗಳನ್ನು ತುಳು ಜನಪದ ಕಾವ್ಯಗಳೆಂದು ಕರೆಯುತ್ತಾರೆ. ಈ ಪಾಡ್ದನಗಳು, ನೇಜಿ ತೆಗೆಯುವ ನಿರ್ದಿಷ್ಟ ಕಾಲಾವಧಿಯಲ್ಲಿ ಮುಗಿಸುವ ಸಾಧ್ಯತೆ ಬಹಳ ಕಡಿಮೆ. ಈ ಕಾರಣದಿಂದ ಈ ಪಾಡ್ದನಗಳ ಕೆಲವು ಭಾಗಗಳನ್ನು ಮಾತ್ರ ಗದ್ದೆಯಲ್ಲಿ ಬಳಸುವುದು ರೂಢಿಯಾಗಿರಬೇಕು. ಈ ಬಳಕೆಯನ್ನು ಪಾಡ್ದನವೆನ್ನದೇ 'ಸಂದ್' (ಭಾಗ) ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರಬಹುದು. ಬಹುತೇಕ ಕಡೆಗಳಲ್ಲಿ ಬೇಸಾಯದ ಪಾಡ್ದನಗಳು ಸಂದಿ ರೂಪದಲ್ಲಿ ಮಾತ್ರ ಬಳಸಲ್ಪಡುವುದನ್ನು ಕಾಣುತ್ತೇವೆ. ಆದ್ದರಿಂದ ಇದನ್ನು ಪಾಡ್ದನ ಎಂದು ಕರೆಯುವುದಕ್ಕಿಂತ 'ಸಂದಿ' ಎಂದು ಕರೆಯುವುದೇ ಹೆಚ್ಚು ಸೂಕ್ತ. ಪಾಡ್ದನವನ್ನು ಭಾಗಗಳಾಗಿ ಒಡೆದು ಒಂದೊಂದು ತುಣುಕು ಹಾಡುವ ಪದ್ಧತಿಯನ್ನು ಬಳಸಿದ್ದರಿಂದ ಆಗಿದೆ ಎನ್ನಬಹುದು. ಹಲವು ಸಂದಿಗಳು ಒಟ್ಟು ಸೇರಿ ಒಂದು ಜನಪದ ಕಾವ್ಯವಾಗಿದೆ. ಇದಲ್ಲದೆ ಈ ರೀತಿಯ ಅಧ್ಯಾಯಗಳಿಲ್ಲದ ಪಾಡ್ದನಗಳೂ (ಸಂದ್) ನೇಜಿಗದ್ದೆಯಲ್ಲಿ ಬಳಕೆಯಾಗುತ್ತವೆ. ಉದಾಹರಣೆಗೆ ಕೊಲ್ಲೂರು ಮೂಕಾಂಬಿಕ, ಬಳಜೇವು ಮಾಣಿಗ, ಬಾಲೆಮಾಡೆದಿ ಇತ್ಯಾದಿ ಪಾಡ್ದನಗಳು ಪ್ರತ್ಯೇಕ ಅಧ್ಯಾಯಗಳಾಗಿ ವಿಭಾಗಿಸುವಷ್ಟು ಹಿರಿದಾದ ರಚನೆಗಳಲ್ಲ. ಆದ್ದರಿಂದ ಇವುಗಳು ಸಂದಿರೂಪದಲ್ಲೇ ಇರುತ್ತವೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಬಹುತೇಕ ವಕ್ತೃಗಳು ಪಾಡ್ದನವನ್ನು 'ಸಂದಿ' ಎಂದೇ ಹೇಳಿಕೊಂಡಿದ್ದಾರೆ. ಈ ದೃಷ್ಟಿಯಿಂದ ನೇಜಿ ಗದ್ದೆಯಲ್ಲಿ ನೇಜಿ ತೆಗೆಯುವ ಸಂದರ್ಭದಲ್ಲಿ ಹಾಡುವ ಪದ್ಯರೂಪವನ್ನು ಪಾಡ್ದನವೆನ್ನುವುದಕ್ಕಿಂತ 'ಸಂದಿ' ಎನ್ನುವುದೇ ಹೆಚ್ಚು ಅರ್ಥಪೂರ್ಣ. ಆದರೆ ಬಳಕೆಯಲ್ಲಿ ಸಂದಿ ಎನ್ನುವುದು 'ಪಾಡ್ದನ' ಎಂಬುದಾಗಿಯೇ ಬಳಕೆಯಾಗಿದೆ.

ಪಾಡ್ದನಗಳನ್ನು ಸಂದಿಗಳಾಗಿ ವಿಭಾಗಿಸಲು ಮುಖ್ಯವಾಗಿ ಎರಡು ಕಾರಣಗಳಿದ್ದವು. ಒಂದು ಕಲಿಕೆಯ ದೃಷ್ಟಿಯಿಂದ ಸುದೀರ್ಘ ಕಾವ್ಯಗಳನ್ನು ತುಂಡುಗಳಾಗಿ ಸುಲಭೀಕರಿಸುವುದು. ಇನ್ನೊಂದು ಗದ್ದೆಯ ಸೀಮಿತ ಅವಧಿ ಮತ್ತು ಅಪೂರ್ಣಗೊಳಿಸಲಾಗದ ಅನಿವಾರ್ಯತೆ.

2.3.2.ಪಾಡ್ದನಗಳ ಕಲಿಕೆಯ ಮೌಖಿಕ ಸೂತ್ರಾತ್ಮಕ ಸಿದ್ಧಾಂತ

ಹೋಮರನ ಇಲಿಯಡ್ ಹಾಗೂ ಒಡಿಸ್ಸಿಗಳಂತಹ ಸುದೀರ್ಘ ಮಹಾಕಾವ್ಯಗಳು ಅಕ್ಷರ ಯುಗದ ಪೂರ್ವದಲ್ಲಿ ಸಂರಚನೆಗೊಂಡಿದುದನ್ನು ವಿದ್ವಾಂಸರು ಉತ್ತರಿಸುವ ಹಿನ್ನಲೆಯಲ್ಲಿ "ಮೌಖಿಕ ಸೂತ್ರಾತ್ಮಕ ಸಿದ್ಧಾಂತ" ರೂಪುಗೊಂಡಿತು. ಆ ಕಾವ್ಯಗಳಲ್ಲಿ ಸೂತ್ರಾತ್ಮಕ ಶೈಲಿಯ ಸ್ವರೂಪಕ್ಕೂ ಅವುಗಳ ಮೌಖಿಕ ಸಂರಚನೆಗೂ ಇರಬಹುದಾದ ಸಂಬಂಧವನ್ನು ಕುರಿತಂತೆ ಹಾರ್ವರ್ಡ್ ವಿಶ್ವವಿದ್ಯಾಲಯದ ಮಿಲ್‌ಮ್ಯಾನ್

ಪ್ಯಾರಿಯವರು ಅಧ್ಯಯನ ನಡೆಸಿದರು. ಈ ಸಂದರ್ಭದಲ್ಲಿ ಮೊತ್ತ ಮೊದಲ ಬಾರಿಗೆ ಸೂತ್ರದ ಪರಿಕಲ್ಪನೆಯನ್ನು ಪ್ರಕಟಿಸಿದರು. ಒಂದು ನಿರ್ದಿಷ್ಟ ಛಂದೋ ರಚನೆಯ ಚೌಕಟ್ಟಿನೊಳಗೆ ಅಗತ್ಯವಾದ ಒಂದು ಆಲೋಚನೆಯನ್ನು ಕ್ರಮಬದ್ಧವಾಗಿ ವ್ಯಕ್ತಪಡಿಸಲು ಬಳಸುವ ಪದಗಳ ಗುಂಪು ಸೂತ್ರವಾಗುತ್ತದೆ. ಈ ನಿರ್ವಚನದ ಮೂಲಕ ಮೌಖಿಕ ಕಾವ್ಯಗಳಲ್ಲಿ ಕಾಣಿಸುವ ಪುನರಾವೃತ್ತಿಯ ಬಗೆಗಿನ ಸಂದಿಗ್ಧತೆ ಹಾಗೂ ಆತಂಕದ ಪ್ರಶ್ನೆಗೆ ಉತ್ತರಿಸುವುದು ಸಾಧ್ಯವಾಯಿತು. ಪ್ಯಾರಿಯವರು ಪುನರಾವರ್ತನಕ್ಕೊಳಗಾಗುವ ಪದ ಗುಂಪುಗಳನ್ನು ಸೂತ್ರದ ಚೌಕಟ್ಟಿನೊಳಗೆ ಅಳವಡಿಸಿದರೆ ಬೌರಾ ಅವರು ಪುನರಾವರ್ತಿತ ಪದ ಹಾಗೂ ಘಟನಾವಳಿಯೆರಡನ್ನು ಸೂತ್ರದೊಳಗೆ ಸೇರಿಸಬಹುದು ಎಂದರು. ಗಾಯಕನೊಬ್ಬನು ಪಾಡ್ದನದ ಕತೆಯನ್ನು ಅಮೂಲಾಗ್ರವಾಗಿ ಅರಿತಿರುತ್ತಾನೆ. ಕತೆಯಲ್ಲಿ ಬರುವ ಸೂಕ್ಷ್ಮ ಘಟನೆಗಳು ಕೂಡ ಆತನ ಅರಿವಿನಲ್ಲಿ ಮಡುಗಟ್ಟಿರುತ್ತದೆ. ಗಾಯಕ ಹಿರಿಯರಿಂದ ಕಥೆಯನ್ನು ಪಾಡ್ದನದ ರೂಪದಲ್ಲಿ ಬಹಳಷ್ಟು ಸಲ ಕೇಳಿರುತ್ತಾನೆ. ಹಾಗಾಗಿ ಹೊಸದಾಗಿ ಹಾಡುವ ಸಂದರ್ಭದಲ್ಲಿಯೂ ಸಮಸ್ಯೆಗಳು ಉಂಟಾಗುವುದಿಲ್ಲ. ಹಾಡುಗಳು ಆತನ ಸುತ್ತ ಮೊಳಗುತ್ತಿರುತ್ತವೆ. ಆತ ಹಾಡುಗಳ ವಾರಿಸುದಾರನಾಗಿರುತ್ತಾನೆ. ತಲೆಮಾರಿನಿಂದ ಬಂದ ಅನುಭವದಿಂದ ಆತ ಹಾಡಲು ಸನ್ನದ್ಧನಾಗಿರುತ್ತಾನೆ. ಎಳವೆಯಿಂದಲೇ ಕಾವ್ಯದ ಲಯ ಛಂದಸ್ಸು ಮತ್ತು ದಾಟಿಯನ್ನು ಗ್ರಹಿಸಿಕೊಂಡಿರುತ್ತಾನೆ. ಕಥನ ಕವನಗಳಲ್ಲಿ ಪರಂಪರಾಗತವಾಗಿ ಬಳಸುವ ನುಡಿಗಟ್ಟುಗಳು, ಪದಮುಂಜಗಳು, ವಾಕ್ಯ ರಚನಗಳು, ಒಕ್ಕಣೆ–ತಾರ್ಕಣೆಗಳು, ಗಾದೆಗಳು ಆತನಿಗೆ ಪುಂಖಾನುಪುಂಖವಾಗಿ ಗೋಚರಿಸುತ್ತವೆ.

ಹೀಗೆಯೇ ನಿತ್ಯಾನುಭವದ ಆಧಾರದ ಮೇಲೆ ನುಡಿಗಟ್ಟಿನ ಉದ್ದಳತೆ ಸ್ವರಗತಿ ಎಲ್ಲವನ್ನೂ ಆತ ನಿಯಂತ್ರಿಸಬಲ್ಲವನಾಗಿರುತ್ತಾನೆ. ಅನುಭವದ ಬಲದಿಂದ ಉಚ್ಚಾರ, ನಿಲುಗಡೆ, ಎತ್ತುಗಡೆಯನ್ನು ಆತ ಅರಿಯುತ್ತಾನೆ. ಕತೆಯ ಕಾಲ್ಪನಿಕ ಲೋಕದಲ್ಲಿ ವಿಹರಿಸುತ್ತಾ ಕತೆಯ ಹರಹನ್ನು ಮನಸ್ಸಿನಲ್ಲಿ ಮೂರ್ತಗೊಳಿಸಿಕೊಳ್ಳುತ್ತಾ ಹೋಗುತ್ತಾನೆ. ನಿರ್ದಿಷ್ಟವಾದ ನುಡಿಗಟ್ಟು, ಶಬ್ಧ ಭಂಡಾರ, ಘಟನಾ ಸರಣಿಗಳು ಆತನ ಕಿವಿಯ ಮೇಲೆ ಬಿದ್ದು, ಅವನಲ್ಲಿ ಒಂದು ಬಗೆಯ ಕಾವ್ಯ ಸಂಸ್ಕಾರವನ್ನುಂಟು ಮಾಡಿರುತ್ತದೆ. ಇದರ ಫಲವಾಗಿ ಅವನೊಳಗೆ ಸ್ಪಷ್ಟವಾಗಿ ಸೂತ್ರದ ಪರಿಕಲ್ಪನೆ ಆಕಾರ ಪಡೆದುಕೊಳ್ಳುತ್ತದೆ. ಛಂದೋಗತಿ ಪದ ವಿನ್ಯಾಸ ಶ್ರುತಿ ಸುಭಗತೆಗಳನ್ನು ಅಂತಸ್ತಗೊಳಿಸಿಕೊಂಡಾಗ ಅವನೊಳಗಿನ ಪರಂಪರೆಯ ಪ್ರಜ್ಞೆ ಅದನ್ನು ಪುನರ್ ಸೃಷ್ಟಿಗೆ ಒಳಪಡಿಸುತ್ತದೆ.*[3]

ಪ್ರೊ. ಅಮೃತ ಸೋಮೇಶ್ವರರವರು ಪಾಡ್ದನಗಳಲ್ಲಿ ಬರುವ ಇಂತಹ ಕೆಲವು ಸಾಂಪ್ರದಾಯಿಕ ನುಡಿಗಟ್ಟುಗಳನ್ನು ಹೆಸರಿಸಿದ್ದಾರೆ. (ನೋಡಿ:ಅನುಬಂಧ–3)ಇಂತಹ ನುಡಿಕಟ್ಟು ವಾಕ್ಯಗಳಲ್ಲದೆ ನಿರ್ದಿಷ್ಟ ಸನ್ನಿವೇಶಗಳನ್ನು ವರ್ಣಿಸುವ ವಾಕ್ಯವೃಂದಗಳು ಹೇರಳವಾಗಿವೆ. ಉದಾ: ಬೆಳಿಗ್ಗೆ ಎದ್ದು ಕಲ್ಲುಕಟ್ಟಿದ ಬಾವಿಯ ಬಳಿಗೆ ಹೋಗುವುದು, ಆಕಾಶದ ಎತದಿಂದ ಪಾತಾಳದ ಹನಿ ನೀರು ಸೇದುವುದು, ಮುಖ ಮಾರ್ಜನ, ಮೈಗೆ ಹಚ್ಚುವ ಬಗೆ ಬಗೆಯ ಎಣ್ಣೆಗಳು, ಸಾವಿರ ಕೊಡ ತಣ್ಣೀರಿನ ಸ್ನಾನ, ಮೈಯೊರೆಸುವ ನವಿರಾದ ಬಟ್ಟೆ, ಗಂಧ ತೇಯುವಿಕೆ, ಅಂದಕ್ಕೆ ಗಂಧ ಭಕ್ತಿಗೆ ವಿಭೂತಿ,

ಅಡುಗೆಯ ಸಡಗರ, ಊಟದ ಸೊಗಸು, ವೀಳ್ಯ ಹಾಕುವುದು, ಉಡುಗೆ ತೊಡುಗೆ, ಬಗೆ ಬಗೆಯ ಆಭರಣ ಧರಿಸುವಿಕೆ, ಪ್ರಯಾಣ ದಾರಿಯ ವಿವರಗಳು, ಆಯಾಸ, ಆತಿಥ್ಯ ಮನೆಮಾರುಗಳ ವರ್ಣನೆ, ಜನನದಿಂದ ತೊಡಗಿ ಮರಣದ ವರೆಗೆ ಬೇರೆ ಬೇರೆ ಆಚರಣೆಗಳು, ವಿದ್ಯಾಭ್ಯಾಸ ಓಲಗ, ಓಲೆ ಬರೆಸುವಿಕೆ, ಓಲೆ ಒಯ್ಯುವಿಕೆ, ಬೇಟೆ ಕಂಬಳ ಇತ್ಯಾದಿಗಳನ್ನು ವರ್ಣಿಸುವ ವಿವರಣೆಗಳಿವೆ. ಸೃಷ್ಟಿ ಚೋದ್ಯ ಉತ್ಪಾತಗಳು ದೈವಗಳ ಕಾರಣೀಕ ಇತ್ಯಾದಿಗಳನ್ನು ವರ್ಣಿಸುವ ಸೂತ್ರ ವಾಕ್ಯಗಳು ಇವೆ.

ಕೆಲವೊಂದು ವರ್ಗಗಳನ್ನು ಅಥವಾ ವೃತ್ತಿಯನ್ನು ಪ್ರತಿನಿಧಿಸಲು ನಿರ್ದಿಷ್ಟ ಹೆಸರುಗಳನ್ನು ಪಾಡ್ದನಗಳಲ್ಲಿ ಬಳಸಲಾಗಿದೆ. ಇದು ಕೂಡ ಒಂದು ಬಗೆಯ ಸೂತ್ರ ಚಿಹ್ನೆಯೇ ಆಗಿದೆ. ಉದಾ: ಓಲೆ ಬರೆಯುವವನು ಸೇನವ, ಓಲೆ ಒಯ್ಯುವವನು ಓಲೆದ ಅಬ್ಬಣ್ಣ, ಬೇಟೆ ನಾಯಿಗಳನ್ನು ತರುವವನು ನಾಯಿದ ಮಲ್ಲೋಡಿಗಾರೆ, ಮಡಿವಾಳಗಿತ್ತಿ ಮಡ್ಯೋಳ್ತಿ ಚೆಲಿವೆ, ಸೂಲಗಿತ್ತಿ ಪದತಿ ಬಂಬೆ, ಸುಂಕದವನು ಸುಂಕದ ದೇರೆ, ದೋಣಿಯವನು ಓಡದ ಕುಂಞಿ, ಮೂಲದವನು ಬಬ್ಬು, ಸೂಳೆ-ಸಿದ್ದು ಇವೇ ಮೊದಲಾದ ನಿರ್ದಿಷ್ಟ ನುಡಿಕಟ್ಟು, ವಾಕ್ಯ ಸರಣಿಗಳಿಂದ ಹೆಣೆಯಲ್ಪಟ್ಟ ಸೂತ್ರಬದ್ಧ ರಚನೆಯೇ ಪಾಡ್ದನ ಶೈಲಿಯ ಜೀವಾಳ ಮತ್ತು ವೈಶಿಷ್ಟ್ಯ.

ಪಾಡ್ದನಗಳ ಸಾಮಾನ್ಯ ಕಥಾ ವಿವರಗಳನ್ನು ಹೇಳುವ ಸಂದರ್ಭದಲ್ಲಿ ಕೆಲವು ಸ್ಥಿರ ಸೂತ್ರಗಳು ನಮ್ಮ ಗಮನಕ್ಕೆ ಬರುತ್ತವೆ. ಲಾರ್ಡ್ ಆಲ್ಬರ್ಟ್ ಬಿ ಅವರು ಹೇಳುವಂತೆ ಪಾತ್ರಗಳ ಅಂಕಿತನಾಮ ಮುಖ್ಯ ಕ್ರಿಯೆಗಳು ಕಾಲ ಮತ್ತು ಸ್ಥಳಗಳನ್ನು ಸೂಚಿಸತಕ್ಕ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುವ ಕೆಲವೊಂದು ನಿರ್ದಿಷ್ಟ ಪ್ರಾಸಂಗಿಕ ಘಟನೆಗಳನ್ನು ಕ್ಷೌರ ಅಭ್ಯಂಜನ ಅಲಂಕರಣ, ಓಲೆ ತಯಾರಿ, ಓಲೆ ಬರೆಯಿಸುವುದು, ಬೇಟೆಯ ವಿವರಗಳನ್ನು ಪ್ರಾಸಂಗಿಕ ಸೂತ್ರಗಳೆನ್ನಬಹುದಾಗಿದೆ. ಇಂತಹ ಪ್ರಾಸಂಗಿಕ ಸೂತ್ರಗಳ ವಸ್ತು ಹಲವು ಪಾಡ್ದನಗಳಲ್ಲಿ ಒಂದೇ ಆಗಿದ್ದರೂ ಅವು ಸಾಲುಗಳಲ್ಲಿ ವ್ಯಕ್ತಗೊಳ್ಳುವ ವಿನ್ಯಾಸ ಒಬ್ಬರಿಂದ ಇನ್ನೊಬ್ಬರಿಗೆ ವ್ಯತ್ಯಾಸವಾಗುತ್ತದೆ. ಪಾತ್ರಧಾರಿಗಳ ಹೆಸರು ಸ್ಥಳೀಯ ವಿವರಗಳು ಬಹುರೂಪಿಯಾಗಿರುತ್ತವೆ. ಈ ಹಿನ್ನಲೆಯಲ್ಲಿ ಹಿಂದೆ ಹೇಳಿದ ಸೂತ್ರದ ನಿರ್ವಚನವನ್ನು ವಿಸ್ತರಿಸಬಹುದು. ಸೂತ್ರಗಳೆಂದು ಕರೆಯಬಹುದಾದ ನುಡಿಕಟ್ಟು ಪಂಕ್ತಿ ಪ್ರಾಸಂಗಿಕ ಘಟನೆಗಳನ್ನು ಸುವ್ಯವಸ್ಥಿತವಾಗಿ ಬೆಸೆಯುವ ಮೂಲಕ ಒಂದು ಕಥೆ ಅಥವಾ ವಸ್ತುವನ್ನು ಪಾಡ್ದನಗಳಲ್ಲಿ ವಿಸ್ತರಿಸಲಾಗುತ್ತದೆ. ಈ ಸೂತ್ರಗಳು ಬೇರೆ ಬೇರೆ ಕಥೆಗಳನ್ನೇ ಪ್ರತಿಮೆಗಳನ್ನಾಗಿ ಒಳಗೊಂಡಿರುವ ಪಾಡ್ದನಗಳ ಒಂದು ಭಾಗವಾಗುತ್ತದೆ.

ಮಗುವೊಂದು ಮಾತು ಕಲಿಯುತ್ತಾ ತನ್ನ ಶಬ್ದ ಭಂಡಾರವನ್ನು ವಿಸ್ತರಿಸುತ್ತಾ ಹೋಗುವಂತೆ ಕಥಾನಾಯಕನೊಬ್ಬನ ಹಾಡುಗಬ್ಬವು ಪ್ರದರ್ಶನದಿಂದ ಪ್ರದರ್ಶನಕ್ಕೆ ಪರಿಷ್ಕಾರಗೊಳ್ಳುತ್ತಾ ಹೋಗುತ್ತದೆ. ಹೀಗೆ ಪ್ರದರ್ಶನಗಳ ಮೂಲಕ ಹುಟ್ಟಿಕೊಳ್ಳುವ ಪದಗಳ ಜೋಡಣೆಯ ವಿನ್ಯಾಸವು ದೈನಂದಿನ ಆಡುನುಡಿಯ ವಿನ್ಯಾಸಕ್ಕಿಂತ ಬೇರೆಯಾಗಿರುತ್ತದೆ. ಕ್ರಿಯಾಪದವು ಸಾಮಾನ್ಯ ರೀತಿಯಲ್ಲಿ ಜೋಡಣೆಯಾಗಿರಬಹುದು. ಸಹಾಯಕ ಕ್ರಿಯಾಪದವು ಇಲ್ಲದೆ ಹೋಗಬಹುದು. ವಿಭಕ್ತಿ ಪ್ರತ್ಯಯಗಳು

ಪಲ್ಲಟಗೊಳ್ಳಬಹುದು. ಈ ಮೂಲಕ ಉಂಟಾಗುವ ವಿಶಿಷ್ಟ ಪರಿಣಾಮಗಳಿಂದ ಪ್ರಭಾವಿತನಾದ ಅವನು ಕಥಾಗಾಯನ ಸಂದರ್ಭದಲ್ಲಿ ಪದರಚನಾ ವಿನ್ಯಾಸದಲ್ಲಿ ಹೊಸತನವನ್ನು ಹುಟ್ಟು ಹಾಕುವನು. ನುಡಿಕಟ್ಟುಗಳ ಜೋಡಣೆಯಲ್ಲಿ ಅನುರೂಪತೆ ವೈರುಧ್ಯ ಸಮತೋಲನ, ಸಾಲಿನ ಕೊನೆಯಲ್ಲಿ ಕಾಣಿಸಿಕೊಳ್ಳುವ ಕ್ರಿಯಾಪದ ಮತ್ತೆ ಮುಂದಿನ ಸಾಲುಗಳಲ್ಲಿ ಕಾಣಿಸಿಕೊಳ್ಳುವ ಪ್ರಕ್ರಿಯೆ ಗಾಯಕನಿಗೆ ಆಪ್ತವಾಗುತ್ತಾ ಹೋಗುತ್ತದೆ.

ಪಾಡ್ದನಗಳನ್ನು ಸಾಮಾನ್ಯವಾಗಿ ಇಬ್ಬರು ಹಾಡುವುದು ರೂಢಿ. ಇಬ್ಬರ ಕೈಯಲ್ಲೂ ತೆಂಬರೆ ಅಥವಾ ಡೋಲು ಇರುತ್ತದೆ. ಮುಖ್ಯ ಗಾಯಕ ಹಾಡಿನ ಒಂದು ಸೊಲ್ಲನ್ನು ಹೇಳಿ ನಿಲ್ಲಿಸಿದಾಗ ಸಹಾಯಕ ಅದನ್ನು ಪುನರುಚ್ಚರಿಸುತ್ತಾನೆ. ಮುಖ್ಯ ಗಾಯಕನ ಹಾಡಿನ ಸಾಲು ತಪ್ಪಿದಾಗ ಅಥವಾ ಅರ್ಧದಲ್ಲೇ ನಿಂತಾಗ ಸಹಾಯಕ ಸಾಲನ್ನು ಪೂರ್ಣಗೊಳಿಸಿ ಹಾಡುತ್ತಾನೆ. ನುಡಿಗಟ್ಟು ಶಬ್ದ ಸಮರ್ಪಕವಾಗಿದ್ದಲ್ಲಿ ಬದಲಾಯಿಸಿಕೊಂಡು ಹಾಡುತ್ತಾನೆ. ಮುಂದಿನ ಸಾಲು ಮುಖ್ಯ ಗಾಯಕನ ಸ್ಮರಣೆಗೆ ಬಂದಿಲ್ಲವೆಂದು ತಿಳಿದಾಗ ಮುಂಚಿನ ಸಾಲನ್ನು ಸಹಾಯಕನೇ ಎತ್ತಿಕೊಡುತ್ತಾನೆ. ಪ್ರಧಾನ ಗಾಯಕನಿಗೆ ಸಾಲುಗಳು ಮರೆತುಹೋದರೆ ಆತ ತಾನು ಮೊದಲು ಹೇಳಿದ ಸಾಲನ್ನೇ ಪುನರುಚ್ಚರಿಸುವಾಗ ಆತನ ಆಕಾಂಕ್ಷೆಯನ್ನು ಸಹಾಯಕ ಅರಿತುಕೊಂಡು ಕೂಡಾ ಹೊಸ ಸಾಲನ್ನು ಎತ್ತಿ ತೋರಿಸುತ್ತಾನೆ.

ಪಾಡ್ದನಗಳನ್ನು ಹಾಡುವಾಗ ಗಾಯಕರು ಮೊದಲಿಗೆ ಡೆನ್ನ..... ಡೆನ್ನಾನ. . . ಡೆನ್ನ. . . ಡೆನ್ನಾನ. . . ಡೆನ್ನ. . . ಡೆನ್ನಾನ. . .ಯೇ ಎಂದು ಆಲಾಪನ ತೆಗೆಯುತ್ತಾರೆ. ಈ ಆಲಾಪನ ಪಾಡ್ದನದ ಮುಂದಿನ ಭಾಗವನ್ನು ಸ್ಮರಣೆಗೆ ತಂದುಕೊಳ್ಳಲು ಸಹಾಯಕವಾಗುತ್ತದೆ. ಕೆಲವೊಮ್ಮೆ ಈ ಆಲಾಪನೆಯ ಅವಧಿಯಲ್ಲಿ ಸಹಾಯಕನು ಕೂಡ ಪಾಡ್ದನದ ಭಾಗವನ್ನು ನೆನಪಿಸಿಕೊಡಲು ಪ್ರಧಾನ ಗಾಯಕನಿಗೆ ಸಹಾಯಕವಾಗುತ್ತಾನೆ. ಪಾಡ್ದನಗಳನ್ನು ಬೇರೆ ಬೇರೆ ಧಾಟಿಗಳಲ್ಲಿ ಹೇಳಲಾಗುತ್ತದೆ. ಆ ಧಾಟಿಗೆ ನಿರ್ದಿಷ್ಟ ತಾಳಗತಿಗಳನ್ನು ಹೇಳಲು ಪ್ರಧಾನ ಗಾಯಕನಿಗೆ ಬರುವುದಿಲ್ಲ. ಆಲಾಪನಯ ಮೂಲಕ ಆತ ಸಹಾಯಕನಿಗೆ ಧಾಟಿ ಹಾಕಿ ತೋರಿಸಬೇಕಾಗುತ್ತದೆ. ಆಲಾಪನೆಯ ತಾಳಗತಿಯನ್ನರಿತುಕೊಂಡು ಸಹಾಯಕನು ಪ್ರಧಾನ ಗಾಯಕನ ಹಾಡಿಗೆ ಧ್ವನಿಗೂಡಿಸುತ್ತಾನೆ. ಹೀಗೆ ಗಾಯಕ ಸಹಾಯಕರಿಬ್ಬರೂ ಧಾಟಿಯನ್ನು ಸಮನ್ವಯ ಮಾಡಿಕೊಳ್ಳಲು ಕೂಡ ಆಲಾಪನೆಯು ಸಹಕರಿಸುತ್ತದೆ. ಇದು ಸಹಾಯಕನ ಕಲಿಕೆಗೆ ಅವಕಾಶ ಮಾಡುತ್ತದೆ. ಆದರೆ ಪಾಡ್ದನದ ಸಾಲುಗಳು ಒಂದೇ ರೀತಿಯದ್ದಾಗಿರುವುದಿಲ್ಲ. ಕೆಲವೊಂದು ದೀರ್ಘವಾಗಿರುತ್ತದೆ. ಕೆಲವೊಂದು ಹ್ರಸ್ವವಾಗಿರುತ್ತದೆ. ತಾಳದ ಗತಿಗನುಸಾರವಾಗಿ ಎರಡು ಸಾಲುಗಳನ್ನೂ ಸಮಾನ ಸ್ಥಿತಿಗೆ ತರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅವರು ಸಾಲಿನ ಕೊನಯಲ್ಲಿ ಓ.....ಲೇ.......ಯೇ...... ಎಂಬ ಪ್ಲುತವನ್ನು ಬಳಸಿ ಸಾಲುಗಳನ್ನು ಸಮಾನ ತಾಳ ಗತಿಗೆ ತರುತ್ತಾರೆ.

ಈ ಬಗೆಗೆ ಪೀಟರ್ ಜೆ. ಕ್ಲಾಸ್ ಅವರು 'ಪಾಡ್ದನಗಳು ಖಚಿತವಾದ ಛಂದೋ ನಿಯಮಗಳಿಗೆ ಒಳಗಾದ ರಚನೆಗಳಲ್ಲ. ಆದರೆ ನಿಯಮಿತವಾದ ಲಯಬದ್ಧತೆ

ಉಳ್ಳವುಗಳು. ಅದನ್ನೇ ಅವರು ಧಾಟಿ ಎನ್ನುತ್ತಾರೆ. ಡೆನ್ನ. . . ಡೆನ್ನಾನ. . .ಎನ್ನುವ ಪದಗಳಿಂದ ಆರಂಭವಾಗುವ ಸಾಲುಗಳು ಮುಂದಿನ ಸಾಲುಗಳ ರೂಪ, ಲಯ ಹಾಗೂ ಶ್ರಾವಕತೆಯನ್ನು ರೂಪಿಸುವುದರಲ್ಲಿ ನೆರವಾಗುತ್ತದೆ. ಹೀಗೆ ಸಾಧಿಸಿಕೊಂಡ ಸ್ಥಿರತೆಯನ್ನು ಗಾಯಕ ಉದ್ದಕ್ಕೂ ಉಳಿಸಿಕೊಂಡು ಬರಬೇಕಾಗುತ್ತದೆ. ಆಲೋಚನೆಯೂ ಅದರ ಅಭಿಮತವನ್ನು ಕಾವ್ಯದ ಖಚಿತ ರೂಪ ಅಥವಾ ಧಾಟಿಯ ಚೌಕಟ್ಟಿಗೆ ಅಳವಡಿಸಿಕೊಳ್ಳಲು ಇದು ಸಹಾಯಕವಾಗುತ್ತದೆ,*4 ಎಂದಿದ್ದಾರೆ.

ಪಾಡ್ದನದ ಗಾಯಕರೆಲ್ಲ ಆಶುಕವಿಗಳೆಂದೂ ಪಾಡ್ದನದ ಕತೆ ತಿಳಿದಿದ್ದವರು ಒಮ್ಮಿಂದೊಮ್ಮೆಗೆ ಪಾಡ್ದನ ಹೇಳಿಕೊಂಡು ಹೋಗಲು ಸಾಧ್ಯವೆಂದು ಹೇಳಲು ಬರುವುದಿಲ್ಲ. ಮೊದಲಿಗೆ ಪಾಡ್ದನಗಳನ್ನು ಕೇಳಿ ತಿಳಿದುಕೊಂಡು ಮನದಟ್ಟು ಮಾಡಿಕೊಳ್ಳುತ್ತಾ ಸಹಾಯಕ ಗಾಯಕನಾಗಿ ಹಾಡುವ ಅಭ್ಯಾಸ ನಡೆಸುತ್ತಾರೆ. ಹೀಗೆ ಅನುಭವ ಹೆಚ್ಚಿಸಿಕೊಳ್ಳುತ್ತಾ ಹೋದಂತೆ ಅವರು ಗಾಯನದ ಸ್ವಾಮ್ಯವನ್ನು ಪಡೆಯಲು ಸಾಧ್ಯವಾಗುತ್ತದೆ. ಒಬ್ಬ ಕಲಿಕಾರ್ಥಿಯ ಪ್ರತಿಭೆಗನುಗುಣವಾಗಿ ಕಲಿಕೆಯ ವೇಗ ನಿರ್ಧರಿಸಲ್ಪಡುತ್ತದೆ.

2.4.ಗಾದೆ

ಅನುಭವದ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಸೂಕ್ತಿಗಳೇ ಗಾದೆ. ಜನಪದ ಸಾಹಿತ್ಯದ ಉಳಿದೆಲ್ಲಾ ಪ್ರಕಾರಗಳನ್ನು ಕಂಠಸ್ಥರೂಪದಲ್ಲಿ ಇಲ್ಲಾ ಅನುಕರಣೆಯ ರೂಪದಲ್ಲಿ ಬಳಸಬಹುದು. ಆದರೆ ಗಾದೆಯನ್ನು ಮಾತ್ರ ಸಂದರ್ಭ ಮತ್ತು ಅನುಭವದ ಹೊಂದಾಣಿಕೆಯಿಂದ ಮಾತ್ರ ಬಳಸಲು ಸಾಧ್ಯವಾಗುತ್ತದೆ. ಅಂದರೆ ನಿರ್ದಿಷ್ಟ ಮಾತಿನ ಸಂದರ್ಭದಲ್ಲಿ ಅದಕ್ಕೆ ಸೂಕ್ತವಾದ ಮತ್ತು ಮಾತಿಗೆ ಹೆಚ್ಚಿನ ಮಾನ್ಯತೆ ನೀಡುವ ನಲೆಯಲ್ಲಿ ಗಾದೆಯನ್ನು ಬಳಸಬೇಕಾದರೆ ಬಳಸುವ ವ್ಯಕ್ತಿ ಪಕ್ವಗೊಂಡಿರಬೇಕು. ಎಳೆಯ ವ್ಯಕ್ತಿಗಳಿಗೆ ಗಾದೆಯ ಬಳಕೆ ಅಷ್ಟು ಸುಲಭ ಸಾಧ್ಯವಲ್ಲ. ಆದ್ದರಿಂದ ಗಾದೆಯ ಕಲಿಕೆ ಎನ್ನುವುದು ಜನಪದ ಸಾಹಿತ್ಯದಲ್ಲೇ ಹೆಚ್ಚು ಕಾಲವನ್ನು ಬಯಸುವ ಕಲಿಕೆ. ಅಂದರೆ ಒಂದು ಗಾದೆಯ ಬಳಕೆ ಯಾವ ಹಂತದಲ್ಲಿ ನಡೆಯುತ್ತದೆ ಎನ್ನುವುದನ್ನು ಕಾದು ಕುಳಿತಂತೆ ಗಮನಿಸುತ್ತಾ ಮುಂದೆ ತಾನು ಮಾತನಾಡುವ ಹಂತದಲ್ಲಿ ಅದನ್ನು ಉದ್ದೇಶ ಪೂರ್ವಕವಾಗಿ ಬಳಸುತ್ತಾ ಇದ್ದರೆ ಮಾತ್ರ ಗಾದೆ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ.

ಗಾದೆಯಲ್ಲಿರುವ ಸಂಕ್ಷಿಪ್ತತೆ, ಸೂಚ್ಯಕವಾದ ಧ್ವನಿಶಕ್ತಿ, ವಿವೇಕ ಪೂರ್ಣತೆ, ತೀಕ್ಷ್ಣತೆ ಹಾಗೂ ಜನಪ್ರಿಯತೆಯ ಲಕ್ಷಣಗಳೇ ಅದನ್ನು ಕಲಿಯಲು ಪ್ರೇರೇಪಿಸುತ್ತದೆ. ಅತ್ಯಂತ ಸಂಕ್ಷಿಪ್ತ ರೂಪದಲ್ಲಿರುವ ವಾಕ್ಯ ಸರಣಿ ಗಾದೆಗಳಲ್ಲಿ ಹೆಚ್ಚು ಪ್ರಭಾವಶಾಲಿಯಾದುದು. ಹೆಚ್ಚು ಪದಗಳ ಬಳಕೆಯಾದಂತೆ ಅದರ ಅರ್ಥವ್ಯಾಪ್ತಿಯಲ್ಲಿ ಕಡಿಮೆ ಮೌಲ್ಯಗಳಿರುವುದು ಗಾದೆಯ ಪ್ರಮುಖ ಸ್ವರೂಪ. ಆದ್ದರಿಂದ ಗಾದೆಯು ಸೂತ್ರಪ್ರಾಯವಾಗಿ ಇರುವುದೇ ಹೆಚ್ಚು. ಆ ಗಾದೆಗಳಲ್ಲಿರುವ ವ್ಯಂಗ್ಯ, ವಕ್ರೋಕ್ತಿ, ಉತ್ಪ್ರೇಕ್ಷೆ, ಉಪಮೆಗಳು ಕೇಳುವುದಕ್ಕೆ ಹಾಗೂ ಹೇಳುವುದಕ್ಕೆ ಆಕರ್ಷಣೀಯವಾಗಿರುವುದೂ ಇದರ ಕಲಿಕೆಗೆ ಹೆಚ್ಚಿನ ಅವಕಾಶ

ಮಾಡಿಕೊಡುತ್ತದೆ. ಇದಲ್ಲದೇ ಪ್ರಾಸದೊಂದಿಗೆ ಇತರ ಕಾವ್ಯ ಗುಣಗಳು ಗಾದೆಗಳಲ್ಲಿದೆ. ಇದು ಹೆಚ್ಚು ನೆನಪಿನಲ್ಲಿರುವಂತೆಯೂ ಮಾಡುತ್ತದೆ. ಗಾದೆಯ ಇನ್ನೊಂದು ವಿಶೇಷ ಗುಣವೆಂದರೆ ಕಾಲಕ್ಕೆ ತಕ್ಕಂತೆ ಹೊಂದಿಕೆಯಾಗುವುದು. ಹಳೆಯ ಗಾದೆಗಳು ನಶಿಸಿ ಹೊಸ ಗಾದೆಗಳು ಹುಟ್ಟಿಕೊಳ್ಳುವುದು ಸಾಂಸ್ಕೃತಿಕ ಬದಲಾವಣೆಯ ದ್ಯೋತಕವಾಗಿರುತ್ತದೆ. ಈ ಬದಲಾದ ಸನ್ನಿವೇಶವನ್ನು ಗಮನಿಸುತ್ತಾ ಗಾದೆಯನ್ನು ಮರು ಸೃಷ್ಟಿ ಮಾಡುವ ಕಾರ್ಯ ಓರ್ವ ಪ್ರಜ್ಞಾವಂತ ಜನಪದನಿಂದ ನಡೆಯುತ್ತದೆ.

ಸಾಮಾನ್ಯವಾಗಿ ಗಾದೆಯೂ ಉಳಿದ ಜನಪದ ಸಾಹಿತ್ಯಗಳಂತೆ ಅಜ್ಞಾತನಿಂದಲೇ ಹುಟ್ಟಿಕೊಳ್ಳುತ್ತದೆ. ಆತನ ಅನುಭವದ ಸೃಷ್ಟಿ ಇದಾಗಿರುತ್ತದೆ. ಅನುಭವವನ್ನು ಲಿಖಿತವಾಗಿ ದಾಖಲಿಸಲು ಸಾಧ್ಯವಿಲ್ಲದ ಕಾಲದಲ್ಲಿ ಇದನ್ನು ಇನ್ನೊಬ್ಬನಿಗೆ ಕಥೆಯ ರೂಪದಲ್ಲಿ ಹೇಳಿಕೊಳ್ಳುವ ಸಾಧ್ಯತೆಯೂ ಇದೆ. ಈ ಕತೆಯನ್ನು ಗ್ರಹಿಸಿದ ವ್ಯಕ್ತಿ ಅದಕ್ಕೆ ಸಂಕ್ಷಿಪ್ತ ರೂಪ ಕೊಟ್ಟು ಒಂದೆರಡು ಪುಟ್ಟ ಸಾಲುಗಳ ಅಥವಾ ಪುಂಜಗಳ ಸೂಕ್ತಿಗಳನ್ನು ರಚಿಸುತ್ತಾನೆ. ಇದಲ್ಲದೇ ತನ್ನಿಂದ ತಾನೇ ಉದ್ಗಾರ ರೂಪದಲ್ಲಿ ಕೆಲವೊಮ್ಮೆ ಗಾದೆಗಳು ಹುಟ್ಟಿಕೊಳ್ಳುತ್ತವೆ. ಈ ಉದ್ಗಾರವನ್ನು ಉದ್ಗರಿಸಿದ ವ್ಯಕ್ತಿಗೆ ಅದರ ಸೊಗಸು ಅದನ್ನು ಮತ್ತೆ ಮತ್ತೆ ಬಳಸುವಂತೆ ಮಾಡುತ್ತದೆ. ಇದು ಇತರರ ಬಾಯಿಯಲ್ಲೂ ಬಳಕೆಯಾಗುವುದರಿಂದ ಅದಕ್ಕೆ ಸಾರ್ವತ್ರಿಕ ಮಾನ್ಯತೆ ದೊರಕುತ್ತದೆ. ಸಾಮಾನ್ಯವಾಗಿ ಗಾದೆಗಳ ರಚನಯಲ್ಲಿ ಮನೆಯ ಹಿರಿಯರು ಅಥವಾ ಊರಿನ ಮುಖಂಡರ ಪಾತ್ರವೇ ಮುಖ್ಯವಾಗಿರುತ್ತದೆ. ಇದರ ಮಾತಿಗೆ ಹೆಚ್ಚಿನ ಮಾನ್ಯತೆ ಇರುವುದರಿಂದ ಈ ಮಾತನ್ನು ಸಮಾಜದ ಉಳಿದವರೂ ಬಳಸುವ ಸಾಧ್ಯತೆ ಇದೆ.

ಸಾಮಾನ್ಯವಾಗಿ ಗಾದೆ ಸೃಷ್ಟಿಯಾಗುವ ಮುನ್ನ ಅದು ಒಂದು ಘಟನೆ ಅಥವಾ ಒಂದು ನಿರ್ದಿಷ್ಟ ಕಾರ್ಯಕ್ಕೆ ಕಾರ್ಯಕಾರಿ ಸಂಬಂಧವನ್ನು ಹೊಂದಿರುವ ಕಾರಣ ಹಿನ್ನೆಲೆಯಲ್ಲಿನ ಸಂದರ್ಭಗಳೇ ಮುನ್ನಲೆಯ ಮಾತಿಗೆ ಪ್ರೇರಣೆವಾಗಿರುತ್ತದೆ. ಉದಾಹರಣೆಗೆ 'ಪಿಜಿನ್‌ಗ್ ದಾಯೆ ಕರ್ಬದ ಬೇಲೆ' (ಇರುವೆಗೆ ಯಾಕೆ ಕಬ್ಬಿಣದ ಕೆಲಸ) ಕಬ್ಬಿಣದ ಕೆಲಸ ಪರಿಶ್ರಮದಿಂದ ಕೂಡಿದ್ದು ಇರುವೆಯಂತಹಾ ಸಾಮಾನ್ಯ ಜೀವಿಗೆ ಅದು ಸಾಧ್ಯವಿಲ್ಲ. ಆದ್ದರಿಂದ ಸಾಮಾನ್ಯನು ಅಸಾಮಾನ್ಯ ಕೆಲಸ ಮಾಡುವ ಸಂದರ್ಭದಲ್ಲಿ ಈ ಗಾದೆ ಹುಟ್ಟಿಕೊಂಡಿರುತ್ತದೆ. ಒಬ್ಬ ಕಲಿಕಾರ್ಥಿಯ ಮುಂದೆ ಆತ ನಿತ್ಯ ಕಾಣುವ ಎರಡು ಭೌತಿಕ ವಸ್ತು (ಜೀವಿ)ಗಳು ಕಬ್ಬಿಣ ಮತ್ತು ಇರುವೆ. ಅದರಲ್ಲಿ ಅತ್ಯಂತ ಸಣ್ಣ ಜೀವಿಯಾದ ಇರುವೆ ಮತ್ತು ಅತ್ಯಂತ ಕಠಿಣ ವಸ್ತುವಾದ ಕಬ್ಬಿಣ ಇವೆರಡು ಕಲಿಕಾರ್ಥಿಯ ಅನುಭವಕ್ಕೆ ಬಂದ ವಸ್ತು ಮತ್ತು ಜೀವಿ. ಇವೆರಡನ್ನು ಇಟ್ಟುಕೊಂಡು ಇನ್ನೊಂದು ಘಟನಗೆ ಕಾರ್ಯಕಾರಿ ಸಂಬಂಧವನ್ನು ಹಣೆಯುವುದೇ ಜಾಣ್ಮೆ. ಈ ಜಾಣ್ಮೆಗೆ ಆತನ ರೂಪಕ ಸ್ವಭಾವ ಪ್ರೇರಣೆಯಾಗಿರುತ್ತದೆ.

ಇದೇ ರೀತಿ ಇನ್ನೊಂದು ಉದಾಹರಣೆಯನ್ನು ಗಮನಿಸಿದರೆ, 'ರಾಗ ಬನ್ನಗ ತಂತಿ ಕಡಿಂಡ್'(ರಾಗ ಬಂದಾಗ ತಂತಿ ತುಂಡಾಯಿತು). ಒಂದು ಕಾರ್ಯ ನಡೆಸಲು ಸಂಪೂರ್ಣ ಸಿದ್ಧವಾದ ಸಂದರ್ಭದಲ್ಲಿ ಆಗುವ ಪ್ರಧಾನ ತೊಡಕನ್ನು ಇಟ್ಟುಕೊಂಡು ರಚನೆಯಾದ ಗಾದೆ ಇದಾಗಿದೆ. ಇದನ್ನು ರಚಿಸಿದಾತನ ಅನುಭವದ ಧ್ವನಿ ಇರುವುದು,

ನಿರಾಶೆ ಮತ್ತು ನಿಷ್ಪ್ರಯೋಜಕತ್ವದಲ್ಲಿ. ಈ ಗಾದೆ ಹುಟ್ಟಿಕೊಳ್ಳುವ ಕಾರ್ಯಕಾರಿ ಸಂಬಂಧವೆಂದರೆ, ಕೆಲಸ ಪ್ರತಿಫಲ ನೀಡದೇ ಇರುವುದೇ ಆಗಿದೆ. ಇಂತಹಾ ಗಾದೆಗಳು ಸಾಮಾನ್ಯವಾಗಿ ನಿರಾಶೆಗೆ ಉತ್ತರವಾಗಿ ಅಥವಾ ಸಾಂತ್ವನದ ರೂಪದಲ್ಲಿ ಹುಟ್ಟಿಕೊಳ್ಳುತ್ತವೆ. ಬೇರೆಬೇರೆ ಭಾಷೆ ಪ್ರದೇಶಗಳಲ್ಲಿ ಇವುಗಳನ್ನು ಬೇರೆಬೇರೆ ರೂಪಸಾದೃಶ್ಯಗಳ ಮೂಲಕ ಗುರುತಿಸುತ್ತಾರೆ. ಇದಲ್ಲದೇ ಗಾದೆ ರಚನೆಯ ಅನುಭವಸ್ಥನಲ್ಲಿ ಉಪಮೆ, ಉತ್ಪ್ರೇಕ್ಷೆ, ದೃಷ್ಟಾಂತಗಳೂ ಇರುತ್ತವೆ. (ನೋಡಿ: ಅನುಬಂಧ-4) ಇದನ್ನು ಒಬ್ಬ ಕಲಿಕಾರ್ಥಿಯೂ ಗಮನಿಸುತ್ತಾ ಇರುವುದು ಮತ್ತು ಅದನ್ನು ತಾನು ಅರ್ಥೈಸಿ ಹೇಳುವುದು ಗಾದೆಯ ವಿಶೇಷತೆ.

ಈ ಮೇಲಿನ ವಿವರಣೆಯ ಆಧಾರದಲ್ಲಿ ನಾವು ಗಾದೆಯ ಕಲಿಕೆಯ ಬಗ್ಗೆ ಈ ಕೆಳಗಿನ ತೀರ್ಮಾನಕ್ಕೆ ಬರಲು ಸಾಧ್ಯವಿದೆ.

1. ಗಾದೆಯ ಕಲಿಕೆ ಸಾಮಾನ್ಯವಾಗಿ ಅನುಭವ ಸಾಂದ್ರತೆಯ ಮಧ್ಯೆ ಹೆಚ್ಚು ನಡೆಯುತ್ತದೆ.
2. ಆಶಯ ಒಂದೇ ಆಗಿರುವ ಹೇಳಿಕೆಗಳಲ್ಲಿ ಪ್ರಾದೇಶಿಕ ಭಿನ್ನತೆ ಇರುವ ಗಾದೆಗಳು ಹೆಚ್ಚು ಕಲಿಕೆಗೆ ಒಳಗಾಗುತ್ತದೆ. ಇವುಗಳ ಬಳಕೆ ಹೆಚ್ಚಾಗಿರುವುದೇ ಇದಕ್ಕೆ ಕಾರಣ.
3. ತುಳು ಗಾದೆಗಳಿಗೆ ಭಾಷೆಯ ನಲೆಯಲ್ಲಿ ಪ್ರಾದೇಶಿಕ ಮಿತಿ ಇದೆಯೇ ಹೊರತು ಆಶಯದ ನೆಲೆಯಲ್ಲಿ ಇರುವುದಿಲ್ಲ. ಆದ್ದರಿಂದ ತುಳುನಾಡಿನಲ್ಲಿ ಇರುವ ಇತರ ಭಾಷೆಗಳೂ ಇದೇ ಗಾದೆಗಳನ್ನು ಬಳಸುತ್ತವೆ. ಇದು ತುಳು ಗಾದೆಗಳ ಪ್ರಸರಣಕ್ಕೆ ಸಹಕಾರಿಯಾಗಿದೆ.
4. ವೃತ್ತಿ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಂದ ಗಾದೆ ಕಾಲ ಮತ್ತು ಪ್ರದೇಶಕ್ಕನುಗುಣವಾಗಿ ಬದಲಾಗುತ್ತದೆ.

2.5 ಒಗಟು

ಒಗಟು ಎನ್ನುವುದಕ್ಕೆ 'ಅರ್ಥವಾಗದ ಮಾತು' ಎಂಬ ಅರ್ಥವಿದೆ. ಅರ್ಥವಾಗದ ಮಾತಿಗೆ ಅರ್ಥವನ್ನು ಉತ್ತರದ ಮೂಲಕ ಕಂಡುಕೊಳ್ಳುವ ಪ್ರಕ್ರಿಯೆ ಒಗಟು. ಒಂದು ವಾಕ್ಯದಲ್ಲಿರುವ ಗೂಡಾರ್ಥವನ್ನು ಪತ್ತೆ ಮಾಡಿ, ಆ ವಾಕ್ಯದ ಅರ್ಥವನ್ನು ಒಂದು ಪದದ ಮೂಲ ಕಂಡುಕೊಳ್ಳುವ ಕ್ರಿಯೆ ಇಲ್ಲಿ ನಡೆಯುತ್ತದೆ. ಇದನ್ನು ಆಟವೆಂದೂ ಕರೆಯುತ್ತಾರೆ. ಇಬ್ಬರು ವ್ಯಕ್ತಿಗಳು ವಾಕ್ಯದ ಅರ್ಥವನ್ನು ನಿರ್ಧಿಷ್ಟ ಉತ್ತರದ ಮೂಲಕ ಹೇಳುವ ಕ್ರಿಯೆ ಇದಾಗಿದೆ. ಒಗಟು ಹೇಳುವುದಕ್ಕೆ ಕನಿಷ್ಟ ಇಬ್ಬರು ಬೇಕೇ ಬೇಕು. ಒಬ್ಬನೇ ಒಗಟು ಹೇಳಿಕೊಳ್ಳುವ ಕ್ರಮ ಇಲ್ಲ. ಆದ್ದರಿಂದ ಒಗಟಿನ ಕಲಿಕೆಯಲ್ಲಿ ಎರಡು ಸಂವಹನಗಳು ನಡೆಯುತ್ತವೆ. ಹಾಗಾಗಿಯೇ ಇದನ್ನು 'ಎದುರ್ಕತೆ' ಎಂದೂ ಕರೆಯುತ್ತಾರೆ. ಇದು ಹಿರಿಯ ಮತ್ತು ಕಿರಿಯರ ಮಧ್ಯೆ ನಡೆಯುವುದೂ ಇದೆ. ಸಮಾನ ವಯಸ್ಸಿನವರ ಮಧ್ಯೆ ನಡೆಯುವುದೂ ಇದೆ. ಸಾಮಾನ್ಯವಾಗಿ ಪ್ರಶ್ನೆ ಮತ್ತು ಉತ್ತರ ಇವೆರಡೂ ಗೊತ್ತಿರುವ ವ್ಯಕ್ತಿ, ಉತ್ತರದ ಭಾಗ ಗೊತ್ತಿಲ್ಲವೆಂದು ತಿಳಿದ ವ್ಯಕ್ತಿಗೆ

ಪ್ರಶ್ನೆ ಮಾಡುತ್ತಾನೆ. ಪ್ರಶ್ನೆಯ ಭಾಗವನ್ನು ಗಮನವಿಟ್ಟು ಆಲಿಸುವ ವ್ಯಕ್ತಿ ಅದರೊಳಗಿನ ಗೂಡಾರ್ಥವನ್ನು ಹುಡುಕಿ ಅದಕ್ಕೆ ತನ್ನ ಅನುಭವಕ್ಕೆ ಬಂದ ವಿಷಯದ ಉತ್ತರವನ್ನು ನೀಡುತ್ತಾನೆ. ಹೀಗೆ ಪ್ರಶ್ನೆಯ ಭಾಗವನ್ನು ವಿಶ್ಲೇಷಿಸುವ ಪ್ರವೃತ್ತಿ ಉತ್ತರ ಹೇಳುವ ವ್ಯಕ್ತಿಯಲ್ಲಿ ಬಂದಾಗ ಆತ ಪ್ರಶ್ನೆಯ ಭಾಗವನ್ನು ಕಲಿಯಲು ಆರಂಭಿಸುತ್ತಾನೆ. ಹೀಗೆ ಒಗಟುಗಳ ಕಲಿಕೆ ನಡೆಯುತ್ತದೆ. ಈ ರೀತಿ ಕಲಿತ ಒಗಟನ್ನು ಆತ ಇನ್ನೊಬ್ಬನ ಜೊತೆಗೆ ಬಳಸುತ್ತಾನೆ. ಹೀಗೆ ಕಲಿಕಾ ಪರಂಪರೆಯೊಂದು ಮೌಖಿಕವಾಗಿ ಸಾಗುತ್ತದೆ.

ಈ ವಿಧಾನವಲ್ಲದೇ ಒಗಟನ್ನು ಸ್ವಯಂ ಸೃಷ್ಟಿಸುವ ವಿಧಾನವೂ ಇದೆ. ಬೌದ್ಧಿಕ ಪ್ರೌಢಿಮೆ ಇರುವ ಮತ್ತು ಅನುಭವವನ್ನು ಹೊಂದಿದ ವ್ಯಕ್ತಿ ಪ್ರಶ್ನೆಗಳ ಭಾಗವನ್ನು ತಯಾರಿಸುತ್ತಾನೆ. ಅದಕ್ಕೆ ಸಾರ್ವತ್ರಿಕ ಒಪ್ಪಿಗೆ ಸಿಗಬಹುದಾದಂತಹಾ ಉತ್ತರದ ಭಾಗವನ್ನೂ ಆತನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಅದನ್ನು ಸಾರ್ವಜನಿಕವಾಗಿ ಪ್ರಶ್ನಿಸುವ ಮೂಲಕ ಅದಕ್ಕೆ ಮಾನ್ಯತೆ ದೊರಕುವಂತೆ ಮಾಡುತ್ತಾನೆ. ಇಂತಹಾ ರಚನಾ ಕಾರ್ಯ ವೈಯುಕ್ತಿಕವಾಗಿಯೂ ನಡೆಯಬಹುದು ಸಾಮೂಹಿಕವಾಗಿಯೂ ನಡೆಯಬಹುದು. ಸಾಮಾನ್ಯವಾಗಿ ನೇಜಿಗದ್ದೆಯಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಅನೇಕ ಜನರು ಒಂದೆಡೆ ಕಲೆಯುವುದರಿಂದ ಈ ರೀತಿಯ ಒಗಟುಗಳು ಹುಟ್ಟಿಕೊಳ್ಳಲು ಹೆಚ್ಚು ಅವಕಾಶವಿದೆ.

ತಾರ್ಕಿಕತೆ, ದ್ವಂದ್ವಾರ್ಥ, ರೂಪಕಾತ್ಮಕತೆಗಳಿಂದಾಗಿ(ನೋಡಿ:ಅನುಬಂಧ–5) ಇವುಗಳು ಎದುರಿನ ವ್ಯಕ್ತಿಯ ಕುತೂಹಲವನ್ನು ಹೆಚ್ಚಿಸುತ್ತದೆ. ಈ ರೀತಿಯ ಕುತೂಹಲದಿಂದಾಗಿ ಪ್ರಶ್ನೆಯ ಭಾಗವನ್ನು ಮತ್ತೆ ಮತ್ತೆ ವಿಶ್ಲೇಷಿಸಿ ಅದರಲ್ಲಿರುವ ಗೂಡಾರ್ಥವನ್ನು ಹುಡುಕುವ ಕಾರ್ಯ ನಡೆಯುತ್ತದೆ. ಮನೆಯಲ್ಲಿರುವ ಕಿರಿಯರ ಬೌದ್ಧಿಕ ಜಾಣ್ಮೆಯನ್ನು ಹರಿತಗೊಳಿಸುವ ದೃಷ್ಟಿಯಿಂದ ಹಿರಿಯರು ತನ್ನ ಅನುಭವಗಳ ನೆಲೆಯಲ್ಲಿ ಪ್ರಶ್ನೆಯ ಭಾಗವನ್ನು ರಚಿಸುತ್ತಿದ್ದುದೂ ಇದೆ. ಇದು ಕಿರಿಯರ ಕಲಿಕೆಗೆ ಸಹಕಾರಿಯಾಗಿದೆ. ಒಗಟಿನ ಕಲಿಕೆಗೆ ಯಾವುದೇ ನಿರ್ಬಂಧಗಳು ಇಲ್ಲದೇ ಅದು ಆಸಕ್ತರ ಆಟ ಮತ್ತು ಬುದ್ಧಿವಂತರ ಆಟವಾಗಿ ಕಾಣುತ್ತದೆ. ಆಲೋಚನೆಗೆ ಹೆಚ್ಚಿನ ಅವಕಾಶ ಇಲ್ಲಿರುವುದರಿಂದ ಯೋಚಿಸುವ ತಾಳ್ಮೆ ಇದ್ದವರಿಗೆ ಮಾತ್ರ ಒಗಟನ್ನು ಕಲಿಯಲು ಸಾಧ್ಯವಾಗುವುದು. ಒಗಟಿನ ಬಳಕೆಗೆ ಸಮಯ, ತಾಳ್ಮೆ ಮತ್ತು ಪದ ಬಿಡಿಸುವ ಜಾಣ್ಮೆ ಅತೀ ಅಗತ್ಯ. ಅದೇ ರೀತಿ ಅದರ ಕಲಿಕೆಗೂ ಸಮಯ ಮತ್ತು ತಾಳ್ಮೆಯ ಜೊತೆಗೆ ಆಸಕ್ತಿಯ ಅಗತ್ಯವಿದೆ.

ಒಗಟು ರಚನೆಯ ಸಂದರ್ಭದಲ್ಲಿ ಪ್ರಶ್ನೆ ಮತ್ತು ಉತ್ತರ ಇವೆರಡೂ ಭಾಗಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ. ಉತ್ತರವನ್ನು ಕೇಂದ್ರೀಕರಿಸಿ ಅದರ ಪ್ರಶ್ನೆಯ ಭಾಗವನ್ನು ರಚಿಸುವುದು ಒಗಟಿನ ರಚನಾ ಕ್ರಮ. ಇಲ್ಲಿ ಬರುವ ನಿರ್ದಿಷ್ಟ ಉತ್ತರ ಪ್ರಶ್ನೆಯಲ್ಲಿನ ಒಗಟುಗಳ ಮೂಲಕ ಕಂಡುಕೊಳ್ಳಲಾಗುತ್ತದೆ. ಆದ್ದರಿಂದ ಪ್ರಶ್ನೆಗೆ ಭಿನ್ನ ಉತ್ತರ ದೊರೆತದ್ದೇ ಆದರೆ ಪ್ರಶ್ನೆಯ ರಚನಯಲ್ಲಿ ಕೊರತೆ ಇದೆ ಎಂದರ್ಥ. ಆದ್ದರಿಂದ ಒಗಟಿನ ಪ್ರಶ್ನೆಯನ್ನು ರಚಿಸುವ ವ್ಯಕ್ತಿ ಅದಕ್ಕೆ ಭಿನ್ನ ಉತ್ತರಗಳು ಇಲ್ಲದಂತೆ ಇರುವ ಪ್ರಶ್ನೆಯ ರಚನೆ ಮಾಡುತ್ತಾನೆ. ಒಗಟಿನ ಪ್ರಶ್ನೆ ಮತ್ತು ಉತ್ತರದ ರೂಪಗಳು ಸಾಮಾನ್ಯವಾಗಿ ಜನಪದರ ಸುತ್ತಮುತ್ತಲಿನ ವಿಷಯ, ವಸ್ತುಗಳನ್ನೇ ಹೊಂದಿರುತ್ತದೆ. ನಿತ್ಯ ಬಳಸುವ

ಮತ್ತು ಕಾಣುವ ವಿಚಾರಗಳಲ್ಲಿ ಒಗಟು ರಚನೆಯಾಗುವುದರಿಂದ ಕಲಿಕೆ ಸುಲಭವಾಗುತ್ತದೆ.

ಈ ಮೇಲಿನ ವಿವರಣೆಯಿಂದ ಒಗಟು ಕಲಿಕೆಯ ವಿಷಯದಲ್ಲಿ ಕೆಳಗಿನ ಅಂಶಗಳನ್ನು ಗುರುತಿಸಬಹುದು.

1. ಒಗಟು ಕಲಿಕೆ ಉಳಿದೆಲ್ಲ ಜನಪದ ಸಾಹಿತ್ಯಗಳ ಕಲಿಕೆಗಿಂತ ಹೆಚ್ಚಿನ ಬೌದ್ಧಿಕ ಸಾಮರ್ಥ್ಯವನ್ನು ಬಯಸುತ್ತದೆ.
2. ಒಗಟು ಕಲಿಕೆಯು ಉದ್ದೇಶಪೂರ್ವಕವಾಗಿ ನಡೆಯುವ ಕ್ರಿಯೆ. ಇಲ್ಲಿ ಕಲಿಕಾರ್ಥಿಯು ತನ್ನ ಅನುಭವದ ಮೂಲಕವೇ ಕಲಿಯುತ್ತಾನೆ. ಉತ್ತರವನ್ನು ಹುಡುಕುವ ದೃಷ್ಟಿಯಿಂದ ಪ್ರಶ್ನೆಯ ಭಾಗವನ್ನು ಹೆಚ್ಚು ವಿಶ್ಲೇಷಿಸುವುದರಿಂದ ಕಲಿಕೆ ತನ್ನಿಂದ ತಾನೇ ಆತನಲ್ಲಿ ನಡೆಯುತ್ತದೆ.
3. ಒಗಟಿಗೆ ಭಾಷೆಯ ಮಿತಿ ಇದೆ. ತುಳು ಭಾಷಿಕ ಒಗಟು ಆ ಪರಿಸರದ ಇತರ ಭಾಷೆಯಲ್ಲಿ ಇಲ್ಲದಿರುವುದೇ ಹೆಚ್ಚಾದ ಕಾರಣ ನಿರ್ದಿಷ್ಟ ಭಾಷಾ ಜ್ಞಾನ ಇದ್ದವರಿಗೆ ಮಾತ್ರ ಒಗಟನ್ನು ಸುಲಭವಾಗಿ ಕಲಿಯಲು ಸಾಧ್ಯವಾಗುತ್ತದೆ.
4. ಒಗಟು ಒಂದು ಆಟವಾದ್ದರಿಂದ ಕಲಿಕೆ ಆಟದ ಮೂಲಕವೇ ಹೋಗುತ್ತದೆ. ಇಲ್ಲಿ ಸೋಲು ಗೆಲುವು ಎನ್ನುವ ಮೌಲ್ಯಮಾಪನದ ಆಯಾಮಗಳು ಇರುವ ಕಾರಣ, ಗೆಲುವಿನಲ್ಲಿರುವ ಸಂತೋಷ, ಸೋಲಿನಲ್ಲಿರುವ ದುಃಖ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ.
5. ಒಗಟು ಬಿಡಿಸುವಲ್ಲಿ ನಿರಂತರ ವಿಫಲನಾಗುವ ವ್ಯಕ್ತಿ ಒಗಟಿನ ಕಲಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುವ, ಗೆಲ್ಲುವ ವ್ಯಕ್ತಿ ಹೆಚ್ಚು ಒಗಟು ಕಲಿಯುವ ಸಾಧ್ಯತೆ ಇರುತ್ತದೆ.

2.6.ಕತೆ

ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಜನಪ್ರಿಯವಾದ ಆದರೆ ತುಳು ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿಲ್ಲದ ಪ್ರಕಾರ ಕತೆ. ಆದರೆ ಇರುವ ಕತೆಗಳಂತೂ ಎಲ್ಲರಿಗೂ ಇಷ್ಟವಾದದು. ತುಳುವಿನಲ್ಲಿ ಪಾಡ್ದನ ಕತಾ ಪ್ರಕಾರದಂತೆ ಇರುವುದರಿಂದಲೇ ಏನೋ ಉಳಿದ ಭಾಷೆಗಳಿಗೆ ಹೋಲಿಸಿದರೆ ತುಳು ಕತೆಗಳ ಸಂಖ್ಯೆ ಕಡಿಮೆ. ಪಾಡ್ದನ, ಕಬಿತ, ಗಾದೆ ಒಗಟುಗಳಿಗೆ ಹೋಲಿಸಿದರೆ ತುಳು ಕತೆಗಳು ಉಳಿದ ಭಾಷೆಯ ಜನಪದ ಕತೆಗಳಷ್ಟು ಜನಪ್ರಿಯತೆ ಗಳಿಸಿಲ್ಲ. ಹಾಗೆಂದು ವಿದ್ವಾಂಸರು ಉಳಿದ ಭಾಷೆಗಳಲ್ಲಿ ವಿಭಾಗಿಸಿದ ಎಲ್ಲಾ ವಿಧದ ಕತೆಗಳು (ನೋಡಿ:ಅನುಬಂಧ-6) ತುಳು ಜನಪದ ಸಾಹಿತ್ಯದಲ್ಲಿ ಸಿಗುತ್ತವೆ. ಆದರೆ ಸಂಖ್ಯೆಯ ದೃಷ್ಟಿಗಿಂತಲೂ ಆಶಯದ ದೃಷ್ಟಿಯಿಂದ ತುಳು ಕತೆಗಳಿಗೆ ಜನಪದ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನ ಇದೆ. ಸಾಮಾನ್ಯವಾಗಿ ಬೇಸಾಯ ಗದ್ದೆಯಲ್ಲಿ ಕತೆಗಿಂತಲೂ ಪಾಡ್ದನ ಮತ್ತು ಕಬಿತಗಳಿಗೆ ಹೆಚ್ಚು ಮಾನ್ಯತೆ ಇರುವುದರಿಂದಲೋ ಏನೋ ಕತೆ ಹೇಳುವ ಮತ್ತು ಕೇಳುವ ಸಂದರ್ಭ ತುಳುನಾಡಿನಲ್ಲಿ ಕಡಿಮೆ ಎಂದು ಹೇಳಬಹುದು. ರಾತ್ರಿ ಹೊತ್ತಿನಲ್ಲಿ ಮನೆಯ

ಹಿರಿಯರು ಕಿರಿಯರಿಗೆ ಕತೆ ಹೇಳುವುದು ಜನಪದ ಕತೆಗಳು ಸಂಪ್ರದಾಯ. ಈ ರೀತಿ ಕತೆ ಹೇಳುವ ಮೂಲಕ ಮಕ್ಕಳಲ್ಲಿ ಕತೆಯನ್ನು ಕಟ್ಟುವ ಮತ್ತು ಅದರ ತಂತ್ರವನ್ನು ಅರಿತುಕೊಳ್ಳುವ ಕಾರ್ಯ ನಡೆಯುತ್ತದೆ.

ಕತಾ ಪ್ರಕಾರ ಗದ್ಯ ಶೈಲಿಯಲ್ಲಿ ಮತ್ತು ರೋಚಕವಾಗಿ ಇರುವ ಕಾರಣ ಕತೆಯನ್ನು ಬಹಳ ಬೇಗ ಕಲಿಯುವ ಪ್ರವೃತ್ತಿ ಬೆಳೆದಿದೆ. ಬೇರೆ ಬೇರೆ ವಸ್ತುಗಳನ್ನು ಇಟ್ಟುಕೊಂಡು ಸರಳವಾಗಿ ಮತ್ತು ಸಂಕೀರ್ಣವಾಗಿ ಕತೆ ರಚನೆಯಾಗುತ್ತದೆ. ಒಬ್ಬ ವ್ಯಕ್ತಿ ತನ್ನ ಸುತ್ತಮುತ್ತ ಇರುವ ವಿಷಯಗಳನ್ನು ಆಧರಿಸಿ ಅದಕ್ಕೆ ರಂಜನೆಯ ಮತ್ತು ರೋಚಕತೆಯ ಸ್ವರೂಪ ನೀಡಿ ಕತೆ ಹೆಣೆಯುತ್ತಾನೆ. ಹೀಗೆ ಕತೆಯನ್ನು ಕಟ್ಟುವಾಗ ಅದು ವಾಸ್ತವವಾಗಿರಬೇಕು ಅಥವಾ ಅದು ವಸ್ತು ನಿಷ್ಠವಾಗಿರಬೇಕು ಎನ್ನುವ ಯಾವುದೇ ಮಿತಿಗಳಿರುವುದಿಲ್ಲ. ಅದು ನೀಡುವ ಮಾನಸಿಕ ಮುದ ಹಾಗೂ ಒಂದಷ್ಟು ಬದುಕಿನ ಪಾಠ (ನೀತಿ) ಇದೇ ಮುಖ್ಯವಾಗಿರುತ್ತವೆ. ಆದ್ದರಿಂದಲೇ ಜನಪದ ಕತೆಗಳು ಬಹುತೇಕ ಎಲ್ಲಾ ವಿಷಯ ಮತ್ತು ವಸ್ತುಗಳನ್ನು ವ್ಯಾಪಿಸಿರುವುದು. ತುಳು ಜನಪದ ಕತೆಗಳಿಗೆ ಸಂಬಂಧಿಸಿದಂತೆ ಅವುಗಳ ಕಲಿಕೆ ಪಾಡ್ದನ ಮತ್ತು ಕಬಿತದಷ್ಟು ಕಷ್ಟಕರವಲ್ಲ. ಪಾಡ್ದನ ಕಬಿತಗಳ ರಾಗ, ಲಯ, ಪ್ರಾಸಗಳ ಅಗತ್ಯ ಇಲ್ಲದೇ ಇರುವುದರಿಂದ ಇಲ್ಲಿ ಸ್ವಾರಸ್ಯಕ್ಕೆ ಹೆಚ್ಚಿನ ಆದ್ಯತೆ ಇರುತ್ತದೆ. ಒಂದು ಘಟನೆಯನ್ನು ನೆನಪಿಕೊಳ್ಳುವ ದೃಷ್ಟಿಯಿಂದ ಮಾತ್ರ ಇವುಗಳ ರಚನೆಯನ್ನು ಗಮನಿಸಬೇಕಾಗುತ್ತದೆ. ಹಾಗೆ ನೋಡಿದರೆ ತುಳು ಜನಪದ ಕತೆಗಳ ಮುಂದುವರಿದ ರೂಪಗಳೇ ಪಾಡ್ದನಗಳು.

ತುಳು ಜನಪದರು ಕೃಷಿ ಕೆಲಸವನ್ನು ಹಗಲು ಹೊತ್ತಿನಲ್ಲಿ ಮುಗಿಸಿದ ನಂತರ ರಾತ್ರಿ ಹೊತ್ತಿನಲ್ಲಿ ತಮ್ಮ ಮೊಮ್ಮಕ್ಕಳಿಗಾಗಿ ಕತೆ ಹೇಳುವ ಸಂಪ್ರದಾಯವನ್ನು ಇಟ್ಟುಕೊಂಡಿದ್ದರು. ಕೆಲವೊಂದು ಬಾರಿ ಪಾಡ್ದನ ಮತ್ತು ಕಬಿತಗಳ ಸಾರರೂಪವನ್ನೆ ಕತೆಯಾಗಿ ಬಳಿಸಿಕೊಳ್ಳುವ ಸಂದರ್ಭವೂ ಇತ್ತು. ಸಾಮಾನ್ಯವಾಗಿ ಎಲ್ಲಾ ಕಲಿಕಾ ಪ್ರಕ್ರಿಯೆಯ ಮೂಲ ರೂಪ ಕತೆಯೇ ಆಗಿರುವುದರಿಂದ ಇದನ್ನು ಕಲಿಯುವುದರಲ್ಲಿ ವಿಶೇಷ ತಂತ್ರ ಅಥವಾ ಸೂತ್ರಗಳು ಇರುವುದಿಲ್ಲ. ಆದರೆ ಕತೆ ಹೇಳುವುದಕ್ಕೆ ಸಾಮಾನ್ಯ ರೂಢಿಯ ತಂತ್ರವಿರುತ್ತದೆ. ಅದೆಂದರೆ ಕತೆಯ ಆರಂಭ ಮಧ್ಯ ಮತ್ತು ಕೊನೆ. ಆರಂಭದಲ್ಲಿ 'ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ........' ಎಂದು ಆರಂಭಗೊಳ್ಳುವ ಮೂಲಕ ಒಂದು ಕಾಲ್ಪನಿಕ ಜಗತ್ತಿನ್ನು ಸೃಷ್ಟಿಸಲಾಗುತ್ತದೆ. ಇದು ಕಲಿಕಾರ್ಥಿಯ ಕುತೂಹಲಕ್ಕೆ ಕಾರಣವಾಗುತ್ತದೆ. ಸಾಮಾನ್ಯವಾಗಿ ತಿಳಿದ ಒಂದು ವ್ಯವಸ್ಥೆಯಿಂದ ತಿಳಿಯುವ ವ್ಯವಸ್ಥೆಗೆ ಸಾಗುವ (know to unknow) ಪ್ರಕ್ರಿಯೆಯನ್ನು ಕತೆಗಳಲ್ಲಿ ಕಾಣಬಹುದು. ಹೀಗೆ ಆರಂಭವಾದ ಕತೆ ಬೆಳೆಯುತ್ತಾ ಅದರ ಮಧ್ಯಮ ಸ್ಥಿತಿಯಲ್ಲಿ ಮುಂದೇನೂ ಎಂಬ ಇನ್ನೊಂದು ರೀತಿಯ ಕುತೂಹಲಕ್ಕೆ ಎಡೆ ಮಾಡಿ ಕೊಡುತ್ತದೆ. ಈ ಮುಂದೇನು ಎಂಬಲ್ಲಿ ಕಲಿಕಾರ್ಥಿಯ ನಾನಾ ಕಲ್ಪನೆಗಳು ತಾರ್ಕಿಕ ಅಂತ್ಯಕ್ಕೆ ಪ್ರೇರಣೆ ನೀಡುವಂತೆ ಕತೆ ಸಾಗಿದ್ದೇ ಆದರೆ ಕೇಳುವವ (ಕಲಿಕಾರ್ಥಿ) ಕುತೂಹಲಕ್ಕೆ ಒಳಗಾಗುತ್ತಾನೆ. ಆ ಕತಾ ವಸ್ತುವನ್ನು ಬಹುಬೇಗ ತನ್ನೊಳಕ್ಕೆ ಇಳಿಸಿಕೊಳ್ಳುತ್ತಾನೆ. ಒಂದು ವೇಳೆ ಆತ ಕಟ್ಟಿಕೊಂಡ ಕಲ್ಪನೆಗಿಂತ ಭಿನ್ನವಾಗಿ ಕತೆ

ಸಾಗುತ್ತಿದ್ದಾರೆ ಅದನ್ನು ಅರ್ಥೈಸಿಕೊಳ್ಳಲು ಇನ್ನೂ ಒಂದಷ್ಟು ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುತ್ತಾನೆ. ಕತೆಯ ಮುಕ್ತಾಯ ಸಾಮಾನ್ಯವಾಗಿ ಮನಸ್ಸಿಗೆ ಮುದ ನೀಡುವಂತೆ ಇರುವುದರಿಂದ ಎಲ್ಲಾ ಜನಪದ ಕತೆಗಳೂ ಜನರ ಮಧ್ಯೆ ಬಾಳಿ ಬದುಕುತ್ತದೆ. ಅಂದರೆ ಕತೆಯ ಕೊನೆಗೆ 'ಸುಖವಾಗಿ ಬದುಕಿದರು..........' ಎಂಬ ವಾಕ್ಯ ಸೇರಲೇಬೇಕು. ಹಾಗೇ ಸೇರಿದಾಗ ಮಾತ್ರ ಕತೆಯ ಸುಖಾಂತ್ಯವೇ ತನ್ನ ಸುಖವೆಂದು ಭಾವಿಸುವ ಕೇಳುಗ ಆ ಕತೆಯನ್ನು ತನ್ನೊಳಗೆ ಇಟ್ಟುಕೊಳ್ಳುತ್ತಾನೆ.

ಒಬ್ಬ ಹೇಳುಗನ ಕಲ್ಪನೆಯ ಕತೆ ಮತ್ತು ಒಬ್ಬ ಕೇಳುಗನ ವಾಸ್ತವಿಕ ಆಲೋಚನಗಳು ಒಂದಕ್ಕೊಂದು ಪೂರಕವಾಗಿದ್ದಾಗ ಆ ಕತೆ ತಲೆಮಾರಿನಿಂದ ತಲೆಮಾರಿಗೆ ಹರಿದು ಹೋಗುತ್ತದೆ ಹಾಗೂ ಕಲಿಕೆಗೆ ಪ್ರೇರಣೆ ನೀಡುತ್ತಿರುತ್ತದೆ. ಸಾಮಾನ್ಯವಾಗಿ ರಾಜಕುಮಾರ ಮತ್ತು ರಾಜ ಕುಮಾರಿಯ ನಡುವಿನ ಪರಸ್ಪರ ಪ್ರೀತಿ, ಅನೇಕ ಸಾಹಸಗಳ ನಂತರ ಮದುವೆಯಾಗಿ ಸುಖವಾಗಿ ಬಾಳುವ ಕತೆಗಳು, ಯುವ ತಲೆಮಾರಿನ ಕೇಳುಗನ ವಾಸ್ತವ ಯೋಚನೆಗಳಿಗೆ ಹತ್ತಿರವಾಗಿರುತ್ತದೆ ಮತ್ತು ಅದನ್ನು ಆತ ಇಷ್ಟ ಪಡುತ್ತಾನೆ. ಯಾವುದೇ ಕಲಿಕೆಯೂ ತನ್ನ ಇಷ್ಟ ಹಾಗೂ ಸಂತೋಷದ ಮೇಲೆ ನಿಂತಿವೆ ಎಂಬುದಕ್ಕೆ ಜನಪದ ಕತೆಗಳ ಪ್ರಸರಣವೇ ಸಾಕ್ಷಿ. ಯಾವುದೇ ಭಾಷೆ, ಪ್ರದೇಶದ ಜನರಾದರೂ ಕತೆಗಳನ್ನು ಕೇಳದ ಹೇಳದ ಉದಾಹರಣೆಗಳಿರಲಾರದು. ಆದ್ದರಿಂದ ಮನುಷ್ಯ ಸಂತೋಷದ ಒಂದು ರೂಪಕವಾಗಿ ಕತೆಗಳನ್ನು ಕಲಿತಿದ್ದಾನೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು.

ಈ ಹಿನ್ನೆಲೆಯಲ್ಲಿ ಜನಪದ ಕಲಿಕಾ ಪ್ರಕ್ರಿಯೆಯನ್ನು ಈ ರೀತಿ ಅರ್ಥೈಸಬಹುದು

1. ಕತೆ ಸರಳವಾದ ಗದ್ಯ ಪ್ರಕಾರವಾದ್ದರಿಂದ ಕಲಿಕೆಗೆ ಸುಲಭ.
2. ಕತೆಯ ಆಶಯ ಸಂತೋಷವೇ ಆದ್ದರಿಂದ ಅದನ್ನು ಸಂತೋಷ ಪಡುವ ಒಂದು ಭಾಗವಾಗಿ ಕಲಿಸಲಾಗುತ್ತದೆ ಮತ್ತು ಕಲಿಯಲಾಗುತ್ತದೆ.
3. ಕತೆ ಜನಪ್ರಿಯ ಮತ್ತು ಸಾರ್ವತ್ರಿಕವಾದ್ದರಿಂದ ಅದರ ಕಲಿಕೆ ಹೆಚ್ಚು ಪ್ರಸ್ತುತವಾಗಿಯೇ ನಡೆದಿದೆ.

*1 ಗೋಪಾಲ ಗೌಡ ಕೊಡಿಯಾಲ ಮಿತ್ತಬಾಗಿಲು ಗ್ರಾಮ ಬೆಳ್ತಂಗಡಿ ದ.ಕ

*2 ಓಬೇಲೆ ಕಬಿತ ಸಂಗ್ರಹ: ಶ್ರೀಮತಿ ಚೆಲುವಮ್ಮ ಡೆಂಬುಗ ಕೆಯ್ಯೂರು ಗ್ರಾಮ ಬೆಳ್ತಂಗಡಿ ದ.ಕ

*3 ಸಿರಿ ಪಾಡ್ದನ –ಎ.ವಿ. ನಾವಡ

*4 ತುಳುವ ದರ್ಶನ–ಡಾ.ಪೀಟರ್ ಜೆ ಕ್ಲಾಸ್ (ಅನು: ಎ.ವಿ. ನಾವುಡ,ಸುಭಾಶ್ಚಂದ್ರ)

ಅಧ್ಯಾಯ 3

ಔಪಚಾರಿಕ ಅಥವಾ ಆಧುನಿಕ ಕಲಿಕೆಯಲ್ಲಿನ ಸಾಧ್ಯತೆ ಮತ್ತು ಮಿತಿಗಳು

ಪೀಠಿಕೆ

ಆಧುನಿಕ ಶಿಕ್ಷಣ ಎಂದ ತಕ್ಷಣ ಅದು ಇತ್ತೀಚಿನದು, ಅದಕ್ಕೆ ಬಹಳ ಇತಿಹಾಸ ಇರಲಾರದು ಎಂದು ತಿಳಿದುಕೊಳ್ಳುವಂತಿಲ್ಲ. ಹಾಗಾಗಿ ಇದನ್ನು ಆಧುನಿಕ ಶಿಕ್ಷಣ ಎನ್ನುವ ಬದಲು ಔಪಚಾರಿಕ ಶಿಕ್ಷಣವೆಂದು ಕರೆಯುವುದು ಹೆಚ್ಚು ಸೂಕ್ತ. ಔಪಚಾರಿಕ ಶಿಕ್ಷಣದ ಇತಿಹಾಸ ಭಾರತಕ್ಕೆ ಹೊಸದಲ್ಲ. ಆದರೆ ಜಗತ್ತಿಗಂತೂ ಅತಿಪುರಾತನವಾದುದು. ಗ್ರೀಕ್ ದೇಶದಲ್ಲಿ ಕ್ರಿಸ್ತಪೂರ್ವದಲ್ಲಿಯೇ ಆಧುನಿಕ ಶಿಕ್ಷಣ ಜಾರಿಯಲ್ಲಿತ್ತು ಎನ್ನುವುದಕ್ಕೆ ಅಲ್ಲಿ ಹುಟ್ಟಿ ಬೆಳೆದು ಸುಪ್ರಸಿದ್ಧರಾದ ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್ ಮೊದಲಾದ ತತ್ವಜ್ಞಾನಿಗಳೇ ಉದಾಹರಣೆ. ಇಂತಹ ವ್ಯಕ್ತಿಗಳು ಈ ಶಿಕ್ಷಣ ಬೆಳೆಯುದಕ್ಕೆ ಆ ಕಾಲದಲ್ಲೇ ಪ್ರಾಮುಖ್ಯತೆ ನೀಡಿದರು. ಆದರೆ ಆ ಪರಿಕಲ್ಪನೆ ಭಾರತಕ್ಕೆ ಬರಲು ಸುಮಾರು ಹದಿನೆಂಟು ಹತ್ತೊಂಬತ್ತು ಶತಮಾನಗಳೇ ಬೇಕಾದವು. ಭಾರತಕ್ಕೆ ಬ್ರಿಟೀಷರು ಆಗಮಿಸಿದ ನಂತರ ಇಲ್ಲಿಗೆ ಆಧುನಿಕ ಶಿಕ್ಷಣ ಪ್ರವೇಶಿಸಿತು. ಇದನ್ನು ಪಾಶ್ಚಿಮಾತ್ಯ ಶಿಕ್ಷಣ ಅಥವಾ ಇಂಗ್ಲೀಷ್ ಶಿಕ್ಷಣ ಎಂದೂ ಕರೆಯಬಹುದು.

ಒಬ್ಬ ನಿರ್ದಿಷ್ಟ ವ್ಯಕ್ತಿ ಅಥವಾ ಸಮುದಾಯದ ಮೂಲಕ ಶಿಕ್ಷಣದ ಅರ್ಥ ವಿಶ್ಲೇಷಣೆ ನಡೆಸುತ್ತಾ ನೀಡುತ್ತಾ ಬಂದ ಶಿಕ್ಷಣವನ್ನು ಔಪಚಾರಿಕ ಶಿಕ್ಷಣ ಎಂದು ಕರೆಯುತ್ತಾರೆ. ಈ ರೀತಿ ಅರ್ಥ ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಹುಟ್ಟಿಕೊಂಡ ಅನೇಕ ಪದ್ಧತಿ, ಸಿದ್ಧಾಂತ, ವಿಧಾನಗಳು ಇಂದು ನಮ್ಮ ಮುಂದೆ ದಾಖಲಾಗಿವೆ. ಅವುಗಳು ಕಾಲಕಾಲಕ್ಕೆ ಪರಿಸ್ಕರಣೆಗೊಳ್ಳುತ್ತಾ ಬಂದು ಹೊಸತನವನ್ನು ಶೈಕ್ಷಣಿಕ ವ್ಯವಸ್ಥೆಯಲ್ಲಿ ರೂಪಿಸುತ್ತಾ ಬಂದಿವೆ. ಈ ಅಧ್ಯಾಯದಲ್ಲಿ ಈ ಪದ್ಧತಿಯನ್ನು ವಿವರಿಸಲಾಗಿದೆ.*[1] ಆ ಮೂಲಕ ಜನಪದ ಶಿಕ್ಷಣವನ್ನು ತುಲನ ಮಾಡಲು ಇರುವ ಸಾಧ್ಯತೆಯನ್ನು ಚರ್ಚಿಸಲಾಗಿದೆ. ಆಧುನಿಕ ಶಿಕ್ಷಣ ನಾಲ್ಕು ಪ್ರಮುಖ ಕೌಶಲಗಳ ಮೇಲೆ ನಿಂತಿರುತ್ತದೆ. ಅದನ್ನು ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಬರೆಯುವಿಕೆ ಎಂದು ಕರೆಯುತ್ತಾರೆ. ಇದನ್ನೇ ಭಾಷಾ ಕೌಶಲವೆಂದೂ ಕರೆಯುತ್ತಾರೆ. ಆದರೆ ಯಾವುದೇ ವಿಷಯವನ್ನು ಕಲಿಯುದಕ್ಕೂ ಈ ನಾಲ್ಕು ಕೌಶಲಗಳು ಬೇಕೇಬೇಕು. ಜನಪದ ಸಾಹಿತ್ಯಗಳ ಕಲಿಕೆ ಒಂದು ಭಾಷಾ ಕಲಿಕೆಯ ವ್ಯಾಪ್ತಿಗೆ ಬರುವುದಾದರೂ ಕೇವಲ ಎರಡು ಕೌಶಲಗಳು ಮಾತ್ರ ಅನ್ವಯವಾಗುತ್ತದೆ. ಉಳಿದ ಎರಡು ಕೌಶಲಗಳಾದ ಓದುವಿಕೆ, ಬರೆಯುವಿಕೆ ಜನಪದರಿಗೆ ಅನ್ವಯವಾಗುವುದಿಲ್ಲ. ಆಧುನಿಕ ಪರಿಭಾಷೆಯ ಆಲಿಸುವಿಕೆ, ಮಾತನಾಡುವಿಕೆ ಜನಪದ ಕಲಿಕಾ ಪ್ರಕ್ರಿಯೆಗೂ ಅನ್ವಯವಾಗುತ್ತದೆ. ಅದರಲ್ಲೂ ಆಲಿಸುವಿಕೆ ಎನ್ನುವುದು ಎಲ್ಲಾ ಕೌಶಲಗಳ ಮೂಲ. ಈ ಒಂದು ಕೌಶಲವನ್ನು ಅಭಿವೃದ್ಧಿಗೊಳಿಸಿದರೆ ಉಳಿದ ಕೌಶಲವು ವಿಕಾಸವಾಗುತ್ತದೆ. ಆದ್ದರಿಂದ ಭಾಷಾ ಪ್ರಭುತ್ವ ಬೆಳೆಯಬೇಕಾದರೆ ಕೌಶಲಗಳ ಅಭಿವೃದ್ಧಿ ಅವಶ್ಯಕ. ಆ ಭಾಷೆಯ ಮೂಲ ಮತ್ತು ಪ್ರಥಮ ಕೌಶಲವಾದ ಆಲಿಸುವಿಕೆಯ ಬಗೆಗೆ ಇಲ್ಲಿ ಚರ್ಚಿಸಲಾಗಿದೆ.*[2]

3.1 ಆಲಿಸುವಿಕೆ :

ಅರ್ಥ ಮತ್ತು ಸ್ವರೂಪ : ಸಾಮಾನ್ಯಾರ್ಥದಲ್ಲಿ ಆಲಿಸುವಿಕೆ ಎಂದರೆ ಕೇಳುವುದು, ಲಕ್ಷ್ಯಪೂರ್ವಕವಾಗಿ ಕೇಳುವುದು, ಧ್ವನಿ ಅಥವಾ ಸಪ್ಪಳವನ್ನು ವಿಂಗಡಿಸಿ ಶಬ್ದ ಕೇಳುವುದು, ಶಬ್ದಾರ್ಥ ಗ್ರಹಿಸುವುದು, ವಾಕ್ಯಾರ್ಥ ಗ್ರಹಿಸುವುದು, ಒಂದು ವಾಕ್ಯದ ವಾಚ್ಯಾರ್ಥ, ಲಕ್ಷಾರ್ಥ ಮತ್ತು ವ್ಯಂಗ್ಯಾರ್ಥಗಳನ್ನು ಗ್ರಹಿಸುವುದು, ಎಂದು ತಜ್ಞರು ಅರ್ಥವಿವರಣೆ ನೀಡಿರುತ್ತಾರೆ.

ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕ, ಉದ್ದೇಶ ಪೂರ್ವಕ ಮಾನಸಿಕ ಕ್ರಿಯೆಯಾಗಿದ್ದು ನಾವು ಕೇಳುವ ಶಬ್ದಗಳಲ್ಲಿರುವ ಅರ್ಥಗಳನ್ನು ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ನಿರೂಪಿಸುವುದೇ ಆಗಿದೆ. ಅಂದರೆ ಕೇಳುವ ಶಬ್ದಗಳನ್ನು ಅರ್ಥಗಳನ್ನಾಗಿ ವ್ಯಾಖ್ಯಾನಿಸಿ ಸ್ವೀಕರಿಸುವ ಮಾನಸಿಕ ಕ್ರಿಯೆ. ಆಲಿಸುವಿಕೆಯಲ್ಲಿ ಕೇಳುವ ಕ್ರಿಯೆಯು ಇದೆಯಾದರೂ ಕೇಳುವಿಕೆಯೇ ಆಲಿಸುವಿಕೆಯಲ್ಲ. ಕೇಳುವ ಶಬ್ದಗಳನ್ನು ಅರ್ಥೈಸಿಕೊಂಡು ವ್ಯಾಖ್ಯಾನಿಸುತ್ತಾ ಸಂಬಂಧ ತಿಳಿಯುತ್ತಾ ವಿಚಾರ ಮತ್ತು ಭಾವನೆಗಳನ್ನು ಮೌಲ್ಯೀಕರಿಸುತ್ತಾ ಅರ್ಥಮಾಡಿಕೊಳ್ಳುವುದೇ ಆಲಿಸುವಿಕೆ. ಎಂದು ಹೇಳಲಾಗಿದೆ.

ಆಲಿಸುವಿಕೆಯು ಒಂದು ಉದ್ದೇಶಪೂರಿತ ಪ್ರಯತ್ನಪೂರ್ವಕ ಮತ್ತು ಆಯ್ಕೆಗೊಳಪಡುವ ಪ್ರಕ್ರಿಯೆಯಾಗಿದೆ. ಕೇಳುವಿಕೆಯು ಆಲಿಸುವಿಕೆಯ ಒಂದು ಭಾಗವಾಗಿದೆ. ನಮಗೆ ಕೇಳಿಸುವ ಶಬ್ದಗಳೆಲ್ಲಾ ಅರ್ಥವಾಗುವುದಿಲ್ಲ. ಕೇಳುವಿಕೆಯಲ್ಲಿ ಶಬ್ದ ತರಂಗಗಳು ಯಾಂತ್ರಿಕವಾಗಿ ಕಿವಿಯ ಮೂಲಕ ಮೆದುಳಿಗೆ ತಲುಪುತ್ತವೆ. ಆಲಿಸುವಿಕೆಯಲ್ಲಿ ಈ ರೀತಿ ಕೇಳುವ ಶಬ್ದಗಳು ಅರ್ಥಗಳಾಗಿ, ವಿಚಾರಗಳಾಗಿ, ಭಾವನೆಗಳಾಗಿ ಸ್ವೀಕೃತವಾಗುತ್ತವೆ ಮತ್ತು ಸ್ಮರಣೆಯಲ್ಲಿ ಉಳಿಯುತ್ತವೆ. ಕೇಳುವಿಕೆಯು ಒಂದು ಮಾನಸಿಕ ಕ್ರಿಯೆಯಾದರೆ ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕ ಮಾನಸಿಕ ಕ್ರಿಯೆ. ಆಲಿಸುವಿಕೆಯಲ್ಲಿ ಮಾನಸಿಕ ಸಿದ್ಧಾಂತ, ಆಸಕ್ತಿ, ಅವಧಾನ, ಅರ್ಥಗ್ರಹಿಕೆ ಮತ್ತು ಸ್ಮರಣೆ ಇರುತ್ತದೆ. ಶಬ್ದಗಳನ್ನು ಕೇವಲ ಶಬ್ಧಗಳಾಗಿ ಕೇಳದೆ ಶಬ್ಧದಲ್ಲಿ ಅಡಗಿರುವ ಅರ್ಥವನ್ನು, ಭಾವನೆಯನ್ನು ಸ್ವೀಕರಿಸಲಾಗುತ್ತದೆ. ಈ ರೀತಿ ಆಲಿಸುವಿಕೆಯ ಅರ್ಥ ಮತ್ತು ಸ್ವರೂಪವನ್ನು ವಿದ್ವಾಂಸರು ಚರ್ಚಿಸಿರುತ್ತಾರೆ.

3.1.1 ಮಹತ್ವ : ಆಲಿಸುವಿಕೆ ಭಾಷಾ ಕೌಶಲಗಳ ತಳಹದಿ. ಅದಕ್ಕೆ ಶಿಕ್ಷಣದಲ್ಲಿ ಮಹತ್ವದ ಸ್ಥಾನವಿದೆ. ಆಲಿಸುವ ಕೌಶಲ ಬೆಳೆಯದೆ ಭಾಷೆಯ ಉಳಿದ ಕೌಶಲಗಳು ಬೆಳೆಯಲಾರವು. ಅರ್ಥ ಗ್ರಹಿಕೆ, ಮಾತುಗಾರಿಕೆ ಮತ್ತು ಶಬ್ದಭಂಡಾರಕ್ಕೆ ಆಲಿಸುವಿಕೆ ನೆರವಾಗುತ್ತದೆ. ಒಂದು ಅಂದಾಜಿನ ಪ್ರಕಾರ, ಮನುಷ್ಯನು ದಿನವೊಂದರಲ್ಲಿ ಶೇಕಡಾ45 ರಷ್ಟು ಸಮಯವನ್ನು ಕೇಳುವುದರಲ್ಲಿ ತೊಡಗಿಸುತ್ತಾನೆ. ಆಲಿಸುವಿಕೆಯು ಹಲವಾರು ರೀತಿಯಿಂದಾಗಿ ಮಹತ್ವದ್ದೆನಿಸಿದೆ. ಸಮಾಜ ಬಾಂಧವರೊಂದಿಗೆ ಅಂತರ ಸಂಬಂಧಗಳನ್ನು ಕಲ್ಪಿಸಲು, ಪರಸ್ಪರ ವಿಚಾರ ವಿನಿಮಯಗಳಿಗೆ, ಮನರಂಜನಗೆ, ವಿಷಯ ಜ್ಞಾನಕ್ಕೆ, ಸೃಜನಶೀಲತೆಗೆ, ಭಾಷಾ ಸಾಮರ್ಥ್ಯಕ್ಕೆ, ಸಾಮಾಜಿಕ ಸಂವಹನಕ್ಕೆ

ಆಲಿಸುವಿಕೆ ಸಹಾಯಕವಾಗುತ್ತದೆ. ಮಕ್ಕಳ ಅರ್ಥಗ್ರಹಿಕೆ ಮತ್ತು ಮಾನಸಿಕ ವಿಕಾಸದಲ್ಲಿ ಆಲಿಸುವಿಕೆ ಮಹತ್ವದ ಪಾತ್ರವನ್ನಾಡುತ್ತದೆ.

ಪ್ರಾಥಮಿಕ ಹಂತದ ಮಕ್ಕಳ ಆಲಿಸುವಿಕೆಯ ಕಡೆಗೆ ಗಮನ ನೀಡದಿದ್ದರೆ ನಿಷ್ಕ್ರೀಯ ಶ್ರೋತೃ ವರ್ಗವಾಗುತ್ತದೆ. ಹೀಗಾಗಿ ಅವರು ಯಾಂತ್ರಿಕವಾಗಿ ಶಬ್ದಗಳನ್ನು ಕೇಳುವುದರಿಂದ ಅವರ ಜ್ಞಾನಾರ್ಜನ ನಿರೀಕ್ಷಿತ ಮಟ್ಟದಲ್ಲಾಗುವುದಲ್ಲ. ಹೀಗಾಗಿ ಅವರು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ವಿಚಾರ ವಿನಿಮಯ ಶಕ್ತಿ ಕುಂಠಿತಗೊಳ್ಳುವುದರಿಂದ ಪರಸ್ಪರ ಅಂತರ ಸಂಬಂಧಗಳು ಉತ್ತಮವಾಗಿ ಬೆಳೆಯಲಾರವು. ಮಕ್ಕಳಲ್ಲಿ ಅರ್ಥಪೂರ್ಣ ಆಲಿಸುವಿಕೆ ಕೌಶಲ್ಯವನ್ನು ಬೆಳೆಸುವುದರಿಂದ ಇನ್ನೂ ಹೆಚ್ಚಿನ ಶೈಕ್ಷಣಿಕ ಸಾಧನೆಯನ್ನು ನಿರೀಕ್ಷಿಸಬಹುದು. ಒಟ್ಟಿನಲ್ಲಿ ಆಲಿಸುವಿಕೆ ಒಂದು ಶಬ್ಧ ಹಾಗೂ ಮಾನವ ದೇಹದ ಒಂದು ಅಂಗಕ್ಕೆ ಸೀಮಿತವಾದ ಪ್ರಕ್ರಿಯೆ ಎಂದು ಎನಿಸಿದರೂ ಅದೇ ಎಲ್ಲಾ ಕಲಿಕೆಯ ತಳಹದಿಯಾಗಿರುತ್ತದೆ.

3.1.2 ಆಲಿಸುವಿಕೆಯ ಸಾಮಾನ್ಯ ದೋಷಗಳು

ಕಲಿಕೆಯಲ್ಲಿ ಆಲಿಸುವ ಕ್ರಿಯೆಯ ಪಾತ್ರ ಬಹಳಷ್ಟಿದ್ದರೂ ಈ ಬಗ್ಗೆ ಸೂಕ್ತ ಮಾರ್ಗದರ್ಶನವಿಲ್ಲದೆ ಅಥವಾ ಉದಾಸೀನದಿಂದ ತಮಗೆ ಅರಿವಿಲ್ಲದಂತೆಯೇ ಕಲಿಕಾರ್ಥಿ ಆಲಿಸುವ ಕ್ರಿಯೆಯನ್ನು ನಿರ್ಲಕ್ಷಿಸುತ್ತಾನ. ಇದರಿಂದಾಗಿ ಆಲಿಸುವ ಕ್ರಿಯೆಯಲ್ಲಿ ಅನೇಕ ದೋಷಗಳು ಹುಟ್ಟಿಕೊಳ್ಳುತ್ತವೆ. ಈ ದೋಷಗಳ ಪಟ್ಟಿ ವೈಜ್ಞಾನಿಕವಾಗಿದ್ದು ಇದನ್ನು ಈಗಾಗಲೇ ಸಾರ್ವತ್ರಿಕವಾಗಿ ಒಪ್ಪಲಾಗಿದೆ. ಇವು ಕಾಲ,ವ್ಯಕ್ತಿ ಮತ್ತು ಪ್ರದೇಶಕ್ಕೆ ಸೀಮಿತವಾಗಿರುವುದಿಲ್ಲ. ಹಾಗಾಗಿ ಇಲ್ಲಿರುವ ಅಂಶಗಳು ಜನಪದ ಸಾಹಿತ್ಯವನ್ನು ಆಲಿಸಿ ಕಲಿಯುವ ವ್ಯಕ್ತಿಗೂ ಅನ್ವಯಿಸುತ್ತದೆ. ಆದ್ದರಿಂದ ಆಧುನಿಕ ಮತ್ತು ವೈಜ್ಞಾನಿಕ ನಿಷ್ಕರ್ಷೆಯಲ್ಲಿ ನಡೆಯುವ ಆಲಿಸುವ ಪ್ರಕ್ರಿಯೆಯ ಆಧಾರದಲ್ಲಿ ಜನಪದರ ಆಲಿಸುವಿಕೆಯನ್ನು ತೌಲನಿಕವಾಗಿ ವಿಶ್ಲೇಷಿಸಬಹುದಾಗಿದೆ. ಇಲ್ಲಿರುವ ಎಲ್ಲಾ ದೋಷಗಳು ಜನಪದರ ಕಲಿಕಾ ದೋಷಗಳೂ ಹೌದಾಗಿದೆ. ಆದ್ದರಿಂದಲೇ ಜನಪದ ಸಾಹಿತ್ಯವೂ ಎಲ್ಲರ ಸೊತ್ತಾಗದೇ ಈ ದೋಷಗಳ ಹೊರತಾದವರಿಗೆ ಮಾತ್ರ ದಕ್ಕಿದ್ದಾಗಿದೆ ಎಂದು ಹೇಳುವ ಕಾರಣಕ್ಕೆ ಈ ಅಂಶಗಳನ್ನು ಪಟ್ಟಿ ಮಾಡಲಾಗಿದೆ. ಜನರಲ್ಲಿದ್ದ ಈ ಕೆಳಗಿನ ದೋಷಗಳು ಜನಪರ ಸಾಹಿತ್ಯದ ಕಲಿಕೆಯ ತೊಡಕುಗಳು ಹೌದು. ಈ ದೋಷಗಳ ನಿವಾರಣೆ ಎಡೆಗೆ ಗಮನಿಸಿದ್ದೇ ಆದರೆ ಕಲಿಕೆ ವೃದ್ಧಿಗೊಳ್ಳಬಹುದು.

3.1.2.1. ಮಾನಸಿಕ ಸಿದ್ದತೆ ಇಲ್ಲದ ದೋಷ

ಉದ್ದೇಶಗಳನ್ನು ನಿರ್ಧರಿಸಿಕೊಳ್ಳದೆ ಆಲಿಸುವುದು, ಶಾರೀರಿಕ ಮತ್ತು ಮಾನಸಿಕ ಸಿದ್ದತೆ ಇಲ್ಲದೆ ಆಲಿಸುವುದು, ಪ್ರಚೋದನೆಗೊಳ್ಳದೆ ಬೇಕಾಬಿಟ್ಟಿ ಕೇಳುವುದು, ಅನಾಸಕ್ತಿಯಿಂದ ಕೇಳುವುದು, ಕೇಳುಗರನ್ನು ಪ್ರಚೋದಿಸದೆ ಹೇಳುವ ಸಂದರ್ಭಗಳು, ಏಕೆ ಕೇಳಬೇಕು, ಏನು ಕೇಳಬೇಕು ಮತ್ತು ಹೇಗೆ ಕೇಳಬೇಕೆಂಬ ಪರಿವೆಯೇ ಇಲ್ಲದೆ ಆಲಿಸುವುದು, ಅವಧಾನವಿಲ್ಲದೆ ಆಲಿಸುವುದು, ಮಾನಸಿಕ ಏಕಾಗ್ರತೆಯ ಕೊರತೆಯಿಂದ ಕೇಳುವುದು.

3.1.2.2 ಭಾಷೆಯ ಅಪೂರ್ಣತೆ

ಕೇಳುವ ಭಾಷೆಯ ಧ್ವನಿ, ಶೈಲಿಯ ಪರಿಚಯವಿಲ್ಲದೆ ಕೇಳುವುದು, ಧ್ವನಿ ವ್ಯತ್ಯಾಸಗಳಿಂದಾಗುವ ಅರ್ಥ ವ್ಯತ್ಯಾಸಗಳನ್ನು ಗುರುತಿಸದೆ ಕೇಳುವುದು, ಪದ ಸಂಪತ್ತಿನ ಕೊರತೆಯಿಂದ ಕೇಳುವುದು, ಪರಿಚಯವಿಲ್ಲದ ವಾಕ್ಯಗಳನ್ನು ಕೇಳುವುದು, ವ್ಯಾಕರಣದ ನಿಯಮಗಳ ಬಗ್ಗೆ ತಿಳುವಳಿಕೆ ಇಲ್ಲದೆ ಕೇಳುವುದು, ಹೇಳುವವರ ಅಸ್ಪಷ್ಟ ಉಚ್ಚಾರ.

3.1.2.3. ದೈಹಿಕ ಮತ್ತು ಶ್ರವಣ ದೋಷ

ದೈಹಿಕವಾಗಿ ಬಳಲಿರುವಾಗ ಕೇಳುವುದು, ಆತುರದಿಂದ, ಭಯ, ಸಂಕೋಚದಿಂದ ಕೇಳುವುದು, ಸರಿಯಾಗಿ ಕುಳಿತುಕೊಳ್ಳದೆ, ಒತ್ತಡದಲ್ಲಿ ಕೇಳುವುದು, ಕಿವಿ ಕೇಳಿಸದೆ ಇರುವಾಗ ಕೇಳುವುದು, ದೈಹಿಕ ಅನಾರೋಗ್ಯದ ಮಧ್ಯೆ ಇರುವಾಗ ಕೇಳುವುದು, ಆಯಾಸದಿಂದ ಅಪೂರ್ವ ಕೇಳುವುದು.

3.1.2.4. ಮಾನಸಿಕ ವಿಕ್ಷಿಪ್ತತೆ

ಮಾನಸಿಕ ಸಿದ್ಧತೆ ಇಲ್ಲದೆ ಕೇಳುವುದು, ಅನ್ಯ ಮನಸ್ಸಿನಿಂದ ಕೇಳುವುದು, ಹಗಲುಗನಸು ಕಾಣುತ್ತಾ ಕೇಳುವುದು, ಮಾನಸಿಕ ಒತ್ತಡದ ಸಂದರ್ಭಗಳಲ್ಲಿ ಕೇಳುವುದು, ಭಯದ ವಾತಾವರಣದಲ್ಲಿ ಕೇಳುವುದು, ಮಾನಸಿಕ ಅಸ್ವಸ್ಥತೆಯಿಂದ ಕೇಳುವುದು, ಆಲಿಸುತ್ತ ಭಾವುಕರಾಗಿ ಪ್ರತಿಕ್ರಿಯಿಸುವುದು, ಸಂಕೋಚದಿಂದ ಕೇಳುವುದು, ಆಲಿಸುವಾಗ ಸಹನೆ ಕಳೆದುಕೊಳ್ಳುವುದು

3.1.2.5. ಅಪೂರ್ಣ ಕೇಳುವಿಕೆ

ಕೆಲವೇ ಅಂಶಗಳನ್ನು ಆಲಿಸುವುದು, ಬಿಟ್ಟು ಬಿಟ್ಟು ವಿಷಯಗಳನ್ನು ಆಲಿಸುವುದು, ಆಲಿಸುವಿಕೆಯಲ್ಲಿ ಹಿಮ್ಮರಳುವಿಕೆ ಆಗುವುದು, ಅಂಕಿ ಅಂಶಗಳನ್ನು ಮಾತ್ರ ಕೇಳಿ ವಿಷಯವನ್ನು ಕೈಬಿಡುವುದು, ಅರ್ಥಗ್ರಹಿಸದೆ ಯಾಂತ್ರಿಕವಾಗಿ ಕೇಳುವುದು, ಮುಖ್ಯಾಂಶಗಳನ್ನು ಗಮನಿಸದೆ ಕೇಳುವುದು, ವಿಷಯವನ್ನು ಇಡಿಯಾಗಿ ಗ್ರಹಿಸದೆ ಬಿಡಿಬಿಡಿಯಾಗಿ ಆಲಿಸುವುದು, ಕೇಳಿದ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳದೆ ಮರೆಯುವುದು, ಪೂರ್ಣ ಕೇಳುವ ಮುನ್ನವೇ ತೀರ್ಮಾನ ಕೈಗೊಳ್ಳುವುದು, ಕೇಳುವುದೆಲ್ಲವನ್ನು ಆತುರವಾಗಿ ಟಿಪ್ಪಣಿಕೊಳ್ಳುವುದು

3.1.2.6. ಆಲಿಸುವಿಕೆಯ ವ್ಯಕ್ತಿನಿಷ್ಠತೆ

ವಿಷಯ ಅಥವಾ ವ್ಯಕ್ತಿಯ ಬಗ್ಗೆ ಪೂರ್ವಗ್ರಹ ಹೊಂದಿ ಕೇಳುವುದು, ಮೇಲರಿಮೆ ಅಥವಾ ಕೀಳರಿಮೆಯಿಂದ ಕೇಳುವುದು, ವಿಷಯ ಅತ್ಯಂತ ಮುಖ್ಯ ಅಥವಾ ಅಮುಖ್ಯ ಎಂದು ಕೇಳುವುದು, ಇದೆಲ್ಲವೂ ನನಗೆ ಗೊತ್ತಿದೆ ಎಂದು ಕೇಳುವುದು, ನನಗೆ ಅರ್ಥವೇ ಆಗುವುದಿಲ್ಲ ಎಂದು ಭಾವಿಸಿ ಕೇಳುವುದು, ತಪ್ಪು ಹುಡುಕುವ ಉದ್ದೇಶದಿಂದ ಕೇಳುವುದು

3.1.2.7. ಆಲಿಸುವ ಸಂದರ್ಭ ಅಥವಾ ಸ್ಥಳದಲ್ಲಿನ ಅಡಚಣೆಗಳು

ಕುಳಿತು ಕೇಳುವ ಆಸನ ವ್ಯವಸ್ಥೆ ಅಸಮರ್ಪಕತೆ, ಶಬ್ದ ಮಾಲಿನ್ಯ ಮತ್ತು ಗಾಳಿ, ಬೆಳಕಿನ ಕೊರತೆ, ನಿರ್ಬಂಧದ ಸನ್ನಿವೇಶಗಳಲ್ಲಿ ಕೇಳುವುದು.

ಈ ರೀತಿ ವಿವಿಧ ಕಾರಣಗಳಿಂದಾಗಿ ಆಲಿಸುವ ಕ್ರಿಯೆಯಲ್ಲಿ ದೋಷಗಳಾಗುತ್ತದೆ. ಎಂದು ತಜ್ಞರು ಗುರುತಿಸಿದ್ದಾರೆ. ಈ ದೋಷಗಳು ವೈಜ್ಞಾನಿಕವಾಗಿ ಗುರುತಿಸಲ್ಪಟ್ಟಿದ್ದರೂ ಅದು ಜನಪದ ಮೂಲದಲ್ಲೂ ಇದ್ದ ದೋಷಗಳಾಗಿವೆ. ಕಲಿಕಾರ್ಥಿಯ ಆಲಿಸುವಿಕೆಯಲ್ಲಿ ಕಂಡುಬರುವ ಇಂತಹ ದೋಷಗಳನ್ನು ಗುರುತಿಸಿ, ಸೂಕ್ತ ತಿಳುವಳಿಕೆ ನೀಡುವುದು ತರಗತಿ ಕೋಣೆಗೆ ಎಷ್ಟು ಅನಿವಾರ್ಯವೋ ಜನಪದ ಸಾಹಿತ್ಯವನ್ನು ಕಲಿಯುವ ಸಂದರ್ಭದಲ್ಲೂ ಈ ರೀತಿಯ ತಿದ್ದುವಿಕೆ ಅಗತ್ಯವಾಗಿತ್ತು. ಆಗ ಮುಖ್ಯ ಹಾಡುಗಾರ್ತಿ ಕಲಿಕಾರ್ಥಿಗೆ ಸೂಕ್ತ ಪದಗಳನ್ನು ಕಲಿಸುವ ಪ್ರಕ್ರಿಯೆ ಸಾಮಾನ್ಯವಾಗಿ ಪ್ರದರ್ಶನದ ಹೊರತಾಗಿ ರಾತ್ರಿ ಹೊತ್ತಿನಲ್ಲಿ ನಡೆಯುತ್ತಿತ್ತು. ಅದಕ್ಕಾಗಿ ಔಪಚಾರಿಕ ಶಿಕ್ಷಣವು ಹೇಳಿರುವ ಈ ಕೆಳಗಿನ ಉತ್ತಮಾಂಶಗಳನ್ನು ಜನಪದರು ಮೊದಲೇ ಅಳವಡಿಸಿಕೊಂಡಿದ್ದರು.

3.1.3.ಆಲಿಸುವಿಕೆ ಸೂತ್ರ

ಉತ್ತಮ ಆಲಿಸುವಿಕೆ ಬರೀ ಯಾಂತ್ರಿಕ ಕೇಳುವಿಕೆಯಲ್ಲ ಅಥವಾ ಶಬ್ದಗಳನ್ನು ಕೇಳಿ ಪುನರುಚ್ಚರಿಸುವುದೂ ಅಲ್ಲ. ಇದೊಂದು ಪ್ರಜ್ಞಾಪೂರ್ವಕ, ಅರ್ಥಪೂರ್ಣ ಮಾನಸಿಕ ಕ್ರಿಯೆ. ಆಲಿಸುವಿಕೆಯು ಒಂದು ವಸ್ತುನಿಷ್ಠ, ಮುಕ್ತ ಸ್ವೀಕೃತ ಕ್ರಿಯೆ. ಹಲವು ಹತ್ತು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಲಿಸಿದಾಗ ಆಲಿಸುವಿಕೆ ಅರ್ಥಪೂರ್ಣವಾಗುತ್ತದೆ. ಜನಪದರು ಇದನ್ನು ಸ್ಪಷ್ಟವಾಗಿ ಅರಿತಿದ್ದರು. ಇಲ್ಲದೇ ಇದ್ದರೆ ಐನೂರು ಆರುನೂರು ವರ್ಷಗಳ ಹಿಂದೆ ರಚನೆಯಾದ ಸಾಹಿತ್ಯದ ತಿರುಳು ಕನಿಷ್ಟ ಸುಮಾರು ಏಳೆಂಟು ತಲೆಮಾರುಗಳನ್ನು ದಾಟಿ ಬಂದಿರುವುದಾದರೂ ಹೇಗೆ ಎನ್ನುವುದೇ ಇಲ್ಲಿಯ ಮುಖ್ಯ ಪ್ರಶ್ನೆ. ಆದ್ದರಿಂದ ಈ ಕೆಳಗಿನ ಸೂತ್ರಗಳನ್ನು ಗಮನಿಸಬೇಕಾಗಿದೆ.

3.1.3.1.ಉದ್ದೇಶ ಪೂರಕ, ಪ್ರಚೋದನೆ

ಏಕೆ ಆಲಿಸಬೇಕು? ಏನು ಆಲಿಸಬೇಕು? ಹೇಗೆ ಆಲಿಸಬೇಕು? ಎಂಬುದನ್ನು ನಿರ್ದಿಷ್ಟಪಡಿಸಿಕೊಂಡು ಪ್ರಜ್ಞಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ, ಮಾನಸಿಕ ಸಿದ್ಧತೆಯಿಂದ, ಶಿಸ್ತಿನಿಂದ, ಏಕಾಗ್ರತೆಯಿಂದ ಆಸಕ್ತಿಯಿಂದ, ಪ್ರಚೋದನೆಗೊಂಡು ಆಲಿಸುವುದು. ಏನನ್ನು ಆಲಿಸಬೇಕು ಎಂಬ ಬಗ್ಗೆ ವಿಷಯ ವ್ಯಾಪ್ತಿಯ ಸ್ಪಷ್ಟ ಉದ್ದೇಶಗಳು ಇರುವ ಸೂತ್ರ ಇದಾಗಿದೆ.

3.1.3.2. ಶಾರೀರಿಕ, ಮಾನಸಿಕ ಆರೋಗ್ಯದ ಸ್ಥಿತಿ

ಶಾರೀರಿಕ, ಮಾನಸಿಕ ಹಾಗೂ ಶ್ರವಣ ಆರೋಗ್ಯ ಉತ್ತಮವಾಗಿದ್ದು, ಶಾರೀರಿಕ, ಮಾನಸಿಕ ಹೊಂದಾಣಿಕೆಯಿಂದ ಸಂಪೂರ್ಣ ಪಾಲ್ಗೊಂಡು, ಮಾನಸಿಕ ಶಿಸ್ತಿನಿಂದ

ಆಲಿಸಿದಾಗ ವಿಷಯ ಖಚಿತವಾಗುವುದು. ಆ ಸಂದರ್ಭವನ್ನು ಪ್ರಜ್ಞಾಪೂರ್ವಕವಾಗಿ ಬಳಸಿಕೊಳ್ಳುವುದು.

3.1.3.3. ಆಸಕ್ತಿಯ ಆಲಿಸುವಿಕೆ

ಆರಾಮವಾಗಿ ಕುಳಿತು ಶಾಂತಚಿತ್ತದಿಂದ ಕೇಳುವುದು, ವಿಷಯಗಳನ್ನು ಆತ್ಮೀಯತೆಯಿಂದ ಆಲಿಸುವುದು, ಅಸಡ್ಡೆಯಿಂದ ಕೇಳದೆ ಕುತೂಹಲದಿಂದ ಪ್ರಿಯವಾಗಿ ಕೇಳುವುದು. ಆಸಕ್ತಿಯನ್ನು ಕೊನೆಯವರೆಗೂ ಉಳಿಸಿಕೊಂಡು ಜಾಗರೂಕತೆಯಿಂದ ಆಲಿಸುವುದು ಈ ಸೂತ್ರದ ಸಾಲಿಗೆ ಸೇರುತ್ತದೆ.

3.1.3.4. ಆಲಿಸುತ್ತಾ ಗ್ರಹಿಸುವಿಕೆ

ನಿರುತ್ಸಾಹದಿಂದ, ಜಡತೆಯಿಂದ ಕೇಳದೆ ಕ್ರಿಯಾಶೀಲರಾಗಿ ಆಲಿಸುವುದು, ವಿಷಯಗಳನ್ನು ಅರ್ಥವತ್ತಾಗಿ, ವಿಷಯಗಳಾಗಿ, ಭಾವನೆಗಳಾಗಿ ಗ್ರಹಿಸುವುದು, ಕೇಳುವ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು, ಸ್ಮರಣೆಯಲ್ಲಿಟ್ಟುಕೊಳ್ಳುವುದು, ವಿಷಯಗಳನ್ನು ಆಳವಾಗಿ ಆಲಿಸಿ ಪ್ರತಿಕ್ರಿಯಿಸುವುದು ಇಲ್ಲಿ ಪ್ರಮುಖ ಅಂಶಗಳಾಗಿವೆ.

3.1.3.5. ಭಾಷಾ ಸಾಮರ್ಥ್ಯ

ಭಾಷಾ ಸಾಮರ್ಥ್ಯವು ಅರ್ಥಪೂರ್ಣ ಆಲಿಸುವಿಕೆಯನ್ನು ಬೆಂಬಲಿಸುತ್ತದೆ. ಕೇಳುವ ಭಾಷೆಯ ಪದಗಳು, ವಾಕ್ಯಗಳ ಪರಿಚಯ ಇದ್ದು ಉಚ್ಚಾರಣೆಯನ್ನು ಸ್ಪಷ್ಟವಾಗಿ ಕೇಳಿಸಿಕೊಂಡು ಅರ್ಥಮಾಡಿಕೊಳ್ಳಲಾಗುತ್ತದೆ. ಧ್ವನಿ ವ್ಯತ್ಯಾಸಗಳಲ್ಲಾಗುವ ಅರ್ಥವ್ಯತ್ಯಾಸಗಳನ್ನು ಗ್ರಹಿಸಬೇಕು. ಶಬ್ದಾರ್ಥ ಮತ್ತು ಭಾವಾರ್ಥಗಳನ್ನು ಗ್ರಹಿಸಬೇಕು. ಕೇವಲ ಅಂಕಿ ಅಂಶಗಳು, ಘಟನಗಳನ್ನಷ್ಟೇ ಕೇಳದೆ ವಿಷಯುಗಳನ್ನು ಅರ್ಥಮಾಡಿಕೊಳ್ಳಬೇಕು. ಕ್ಲಿಷ್ಟ ವಿಷಯಗಳನ್ನು ಕೈಬಿಡದೇ ಆಲಿಸುವುದು ಇಲ್ಲಿ ಬರುವ ಸೂತ್ರವಾಗಿದೆ.

3.1.3.6. ವಿಷಯವನ್ನು ಇಡಿಯಾಗಿ ಆಲಿಸಿ ಗ್ರಹಿಸುವಿಕೆ

ಆಲಿಸುವಾಗ ಪದಗಳು, ವಿಷಯಗಳನ್ನು ಬಿಡಿಬಿಡಿಯಾಗಿ ಗ್ರಹಿಸದೆ ಒಟ್ಟಾರೆ ಅರ್ಥವನ್ನು ಗ್ರಹಿಸುವುದು. ಆಲಿಸುವಾಗ ವಿಷಯಗಳನ್ನು ಮನಸ್ಸಿನಲ್ಲಿ ಕ್ರಮವಾಗಿ ಜೋಡಿಸಿಕೊಳ್ಳುವುದು, ವ್ಯಾಖ್ಯಾನಿಸಿಕೊಳ್ಳುವುದು, ಸಾಮಾನ್ಯೀಕರಿಸಿಕೊಳ್ಳುವುದು, ಕೇಳುವ ವಿಷಯಗಳನ್ನು ತನ್ನಲ್ಲಿರುವ ವಿಷಯಗಳೊಂದಿಗೆ ಸಮನ್ವಯಗೊಳಿಸಿಕೊಳ್ಳುತ್ತಾ ತನ್ನ ಸ್ವಂತ ಯೋಚನೆಗಳನ್ನಾಗಿ ಮಾಡಿಕೊಳ್ಳುವುದು, ಮುಖ್ಯಾಂಶಗಳನ್ನು ವಿಶೇಷ ಆಸಕ್ತಿಯಿಂದ ಗ್ರಹಿಸುವುದು, ಆಲಿಸುವ ವಿಷಯಗಳನ್ನು ದೃಶ್ಯವಾಗಿ ರೂಪಿಸುತ್ತಾ, ವಿಷಯಗಳಿಗೆ ಒಂದು ಚೌಕಟ್ಟನ್ನು ರೂಪಿಸಿಕೊಂಡು ಕ್ರಮಬದ್ಧವಾಗಿ ಆಲಿಸುವುದು ಇದರ ಪ್ರಧಾನ ವಿಧಾನವಾಗಿದೆ.

3.1.3.7 ಮುಕ್ತಮನಸ್ಸಿನ ಆಲಿಸುವಿಕೆ

ಆಲಿಸುವಿಕೆಯಲ್ಲಿ ಕಣ್ಣು, ಮನಸ್ಸುಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಅಥವಾ ವಿಷಯದ ಬಗ್ಗೆ ಯಾವುದೇ ರೀತಿಯ ಪೂರ್ವಾಗ್ರಹ ಹೊಂದದೆ, ಸಂಕುಚಿತ ದೃಷ್ಟಿ

ಮತ್ತು ಬಿಗಿ ಧೋರಣೆ ಇಲ್ಲದೆ ತೆರೆದ ಮನಸ್ಸಿನಿಂದ, ಕುತೂಹಲದಿಂದ, ಜಾಗರೂಕತೆಯಿಂದ ಆಲಿಸುವುದಾಗಿದೆ. ಕೇಳುವ ವಿಷಯ, ವ್ಯಕ್ತಿಯ ಬಗ್ಗೆ ಮೇಲರಿಮೆ ಅಥವಾ ಕೀಳರಿಮೆಯಿಂದ ಕೇಳದೇ ಕಲ್ಪನಾ ಲೋಕದಲ್ಲಿ ಹಗಲುಗನಸು ಕಾಣುತ್ತಾ ಆಲಿಸದಿರುವುದಾಗಿದೆ. ಎಲ್ಲವು ನನಗೆ ಗೊತ್ತಿದೆ ಎಂಬ ಭಾವನೆಯಿಂದ ಕೇಳದೆ, ಉಪಯುಕ್ತ ಹೊಸ ವಿಷಯಗಳನ್ನು ತಿಳಿಯುತ್ತಿದ್ದೇನೆ ಎಂಬ ಆಲೋಚನೆಯಿಂದ ಆಲಿಸುವುದಾಗಿದೆ.

3.1.3.8. ಸಹಜ ಮತ್ತು ನಿರಂತರ

ಆಲಿಸುವಿಕೆಯಲ್ಲಿ ವಿಷಯಗಳನ್ನು ಅಪೂರ್ಣವಾಗಿ ಪೂರ್ಣವಾಗಿ ಗ್ರಹಿಸುವುದು. ನಿರಂತರವಾಗಿ, ಸಹಜವಾಗಿ ಆಲಿಸುವುದು. ಆಲಿಸುವಿಕೆಯಲ್ಲಿ ಮುಂದೆ ಕೇಳುವ ವಿಷಯಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತಾ ಕೇಳುತ್ತಿರುವುದು, ಹಿಂದೆ ಕೇಳಿದ ವಿಷಯಗಳಲ್ಲಿ ಸಂದಿಗ್ಧತೆ ಬಂದರೆ, ಅರ್ಥವಾಗದ ಸಂದರ್ಭ ಇದ್ದರೆ ಪುನಃ ಈಗಾಗಲೇ ಕೇಳಿರುವ ವಿಷಯಗಳತ್ತ ಮನಸ್ಸನ್ನು ಹಿಂದಕ್ಕೆ ಹರಿಸದೇ ಆಲಿಸುವಾಗ ಪದಗಳು ಮತ್ತು ಪರಿಕಲ್ಪನೆಗಳನ್ನು ಸಾಂದರ್ಭಿಕವಾಗಿ ಅರ್ಥಮಾಡಿಕೊಳ್ಳುವುದು ಇಲ್ಲಿಯ ಪ್ರಮುಖ ಕ್ರಿಯೆಯಾಗಿದೆ.

3.1.3.9. ವಸ್ತುನಿಷ್ಟತೆ

ಆಲಿಸುವಿಕೆ ವಸ್ತುನಿಷ್ಟವಾಗಿ, ವಿಮರ್ಶಾತ್ಮಕವಾಗಿ ಇರುವುದು. ಕೇವಲ ಟೀಕೆ ಮಾಡುವುದು, ತಪ್ಪು ಹುಡುಕುವ ದೃಷ್ಟಿಯಿಂದಲೇ ಆಲಿಸುವುದು, ಅರ್ಥಗಳನ್ನು ಹುಡುಕುತ್ತಾ ಕೇಳುವುದು, ಹೇಳುವವರ ಭಾಷಾ ಶೈಲಿಯನ್ನು ಗಮನಿಸುವುದು, ಆದರೆ ಭಾಷಾ ಶೈಲಿಯನ್ನೇ ಗಮನಿಸಿ ವಿಷಯಗಳನ್ನು ಕೈಬಿಡದೇ ಇರವುದು, ವಿಷಯಗಳನ್ನು ಗ್ರಹಿಸುತ್ತಾ ಮತ್ತು ಅರ್ಥಗಳನ್ನು ಊಹಿಸುತ್ತಾ ಆಲಿಸುವುದು ಇಲ್ಲಿ ಕಂಡು ಬರುವ ವಿಧಾನವಾಗಿದೆ.

3.1.3.10. ಕಿವಿಯೊಂದಿಗೆ ಕಣ್ಣುಗಳ ಬಳಕೆ

ಹೇಳುವವರನ್ನು ನಿರಂತರ ನೋಡುತ್ತಾ ಅವರ ಹಾವಭಾವಗಳನ್ನು ಗಮನಿಸುತ್ತಾ ಕೇಳುವುದು. ಹೇಳುವವರು ನೀಡುವ ಸೂಚನನೆಗಳು, ನಿರ್ದೇಶನಗಳನ್ನು ಪಾಲಿಸುತ್ತಾ ಆಲಿಸುವುದು. ಆಗ ಕೇಳುವ ವಿಷಯಗಳಿಗೆ ಸರಿಯಾಗಿ ಅರ್ಥ ಸಿಗುತ್ತದೆ. ಕೇಳುವ ವಿಷಯಗಳಿಗೆ ಸ್ಪಂದಿಸುತ್ತಾ ಮುಖಭಾವಗಳು ವ್ಯಕ್ತವಾಗುವುದರಿಂದ ಹೇಳುವವರಿಗೂ ಪುನರ್ಮನನ ಆಗುತ್ತದೆ.

3.1.3.11. ಸಾವಧಾನದ ಆಲಿಸುವಿಕೆ

ಆಲಿಸುವಿಕೆಯು ಆತುರದ, ತಾತ್ಸಾರದ ಕೆಲಸವಲ್ಲ. ಆತುರ ಪಡದೆ ಸಾವಧಾನವಾಗಿ ಆಸಕ್ತಿಯಿಂದ ಆಲಿಸಿದಾಗ ವಿಷಯ ಮನನವಾಗುತ್ತದೆ. ಹೇಳುವುದಕ್ಕಿಂತ ಹೆಚ್ಚು ವೇಗವಾಗಿ ಕೇಳಬಹುದು. ಆದರೆ ಆತುರ ಪಡದೆ ವಿಷಯಗಳನ್ನು ಸಾವಧಾನವಾಗಿ

ಅರ್ಥಮಾಡಿಕೊಳ್ಳುತ್ತಾ ಮುಂದಿನ ವಿಷಯಗಳನ್ನು ನಿರೀಕ್ಷಿಸುತ್ತಾ, ಊಹಿಸುತ್ತಾ ಗ್ರಹಿಸುವ ಕ್ರಮವಿದೆ. ಸಂಶೋಧನೆಗಳು ಹೇಳುವಂತೆ ಒಬ್ಬ ಆರೋಗ್ಯವಂತ ವ್ಯಕ್ತಿ ಪ್ರತಿ ನಿಮಿಷಕ್ಕೆ 125-150 ಪದಗಳನ್ನು ಹೇಳಬಲ್ಲನಾದರೆ, ಅದೇ ವ್ಯಕ್ತಿ ಪ್ರತಿ ನಿಮಿಷಕ್ಕೆ ಸುಮಾರು 400 ಪದಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳಲು ಸಾಧ್ಯ. ಆಲಿಸಲು ಸಾಕಷ್ಟು ಸಮಯವಿರುತ್ತದೆ. ಈ ಸಮಯವನ್ನು ಉಪಯೋಗಿಸಿಕೊಂಡು ಹೇಳುವವರನ್ನು ಅನುಸರಿಸುತ್ತಾ ಅವರ ಮೂಲ ಭಾವನೆಗಳು ಮತ್ತು ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಿದ್ದರೆ ಆಲಿಸುವಿಕೆ ಅರ್ಥಪೂರ್ಣವಾಗುತ್ತದೆ.*3

3.1 ಆಲಿಸುವಿಕೆ ಮತ್ತು ಜನಪದ ಸಾಹಿತ್ಯ :

ಆಲಿಸುವಿಕೆಯಲ್ಲಿ ಈ ಮೇಲಿನ ಸೂತ್ರಗಳನ್ನು ಸಾಮಾನ್ಯವಾಗಿ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಬಳಸುತ್ತಾ ಬರಲಾಗಿದೆ. ಆದರೆ ಈ ಸೂತ್ರಗಳನ್ನು ಜನಪದ ಸಾಹಿತ್ಯಗಳ ಶಿಕ್ಷಣದಲ್ಲೂ ಬಳಸುತ್ತಿದುದನ್ನು ವಕ್ತೃಗಳು ವಿವರಿಸಿದ್ದಾರೆ. ಜನಪದ ಸಾಹಿತ್ಯ ನಿಂತಿರುವುದೇ ಕಲಿಕಾ ಕೌಶಲವಾದ ಆಲಿಸುವಿಕೆ ತಂತ್ರವೊಂದರಲ್ಲಿ ಮಾತ್ರ. ಈ ಮೊದಲೇ ತಿಳಿಸಿದಂತೆ ಅಭಿವ್ಯಕ್ತಿಯ ಮೊದಲ ಭಾಗವಾಗಿ ಆಲಿಸುವ ಕೌಶಲ ಬಳಕೆಯಾಗುತ್ತದೆ. ಈ ಮೇಲಿನ ಎಲ್ಲಾ ದೋಷ ಮತ್ತು ಉತ್ತಮ ಪಡಿಸಬಹುದಾದ ಅಂಶಗಳನ್ನು ಜನಪದರು ಸಾಹಿತ್ಯದ ಕಲಿಕೆಯಲ್ಲಿ ಬಳಸುತ್ತಿದ್ದರು ಎನ್ನುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಆದ್ದರಿಂದ ಔಪಚಾರಿಕ ಕಲಿಕೆಯಲ್ಲಿ ಬಳಸಲಾಗಿರುವ ಆಲಿಸುವ ಸೂತ್ರಗಳು ಜನಪದ ಆಲಿಸುವಿಕೆಯ ತಂತ್ರಗಳೇ ಆಗಿವೆ.

3.2 ಸಾಹಿತ್ಯ ಕಲಿಕೆಯ ವಿವಿಧ ಪದ್ಧತಿಗಳು

ಸಾಹಿತ್ಯ ಅಥವಾ ಭಾಷಾ ಬೋಧನೆ ಒಂದು ಕಲೆ. ಈ ಕಲೆಯನ್ನು ಕರಗತಗೊಳಿಸಲು ಆಧುನಿಕ ಪರಿಭಾಷೆಯಲ್ಲಿ ಅನೇಕ ಪದ್ಧತಿಗಳನ್ನು ಅಳವಡಿಸಲಾಗಿದೆ. ಆ ಪದ್ಧತಿಗಳನ್ನು ಸಾಂಪ್ರದಾಯಿಕ ಮತ್ತು ಆಧುನಿಕ ಎಂದು ವಿಭಾಗಿಸಿ ಪಟ್ಟಿ (ನೋಡಿ:ಅನುಬಂಧ-7ಮತ್ತು8)ಮಾಡಬಹುದು. ಪ್ರಸ್ತುತ ಅಧ್ಯಯನಕ್ಕೆ ನೇರ ಸಂಬಂಧ ಪಡುವ ಪದ್ಧತಿಗಳ ಸಂಕ್ಷಿಪ್ತ ವಿವರಣೆಗಳನ್ನು ಇಲ್ಲಿ ನೀಡಲಾಗಿದೆ.

3.3.1. ಕಥನ ಪದ್ಧತಿ

ಕಥೆ ಹೇಳುವುದು ಹಾಗೂ ಕೇಳುವುದು ನುಡಿ ತರಬೇತಿಯಲ್ಲಿ ಒಂದು ಭಾವರೂಪದ ಚಟುವಟಿಕೆಯಾಗಿದ್ದು, ಆಲಿಸುವಿಕೆ ಮತ್ತು ವಿಷಯ ಸಂವಹನಕ್ಕೆ ಉತ್ತಮ ಸಾಧನವಾಗಿದೆ. ಭಾಷೆಯ ಪ್ರಾಥಮಿಕ ಕೌಶಲ ಆಲಿಸುವಿಕೆಗೆ ಹೆಚ್ಚಿನ ಮಹತ್ವವಿರುವ ಈ ಚಟುವಟಿಕೆಯಲ್ಲಿ ಶಾರೀರಿಕ ಆಯಾಸವಿಲ್ಲದೆ ಶಾಂತವಾಗಿ ವಿಷಯ ಗ್ರಹಿಕೆಯಾಗುತ್ತದೆ. ಕಥೆ ಹೇಳುವುದು ಒಂದು ಸಾಂಪ್ರದಾಯಿಕ ಪದ್ಧತಿಯೆಂದು ಪರಿಗಣಿಸಿದ್ದರೂ ಪುರಾತನ ಕಾಲದಿಂದಲೇ ಕಥೆ ಹೇಳುವ ಕ್ರಮ ಜಾರಿಯಲ್ಲಿತ್ತು. ಮಕ್ಕಳು ತಮ್ಮ ಬಾಲ್ಯದಲ್ಲಿ ಕೇಳಿದ ಕಥೆಗಳಿಂದ ಪ್ರಭಾವಿತರಾಗುವುದು ಸಾಮಾನ್ಯ. ಕಲಿಕೆಯ ಅತ್ಯಂತ ಸುಲಭದ ವಿಧಾನ ಈ ಕಥೆ ಕೇಳುವುದು. ಇದರಿಂದ ಕಥನ ಪದ್ಧತಿಯ ಮಹತ್ವ ಅರ್ಥವಾಗುತ್ತದೆ. ಬೆಳೆಯುವ ಮಕ್ಕಳಿಗೆ ತಾಯಂದಿರು ಅಥವಾ ಅಜ್ಜಿಯಂದಿರು ಕತೆಗಳನ್ನು ಹೇಳುವುದು ಒಂದು ಪರಂಪರೆ.

ಒಂದು ವಸ್ತು, ವಿಷಯ, ವ್ಯಕ್ತಿ, ಘಟನೆ, ಸಂದರ್ಭಗಳ ಬಗೆಗೆ ಇರುವ ವಿಷಯವನ್ನು ಅಥವಾ ಎಂದೋ ಎಲ್ಲೋ ನಡೆದ ವಿಷಯವನ್ನು ಅಥವಾ ಕೆಲವು ಕಲ್ಪನೆಗಳನ್ನು ಅತಿಮಾನುಷ ವಿಚಾರಗಳನ್ನು ಅರ್ಥಬದ್ಧವಾಗಿ ಮತ್ತು ಕ್ರಮಬದ್ಧವಾಗಿ ಜೋಡಿಸಿಕೊಂಡು ಮೌಖಿಕವಾಗಿ ವಿವರಿಸುವುದು ಕಥೆಯಾಗುತ್ತದೆ. "ಕತೆಯ ಸ್ವರೂಪಕ್ಕೆ ಹೊಂದುವ ವಿಷಯ, ವಿವಿಧ ಪಾತ್ರಗಳು, ಸಂಭಾಷಣೆ ಸಂದರ್ಭಗಳನ್ನು ವಿವರವಾಗಿ ರಚಿಸಿ ಅರ್ಥಬದ್ಧ ಪದ ಮತ್ತು ವಾಕ್ಯಾವಳಿಗಳ ಮೂಲಕ ಅನುಕ್ರಮವಾಗಿ ಉತ್ತಮ ಧ್ವನಿಯ ಮೂಲಕ ವಿಷಯ ಸಂವಹನ ಮಾಡುವ ಕ್ರಮವೇ ಕಥನ ಪದ್ಧತಿ"

ಗತಕಾಲದ ವಿಷಯಗಳನ್ನು ಹೇಳುವಾಗ ಈ ಪದ್ಧತಿಯನ್ನು ಹೆಚ್ಚಾಗಿ ಬಳಸಲಾಗುತ್ತದೆ. ಮಕ್ಕಳಿಗೆ ವಿರಾಮ ಕೊಟ್ಟು ಅವರಿಗೆ ಆನಂದವನ್ನುಂಟುಮಾಡುವ ಮೂಲಕ ವಿಷಯ ತಿಳಿಸುವುದು ಈ ಪದ್ಧತಿಯ ವಿಶೇಷ. ಕಥೆ ಹೇಳುವುದು ಮತ್ತು ಕೇಳುವುದು ಬಾಯ್ದೆರೆ ಕೆಲಸದಲ್ಲಿ ಉಪಯುಕ್ತ ಮತ್ತು ಆಸಕ್ತಿದಾಯಕವಾದುದು. ಪ್ರಾಚೀನ ಭಾರತೀಯ ಶಿಕ್ಷಣದಲ್ಲಿ ಈ ಪದ್ಧತಿಯ ಬಳಕೆ ಕಂಡು ಬಂದಿದೆ. ಮಕ್ಕಳಿಗೆ ಭಾಷೆ ಮತ್ತು ವಿಷಯ ಜ್ಞಾನ ತಿಳಿಸಲು, ಅವರಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸಲು, ವ್ಯಕ್ತಿತ್ವವನ್ನು ರೂಪಿಸಲು ಕಥನ ಪದ್ಧತಿ ಸುಲಭ ಸಾಧನ. ಕಥೆ ಕೇಳುವುದು ಎಲ್ಲ ವಯೋಮಾನದವರಿಗೂ ಪ್ರಿಯವಾಗುತ್ತದೆ. ಇತಿಹಾಸದ ಪಾಠಗಳು ಮತ್ತು ಸಾಹಿತ್ಯ ವಿಷಯ ತಿಳಿಸಲು ಈ ಪದ್ಧತಿಯ ಬಳಕೆ ಸೂಕ್ತ. ಕಥನ ಪದ್ಧತಿಯ ಮೂಲಕ ಕಲಿಕೆಯ ಉತ್ತಮ ಬೆಳವಣಿಗೆ ಸಾಧ್ಯ. (ನೋಡಿ:ಅನುಬಂಧ–9)

3.3.2. ಉಪನ್ಯಾಸ ಪದ್ಧತಿ

ಶಿಕ್ಷಕನು ತಾನು ಬೋಧಿಸುವ ವಿಷಯದ ಬಗೆಗೆ ಹಲವು ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿಕೊಂಡು ಕಲಿಕಾರ್ಥಿಗಳಿಗೆ ವಾಕ್ಯಗುಚ್ಛಗಳ ಮೂಲಕ ಕ್ರಮಬದ್ಧವಾಗಿ ವಿವರಿಸುವುದನ್ನೇ ಸಾಮಾನ್ಯಾರ್ಥದಲ್ಲಿ ಉಪನ್ಯಾಸ ಎನ್ನಬಹುದು. ಬೋಧಿಸಬೇಕಾದ ಪಠ್ಯಕ್ಕೆ ಸಂಬಂಧಿಸಿದಂತೆ ವಿಷಯಗಳನ್ನು ತಿಳಿದುಕೊಂಡಿದ್ದು ಸುಸಂಬದ್ಧ ವಾಕ್ಯಗಳ ಮೂಲಕ ವಿದ್ಯಾರ್ಥಿಗಳ ಮುಂದೆ ಮೌಖಿಕವಾಗಿ ಹೇಳುವ ಅಥವಾ ವಿವರಿಸುವ ಪದ್ಧತಿಯೇ ಉಪನ್ಯಾಸ.

ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟಿನ ಪ್ರಕಾರ : ಉಪನ್ಯಾಸ ಕ್ರಮ ಎಂದರೆ "ವಿಷಯವೊಂದಕ್ಕೆ ಸಂಬಂದಿಸಿದ ವಿವರಗಳನ್ನು ಒದಗಿಸುವುದಕ್ಕೂ, ಚಟುವಟಿಕೆಗಳನ್ನು ಮೂಡಿಸುವುದಕ್ಕೂ, ವಿಮರ್ಶಾತ್ಮಕ ಆಲೋಚನೆಯನ್ನು ಹುಟ್ಟಿಸುವುದಕ್ಕೂ ಆಸಕ್ತಿ ಮೂಡಿಸುವುದಕ್ಕೂ ಅಥವಾ ಅಭಿಪ್ರಾಯಗಳನ್ನು ರೂಪಿಸುವುದಕ್ಕೂ ಅಧ್ಯಾಪಕರು ಪಾಠ ಮಾಡುವ ಒಂದು ವಿಧಾನ"

ವಿಷಯುವೊಂದನ್ನು ಸುಸಂಬದ್ಧ ವಾಕ್ಯಗಳ ಮೂಲಕ ವಮೌಖಿಕವಾಗಿ ನಿರೂಪಿಸುವುದೇ ಉಪನ್ಯಾಸ. ಏಕಮುಖ ಸಂವಹನ ಪದ್ಧತಿ ಆಗಿರುವ ಇಲ್ಲಿ ಕಲಿಯುವವರು ವಿಷಯಗಳನ್ನು ಆಲಿಸುವುದರ ಮೂಲಕ ವಿಷಯ ಜ್ಞಾನ ಗಳಿಸುತ್ತಾರೆ

3.3.3 ನಾಟಕಾಭಿನಯ ಪದ್ಧತಿ

ಬೋಧನೆಯಲ್ಲಿ ಬರುವ ಕಥೆ, ಜೀವನ ಚರಿತ್ರೆ, ವಿವರಣೆ ಮೊದಲಾದವುಗಳನ್ನು ಸಂಭಾಷಣೆಯ ರೀತಿ ಅಗತ್ಯ ಪಾತ್ರಗಳನ್ನು ಸೃಷ್ಟಿಸಿ ಸಂದರ್ಭಕ್ಕನುಗುಣವಾಗಿ ಶಾರೀರಿಕ ಹಾವಭಾವಗಳನ್ನು ಅಳವಡಿಸಿಕೊಂಡು ಭೋದಿಸುವುದೇ ನಾಟಕಾಭಿನಯ ಪದ್ದತಿ. ಈ ಪದ್ದತಿಯಲ್ಲಿ ವಿಷಯಗಳನ್ನು ಅಭಿನಯದ ಮೂಲಕ ಬೋಧಿಸಲಾಗುತ್ತದೆ. ಇಲ್ಲಿ ಬೋಧಿಸುವ ವಿಷಯಗಳನ್ನು ಅಭಿನಯದ ಮೂಲಕ ಸಂದರ್ಭಗಳೊಡನೆ ಪರಿಚಯಿಸಲಾಗುತ್ತದೆ. ನಾಟಕಾಭಿನಯ ಒಂದು ದೃಕ್–ಶ್ರವಣ ಬೋಧನಾ ಕ್ರಮವಾಗಿದ್ದು. ಬೋಧನೆ ಮತ್ತು ಕಲಿಕೆಯ ಸನ್ನಿವೇಶವನ್ನು ಜೀವಂತವಾಗಿ ರೂಪಿಸುತ್ತದೆ. ನಾಟಕ ಪದ್ದತಿಯು ಚಟುವಟಿಕೆ ಪ್ರಧಾನ, ಕ್ರೀಡಾ ರೂಪದ ಬೋಧನೆಯಾಗಿದ್ದು, ಶಿಶುಕೇಂದ್ರಿತ ಪದ್ದತಿಯ ತತ್ತ್ವಗಳಿಗನುಗುಣವಾಗಿದೆ. ಇಲ್ಲಿ ಮಕ್ಕಳು ಆಸಕ್ತಿಯಿಂದ ಆಡುತ್ತಾ, ಆನಂದದಾಯಕ ಸನ್ನಿವೇಶದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಾರೆ. ಅವರಿಗೆ ಕಲಿಕೆ ಹೊರೆ ಎನಿಸದೆ, ಕಲಿಕೆಯಲ್ಲಿ ಸ್ವಯಂ ಪಾಲ್ಗೊಳ್ಳುತ್ತಾರೆ.

3.3.4.ಪ್ರಶ್ನೋತ್ತರ ಪದ್ದತಿ

ಬೋಧಿಸುವ ವಿಷಯದ ಬಗೆಗೆ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಹೇಳಿಸುತ್ತಾ, ವಿವರಿಸುತ್ತಾ ಗ್ರಹಿಸಿದ ವಿಷಯ ಜ್ಞಾನವನ್ನು ಪರೀಕ್ಷಿಸುವ, ವಿಷಯ ಜ್ಞಾನವನ್ನು ತಿಳಿಸುವ ಕ್ರಮವೇ ಪ್ರಶ್ನೋತ್ತರ ಪದ್ದತಿ. ಪ್ರಶ್ನೆಗಳಿಗೆ ಹೆಚ್ಚಿನ ಮಹತ್ವವಿರುವ ಇಲ್ಲಿನ ಬೋಧನಾ ಕ್ರಿಯೆಯು ಪ್ರಧಾನವಾಗಿ ಪ್ರಶ್ನೋತ್ತರಗಳಿಂದಲೇ ಸಾಗುತ್ತದೆ. ಪ್ರಶ್ನೆಗಳನ್ನು ಕೇಳಿ ಕಲಿಕಾರ್ಥಿಯನ್ನು ಉದ್ದೀಪನಗೊಳಿಸುವುದು, ಅವರಿಂದ ಉತ್ತರಗಳನ್ನು ಹೇಳಿಸುತ್ತಾ ಕಲಿಕೆಯನ್ನು ದೃಢಪಡಿಸಿಕೊಳ್ಳುವುದು, ಚಟುವಟಿಕೆಯಿಂದ ಮುಂದಿನ ಕಲಿಕೆಯಲ್ಲಿ ಭಾಗವಹಿಸುವಂತೆ ಉತ್ತೇಜಿಸುವುದು ಈ ಪದ್ದತಿಯ ವೈಶಿಷ್ಟ್ಯ. ಕಲಿಯುವ ಸನ್ನಿವೇಶದಲ್ಲಿ ಮಕ್ಕಳಿಗೂ ಪ್ರಶ್ನೆಗಳನ್ನು ಕೇಳಿ ತಮ್ಮ ಸಂದಿಗ್ಧತೆಯನ್ನು ಪರಿಹರಿಸಿಕೊಂಡು ವಿಷಯವನ್ನು ಮನನ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಕಲಿಕಾರ್ಥಿಗೆ ಬೋಧನೆ ಅರ್ಥವಾಗುತ್ತಿದೆಯೇ? ಏನು ಅರ್ಥವಾಗಿದೆ? ಎಷ್ಟು ಅರ್ಥವಾಗುತ್ತಿದೆ? ಹೇಗೆ ಅರ್ಥವಾಗಿದೆ? ಯಾವ ಯಾವ ವಿಷಯಗಳು ಯಾವ ದೃಷ್ಟಿಕೋನದಿಂದ ಅರ್ಥವಾಗುತ್ತಿದೆ? ಎಂಬುದನ್ನು ತಿಳಿಯಲು ಈ ಪದ್ಧತಿ ಅನುಕೂಲ. ಗ್ರೀಸ್ ದೇಶದ ತತ್ತ್ವಜ್ಞಾನಿ ಸಾಕ್ರಟೀಸ್‌ನಿಂದ ಪ್ರಾರಂಭವಾದ ಇದಕ್ಕೆ 'ಸಾಕ್ರಟೀಸ್ ಪದ್ದತಿ' ಎಂದೂ ಕರೆಯುತ್ತಾರೆ. ಗ್ರೀಸ್‌ನಲ್ಲಿ ರಾಜಕೀಯ, ಇತಿಹಾಸದ ವಿಷಯಗಳನ್ನು ಕಲಿಯಲು, ಕಲಿಸಲು, ಈ ಪದ್ದತಿಯನ್ನು ಬಳಸಿಕೊಳ್ಳಲಾಗುತ್ತಿತ್ತು. ಪ್ರಾಚೀನ ಭಾರತೀಯ ಶಿಕ್ಷಣ ಪದ್ಧತಿಯಲ್ಲೂ ಕೂಡ ಬೋಧನೆಯು ಪ್ರಶ್ನೋತ್ತರ ಪದ್ದತಿಯಿಂದಲೇ ಪ್ರಧಾನವಾಗಿ ನಡೆಯುತ್ತಿತ್ತು.

3.3.5. ಅನುಗಮನ ಪದ್ದತಿ ಅಥವಾ ನಿಯಮ ನಿರೂಪಣಾ ಪದ್ಧತಿ :

ಅನುಗಮನ ಪದ್ಧತಿಯನ್ನು ಫ್ರಾನ್ಸಿಸ್ ಬೇಕನ್ ಪ್ರತಿಪಾದಿಸಿದ್ದಾರೆ. "ನಿರ್ದಿಷ್ಟವಾದ

ವಿಷಯಗಳಿಂದ ಒಂದು ಸಾಮಾನ್ಯ ತೀರ್ಮಾನದತ್ತ ತಾರ್ಕಿಕವಾಗಿ ಯೋಚಿಸುವ ಒಂದು ವಿಧಾನವೇ ಅನುಗಮನ ಅಥವಾ ಅನುಮಾನ ಪದ್ಧತಿ". ಒಂದು ಸಾಮಾನ್ಯ ತೀರ್ಮಾನವನ್ನು ಪ್ರತಿಪಾದಿಸುವುದಕ್ಕಾಗಿ ಅಥವಾ ಸಮರ್ಥಿಸುವುದಕ್ಕಾಗಿ ದೃಷ್ಟಾಂತಗಳನ್ನು ಕೊಡುವುದು, ನಿರ್ದಿಷ್ಟವಾದ ಕೆಲವು ಉದಾಹರಣೆಗಳಿಂದ ಸಾಮಾನ್ಯ ಸೂತ್ರವನ್ನು ಕಟ್ಟುವುದೇ ಈ ಪದ್ದತಿಯ ವೈಶಿಷ್ಟ್ಯ.

ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟಿನ ಪ್ರಕಾರ ಅನುಗಮನ ಪದ್ದತಿ ಎಂದರೆ, 'ನಿರ್ದಿಷ್ಟವಾದ ನಿದರ್ಶನಗಳಿಂದ ಆರಂಭಿಸಿ ಸಾಮಾನ್ಯ ನಿಯಮ ನಿರೂಪಣೆಯ ಕಡೆಗೆ ಆಲೋಚನೆಯನ್ನು ಸಾಗಿಸುವ ಒಂದು ವಾದ, ಸಂಶೋಧನೆ ಅಥವಾ ಅಧ್ಯಯನ. ಇದು ಅಗತ್ಯವೆನಿಸುವ ನಿರ್ದೇಶನಾದಿ ಅಂಕಿ ಅಂಶಗಳನ್ನು ಒದಗಿಸಿ, ಕಲಿಕಾರ್ಥಿಗಳೇ ಅವುಗಳಲ್ಲಿ ಅಡಗಿರುವ ನಿರ್ದಿಷ್ಟ ಸೂತ್ರ, ನಿಯಮ, ತತ್ತ್ವ ಅಥವಾ ಇನ್ನಿತರ ಸತ್ಯಾಂಶಗಳನ್ನು ಕಂಡುಕೊಳ್ಳಲು ನೆರವಾಗುವ ಕಡೆಗೆ ವಿದ್ಯಾರ್ಥಿಗಳನ್ನು ನಿರ್ದೇಶಿಸುವ ಒಂದು ಬೋಧನಾ ಪದ್ಧತಿ'.

ಬೋಧಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಉದಾಹರಣೆಗಳನ್ನು ಅಥವಾ ಆಧಾರಾಂಶಗಳನ್ನು ಮೊದಲು ನೀಡಿ, ಅವುಗಳನ್ನು ಅರ್ಥೈಸಿ, ನಂತರ ಆ ಉದಾಹರಣೆಗಳಲ್ಲಿನ ಸಾಮಾನ್ಯ ಗುಣ ಲಕ್ಷಣವನ್ನು ಪ್ರತಿಬಿಂಬಿಸುವಂತೆ ಒಂದು ಸೂತ್ರ ಅಥವಾ ನಿಯಮವನ್ನು ರೂಪಿಸುವುದೇ ಅನುಗಮನ ಪದ್ಧತಿಯ ಬೋಧನೆ. ಈ ಪದ್ಧತಿಯಲ್ಲಿ ಬೋಧನಾ ವಿಷಯದ ಬಗೆಗೆ ಹಲವು ಉದಾಹರಣೆಗಳನ್ನು ಕಲಿಕಾರ್ಥಿಗೆ ಒದಗಿಸಲಾಗುತ್ತದೆ. ನಂತರ ಅವರೇ ಈ ಉದಾಹರಣೆಗಳಲ್ಲಿರುವ ಸಾಮಾನ್ಯ ಗುಣವನ್ನು ಗುರ್ತಿಸಿ ಈ ಗುಣವನ್ನು ಪ್ರತಿಬಿಂಬಿಸುವಂತಹ ಒಂದು ನಿಯಮವನ್ನು ರಚಿಸಲು ಶಕ್ತರಾಗುತ್ತಾರೆ. ಈ ಕ್ರಮದಲ್ಲಿ ಬೋಧನೆಯು ಉದಾಹರಣೆಗಳಿಂದ ಸಾಮಾನ್ಯ ನಿಯಮದ ಕಡೆಗೆ ಸಾಗುತ್ತದೆ, ನಿರ್ದಿಷ್ಟತೆಯಿಂದ ಸ್ಥೂಲದ ಕಡೆಗೆ ಸಾಗುತ್ತದೆ, ಮೂರ್ತದಿಂದ ಅಮೂರ್ತದ ಕಡೆಗೆ ಸಾಗುತ್ತದೆ, ಬಿಡಿಯಿಂದ ಇಡಿಯ ಕಡೆಗೆ ಸಾಗುತ್ತದೆ, ಸರಳತೆಯಿಂದ ಸಮನ್ವಯದ ಕಡೆಗೆ ಸಾಗುತ್ತದೆ, ಸುಲಭದಿಂದ ಸಂಕೀರ್ಣದ ಕಡೆಗೆ ಸಾಗುತ್ತದೆ.

3.3.6. ನಿಗಮನ ಅಥವಾ ನಿಯಮ ಪರಿಪಾಲನಾ ಪದ್ದತಿ :

ಅನುಗಮನ ಪದ್ಧತಿಗೆ ತದ್ವಿರುದ್ಧವಾಗಿ ನಿಗಮನ ಪದ್ಧತಿಯು ಅನುಗಮನ ಪದ್ಧತಿಯ ಬೋಧನಾ ಕ್ರಿಯೆಯ ಕೊನೆಯ ಹಂತದಲ್ಲಿ ಪ್ರಾರಂಭವಾಗುತ್ತದೆ. ಅನುಗಮನ ಪದ್ಧತಿಯಲ್ಲಿ ಒಂದು ಸಾಮಾನ್ಯ ನಿಯಮ ಅಥವಾ ಸೂತ್ರದೊಂದಿಗೆ ಬೋಧನೆಯು ಕೊನೆಯಾಗುತ್ತದೆ. ನಿಗಮಸ ಪದ್ಧತಿಯ ಬೋಧನೆಯು ಒಂದು ಸಾಮಾನ್ಯ ನಿಯಮ ಅಥವಾ ಸೂತ್ರದೊಂದಿಗೆ ಪ್ರಾರಂಭವಾಗುತ್ತದೆ.

"ಸಾಮಾನ್ಯ ತೀರ್ಮಾನ, ಸೂತ್ರ/ ನಿಯಮದಿಂದ ಪ್ರಾರಂಭವಾಗಿ ನಿರ್ದಿಷ್ಟವಾದ ವಿಷಯಗಳತ್ತ ತಾರ್ಕಿಕವಾಗಿ ಸಾಗುವ ಬೋಧನಾ ಕ್ರಿಯೆಯೇ ನಿಗಮನ ಅಥವಾ ನಿಯಮ ಪರಿಪರಿಪಾಲನ ಪದ್ಧತಿ".

ನಿಗಮನ ಪದ್ಧತಿಯಲ್ಲಿ ಬೊಧನೆ/ ಕಲಿಕಾ ಕ್ರಿಯೆಯು ಸಾಮಾನ್ಯ ನಿಯಮ/

ಸೂತ್ರದಿಂದ ನಿರ್ದಿಷ್ಟ ಉದಾಹರಣೆಗಳ ಕಡೆಗೆ, ಅಮೂರ್ತದಿಂದ ಮೂರ್ತದ ಕಡೆಗೆ, ಇಡಿಯಿಂದ ಬಿಡಿಯ ಕಡೆಗೆ, ಸಂಕೀರ್ಣತೆಯಿಂದ ಸರಳತೆಯ ಕಡೆಗೆ, ಸ್ಥೂಲದಿಂದ ನಿರ್ದಿಷ್ಟತೆಯ ಕಡೆಗೆ ಸಾಗುತ್ತದೆ.

ಬೋಧಿಸುವ ಪಠ್ಯಾಂಶದ ಬಗ್ಗೆ ಒಂದು ನಿಯಮ ಅಥವಾ ಸೂತ್ರವನ್ನು ಮೊದಲು ಹೇಳಿ, ಈ ಸೂತ್ರದಲ್ಲಿರುವ ಅರ್ಥಕ್ಕೆ ಸಂಬಂಧಿಸಿದಂತಹ ನಿರ್ದಿಷ್ಟ ಉದಾಹರಣೆಗಳನ್ನು ಹುಡುಕಿ ಸೂತ್ರವನ್ನು ಅನ್ವಯಿಸಿಕೊಂಡು ಬೋಧಿಸಲಾಗುತ್ತದೆ. ವ್ಯಾಕರಣ ಬೋಧನೆಯಲ್ಲಿ ಸಂಧಿ, ಸಮಾಸ, ಅಲಂಕಾರಗಳನ್ನು ಬೋಧಿಸುವಾಗ ಇವುಗಳಿಗೆ ಸಂಬಂಧಿಸಿದ ಒಂದು ಸೂತ್ರವನ್ನು ಮೊದಲು ಕೊಟ್ಟು ಅದನ್ನು ಉದಾಹರಣೆಗಳ ಮೂಲಕ ಅನ್ವಯಿಸಿ ಅರ್ಥ ಮಾಡಿಸಲಾಗುತ್ತದೆ.

3.3.7. ಕ್ರೀಡಾ ಪದ್ಧತಿ

ಕ್ರೀಡಾಪದ್ಧತಿಯು ಚಟುವಟಿಕೆ ಪ್ರಧಾನವಾದ ಆಧುನಿಕ, ಮನೋವೈಜ್ಞಾನಿಕ ಬೋಧನಾ ಕ್ರಮ. ಸಹಜ ಸಹಭಾಗಿಯಾಗಿ, ಸ್ವಯಂ ಕಲಿಕೆ ಆಗುತ್ತದೆ. ಮಾಡುತ್ತಾ ಕಲಿ, ಆಡುತ್ತಾ ಕಲಿ ಮತ್ತು ಪಾಲ್ಗೊಂಡು ಕಲಿ ಎಂಬ ಮನೋವೈಜ್ಞಾನಿಕ ತತ್ತ್ವದ ಬೆಳಕಿನಲ್ಲಿ ಕ್ರೀಡಾ ಪದ್ಧತಿಯು ಮೂಡಿಬಂದಿದೆ. ಕಲಿಸುವ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕ್ರೀಡಾರೂಪದಲ್ಲಿ ಕಲಿಸುವುದೇ ಕ್ರೀಡಾ ಪದ್ಧತಿ.

ಬೋಧಿಸುವ ವಿಷಯಗಳನ್ನು ಆಟದ ಮೂಲಕ ಕಲಿಸಿಕೊಡುವುದೇ ಕ್ರೀಡಾ ಪದ್ಧತಿ. ಕಲಿಕಾರ್ಥಿಯಲ್ಲಿ ಸಹಜವಾಗಿರುವ ಕ್ರೀಡಾ ಮನೋಭಾವವನ್ನು ಅನುಸರಿಸಿ ಕ್ರೀಡೆಗಳ ಮೂಲಕ ವಿಷಯಗಳನ್ನು ಪರಿಚಯಿಸಲಾಗುತ್ತದೆ. ಶೈಕ್ಷಣಿಕ ವಿಷಯಗಳನ್ನು ಆಟದ ರೂಪದಲ್ಲಿ ವರ್ಗಾಯಿಸಿ ಚಟುವಟಿಕೆಗಳ ಮೂಲಕ ವರ್ಣರಂಜಿತವಾಗಿ ಆಕರ್ಷಕವಾಗಿ ಕಲಿಸುವುದೇ ಕ್ರೀಡಾ ಪದ್ಧತಿ. ಆಟವು ಮಕ್ಕಳ ಸಹಜ ಪ್ರವೃತ್ತಿಯಾಗಿದ್ದು ಆಟದ ಮೂಲಕ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆ ಮತ್ತು ಸಮತೋಲನವನ್ನು ಕಾಪಾಡಿಕೊಳ್ಳಬಹುದು.

ಅಮೆರಿಕಾದ ಕಾಲ್ಡ್‌ವೆಲ್ ಕುಕ್ ತಮ್ಮ Play Way ಎಂಬ ಪುಸ್ತಕದಲ್ಲಿ ಕ್ರೀಡಾ ಪದ್ಧತಿಯ ಪ್ರಮುಖ ಅಂಶಗಳನ್ನು ವಿವರಿಸಿದ್ದಾರೆ. ನಂತರ ವಿಲಿಯಂ ಮ್ಯಾಗ್ಡುಗಲ್, ಫ್ರೋಬೆಲ್, ರೂಸೋ, ಪೆಸ್ಟಾಲಜಿ ಮೊದಲಾದವರು ಈ ಪದ್ಧತಿಯನ್ನು ಪ್ರಯೋಗಕ್ಕೆ ತಂದರು. ಕಾಲ್ಡ್‌ವೆಲ್ ಕುಕ್ ಅವರ ಪ್ರಕಾರ "ಕೇವಲ ಓದುವುದರಿಂದ, ಕೇಳುವುದರಿಂದ ಪರಿಣಿತಿ ಬರುವುದಿಲ್ಲ, ಕಲಿಕೆಯೂ ಪರಿಣಾಮಕಾರಿಯಾಗಿರುವುದಿಲ್ಲ. ಚಟುವಟಿಕೆಗಳಿಂದ ಕಲಿಕೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಆಟವು ಮಕ್ಕಳ ಸ್ವಾಭಾವಿಕ ಕ್ರಿಯೆ ಆಗಿದ್ದು ಅವರ ಕಲಿಕೆಗೆ ಇಲ್ಲಿ ಸಾಕಷ್ಟು ಅವಕಾಶಗಳು ದೊರೆಯುತ್ತದೆ. ಆಟದ ಮೂಲಕ ಸಾಗುವ ಕಲಿಕೆ ಚಟುವಟಿಕೆ ಪ್ರಧಾನವಾಗಿರುತ್ತದೆ. ಇದರಿಂದಾಗಿ ಮಕ್ಕಳ ಶಾರೀರಿಕ, ಮಾನಸಿಕ ವಿಕಾಸ ಸಾಧ್ಯ".

ಚಟುವಟಿಕೆ ಪ್ರಧಾನವಾದ ಕ್ರೀಡಾ ಪದ್ಧತಿಯು ಒಂದು ಮುಕ್ತವಾದ, ನಾವಿನ್ಯಯುತವಾದ ಪದ್ಧತಿಯಾಗಿದ್ದು ಭಾಷೆ, ಇತಿಹಾಸ, ಭೂಗೋಳಶಾಸ್ತ್ರ, ಗಣಿತ,

ವಿಜ್ಞಾನ, ಪರಿಸರ ಅಧ್ಯಯನ, ನೀತಿ ಶಿಕ್ಷಣ ವಿಷಯಗಳನ್ನು ಈ ಮೂಲಕ ಯಶಸ್ವಿಯಾಗಿ ಬೋಧಿಸಲು ಸಾಧ್ಯ. ಕಿಂಡರ್ ಗಾರ್ಟನ್, ಮಾಂಟೆಸ್ಸೋರಿ, ಉದ್ಯಮ ಪದ್ಧತಿ, ಡಾಲ್ಟನ್ ಯೋಜನೆ, ಸಂಶೋಧನಾ ಪದ್ಧತಿ, ಮೂಲ ಶಿಕ್ಷಣ ಪದ್ಧತಿಗಳೆಲ್ಲವೂ ಕ್ರೀಡಾ ಪದ್ಧತಿಯ ತತ್ತ್ವಗಳನ್ನಾಧರಿಸಿಯೇ ಅಭಿವೃದ್ಧಿಗೊಂಡಿವೆ. ಕ್ರೀಡಾ ಪದ್ಧತಿಯು ಮುಕ್ತ ಕಲಿಕೆಗೆ, ಸ್ವಯಂ ಕಲಿಕೆಗೆ, ಸಹಜ ಕಲಿಕೆಗೆ ಅವಕಾಶ ಕಲ್ಪಿಸುತ್ತದೆ. ಮಗುವಿನ ಮಾನಸಿಕ ಹಾಗೂ ದೈಹಿಕ ಅಭಿವೃದ್ಧಿ ಅಥವಾ ಸದೃಢತೆಗೆ ಸಹಾಯಕಾರಿಯಾಗುತ್ತದೆ.

3.3.8 ಕಿಂಡರ್ ಗಾರ್ಡನ್ ಶಿಕ್ಷಣ ಪದ್ಧತಿ

ಬಾಲೋದ್ಯಾನ ಎಂದು ಕರೆಯುವ ಈ ಪದ್ಧತಿಯ ಪಿತಾಮಹ ಫ್ರೆಡ್ರಿಕ್ ಫ್ರೊಬೆಲ್‌ನು 1782ರಲ್ಲಿ ಜರ್ಮನಿಯಲ್ಲಿ ಜನಿಸಿದನು. ಹುಟ್ಟಿದ ಒಂದೇ ವರ್ಷದಲ್ಲಿ ತನ್ನ ತಾಯಿಯನ್ನು ಕಳೆದುಕೊಂಡ ಈತನು ತಂದೆಯಿಂದ ಕಡೆಗಣಿಸಲ್ಪಟ್ಟು ಬೆಳೆದನು. ನಂತರ ತನ್ನ ಬಂಧುವರ್ಗದವರ ಸಹಾಯದಿಂದ ಶಿಕ್ಷಣ ಮುಗಿಸಿ ಪೆಸ್ಟಾಲಜಿಯ ಶಾಲೆಯಲ್ಲಿ ಶಿಕ್ಷಕನಾಗಿ ಕೆಲವು ವರ್ಷಗಳು ಕೆಲಸ ಮಾಡಿದನು. ತನ್ನ ವೃತ್ತಿಯ ಅನುಭವಗಳಿಂದ 1826ರಲ್ಲಿ "The Education of Man"ಎಂಬ ಪುಸ್ತಕವನ್ನು ಪ್ರಕಟಿಸಿದನು. ಈ ಪುಸ್ತಕದಲ್ಲಿ ಮಕ್ಕಳ ಶಿಕ್ಷಣದ ಬಗೆಗೆ ವಿವರಿಸುತ್ತಾ... ಮಕ್ಕಳನ್ನು ಜೀವಂತ ಸನ್ನಿವೇಶದಲ್ಲಿ ತೊಡಗಿಸಬೇಕು, ಮಗುವಿನ ಮನಸ್ಸು ಮತ್ತು ಶರೀರದ ಅಂಗಾಂಗಗಳು ಸಹಭಾಗಿಯಾಗಿ ಸಾಮರಸ್ಯದಿಂದ ಚಟುವಟಿಕೆಗಳಲ್ಲಿ ತೊಡಗುವಂತೆ ಬೋಧನಾ ಕ್ರಿಯೆಯನ್ನು ಸಜ್ಜುಗೊಳಿಸಬೇಕು ಎಂದು ಅಭಿಪ್ರಾಯ ಪಟ್ಟಿದ್ದಾನೆ. ನಂತರ ಫ್ರೊಬೆಲ್ಲನು 1827ರಲ್ಲಿ ತನ್ನ ಪ್ರಥಮ ಕಿಂಡರ್ ಗಾರ್ಟನ್ ಶಾಲೆಯನ್ನು "ಬ್ಲಾಕೆನ್‌ಬರ್ಗ್"ನಲ್ಲಿ ತೆರೆದನು. ಕ್ರಮೇಣ ಜರ್ಮನಿಯ ಇತರ ಕಡೆಗಳಲ್ಲೂ ತನ್ನ ಶಾಲೆಗಳನ್ನು ತೆರೆದನು. ಈತನ ಶಿಕ್ಷಣ ವಿಚಾರಗಳಿಗೆ ಪ್ರಾರಂಭದಲ್ಲಿ ಜರ್ಮನ್ ಸಮಾಜ ಹೆಚ್ಚಿನ ಪ್ರೋತ್ಸಾಹ ಕೊಡಲಿಲ್ಲ. ಅಮೆರಿಕಾದಲ್ಲಿ ಪುರಸ್ಕಾರ ದೊರೆಯಿತು.

ಫ್ರೊಬೆಲ್ಲನ ಪ್ರಕಾರ "ಮಾನವನ ಅಂತ:ಸತ್ವಗಳ ಸ್ವಾಭಾವಿಕ, ಸಾಮರಸ್ಯ ಮತ್ತು ಪ್ರಗತಿಪರ ಬೆಳವಣಿಗೆಯೇ ಶಿಕ್ಷಣ". ಮಗುವಿನ ಸರ್ವತೋಮುಖ ವಿಕಾಸ, ಸಮಗ್ರ ಬಳವಣಿಗೆ. ಶಿಕ್ಷಣದ ಅಂತಿಮ ಗುರಿ ಪರಿಪೂರ್ಣ ಪ್ರವೀಣತೆ ಗಳಿಸುವುದೇ ಆಗಿದೆ. ಬದುಕಿಗೆ ಅಗತ್ಯವಾದ ಸಾಮರ್ಥ್ಯಗಳನ್ನು ಬೆಳೆಸುವುದು, ಉತ್ತಮ ಜೀವನಕ್ಕೆ ತರಬೇತಿ ನೀಡುವುದು ಕಲಿಕೆಯಲ್ಲಿ ಪ್ರಧಾನವಾಗಿದೆ.

ಮಕ್ಕಳ ಶಿಕ್ಷಣದ ಬಗೆಗೆ ಫ್ರೊಬೆಲ್ಲನ ಅಭಿಪ್ರಾಯಗಳು

'ಮಕ್ಕಳು ದೇವರ ವರ' ಅವರಲ್ಲಿ ವಿಶೇಷ ರೀತಿಯ ಸಾಮರ್ಥ್ಯಗಳು ಸುಪ್ತವಾಗಿರುತ್ತವೆ. ಈ ಸಾಮರ್ಥ್ಯಗಳನ್ನು ಸಹಜ, ಸುಂದರ ವಾತವರಣದಲ್ಲಿ ಪ್ರಕೃತಿಯ ಮಡಿಲ್ಲಿ ಬೆಳೆಸಬೇಕು ಎಂಬುದು ಫ್ರೊಬೆಲ್‌ನ ಅನಿಸಿಕೆ. ಮಕ್ಕಳು ದೇವಲೋಕದ ತೋಟದ ಸುಂದರ ಪುಷ್ಪಗಳು, ಎಳೆಯ ಮಕ್ಕಳು ಚೈತನ್ಯಶೀಲರಾಗಿ ಸಸಿ, ಗಿಡ ಮರಗಳ ಮಧ್ಯೆ ಕುಣಿದುಕುಪ್ಪಳಿಸುತ್ತಾ ಕಲಿಯಬೇಕು. ಕಿಂಡರ್ ಗಾರ್ಟನ್ ಎಂದರೆ ಬಾಲೋದ್ಯಾನದ ರೀತಿ ಇರಬೇಕು. ಅಲ್ಲಿನ ಆಕರ್ಷಕ ಸಸಿಗಳೇ ಆ ಶಾಲೆಯ

ಮಕ್ಕಳು. ಈ ಸಸಿಗಳ ವಿಕಾಸಕ್ಕೆ ಸಹಜ, ಸುಂದರ ವಾತಾವರಣ ಸೃಷ್ಟಿಸಿರಬೇಕು ಎಂದು ಹೇಳಿರುವ ಪ್ರೊಬೆಲ್ ಪುಟ್ಟ ಬೀಜವೊಂದರಲ್ಲಿ ದೊಡ್ಡ ಮರದ ರೂಪ, ಗುಣಗಳು ಸುಪ್ತವಾಗಿರುವಂತೆ ಪ್ರತಿಯೊಂದು ಮಗುವಿನಲ್ಲಿಯು ವೈವಿಧ್ಯಮಯ ಸಾಮರ್ಥ್ಯಗಳು, ಕೌಶಲಗಳು ಸುಪ್ತವಾಗಿರುತ್ತವೆ. ಇವುಗಳ ವಿಕಾಸಕ್ಕೆ ಶಿಕ್ಷಣವು ಯೋಗ್ಯ ಮಾರ್ಗದರ್ಶನ ನೀಡಬೇಕು. ಒಂದು ಸಸಿಯನ್ನು ಹೇಗೆ ಸ್ವತಂತ್ರವಾಗಿ ಬೆಳೆಸುತ್ತೇವೆಯೋ ಹಾಗೆಯೇ ಯಾವುದೇ ರೀತಿಯ ನಿರ್ಬಂಧಗಳನ್ನು ಹೇರದೆ ಮುಕ್ತ ವಾತಾವರಣದಲ್ಲಿ ಸ್ವತಂತ್ರ ಚಟುವಟಿಕೆಗಳ ಮೂಲಕ, ಆಟಗಳ ಮೂಲಕ ಮಕ್ಕಳನ್ನು ಬೆಳೆಸಬೇಕು. ಮಗುವಿನ ಮನಸ್ಸು ಸ್ವಾಭಾವಿಕವಾಗಿ ಮತ್ತು ಕ್ರೀಯಾಶೀಲವಾಗಿ ಕಲಿಕೆಯಲ್ಲಿ ತೊಡಗಬೇಕು. ಇದಕ್ಕಾಗಿ ಶಾಲೆಯು ಉತ್ತಮ ಸನ್ನಿವೇಶದಲ್ಲಿದ್ದು ಮಕ್ಕಳು ಮನೆಯಲ್ಲಿ ಬೆಳೆಯುವಂತೆಯೇ ಶಾಲೆಯಲ್ಲಿಯು ಸ್ವಾಭಾವಿಕವಾಗಿ ಬೆಳೆಯುವ ಅವಕಾಶಗಳಿರಬೇಕು.

ಪ್ರೊಬೆಲ್ಲನು ಒಂದು ಸಸಿ ಮತ್ತು ಮಗುವಿನ ಬೆಳವಣಿಗೆಯ ಹಂತಗಳಲ್ಲಿ ನಿಕಟ ಸಾಮ್ಯತೆಯನ್ನು ಗುರ್ತಿಸಿದ್ದು ಒಂದು ಸಸಿಯನ್ನು ಹೇಗೆ ಹೆಮ್ಮರವಾಗಿ ಬೆಳೆಸಬಹುದೋ ಅದೇ ರೀತಿ ಮಗುವನ್ನು ಬೆಳೆಸಬೇಕು. ಬೀಜಕ್ಕೆ ಸರಿಯಾದ ಮಣ್ಣು, ನೀರು ಹಾಕಿ ಬೆಳೆಸುವಂತೆ ಮಗುವನ್ನು ಬೆಳೆಸಿದರೆ ಸಸಿಯಂತೆಯೇ ಸಹಜವಾಗಿ ಪರಿಪೂರ್ಣ ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತದೆ. ಒಂದು ಉದ್ಯಾನವನದಲ್ಲಿ, ತಿದ್ದಿ ತೀಡಿ ಆರೈಕೆ ಮಾಡಿ ತೋಟಗಾರನಂತೆ ಶಿಕ್ಷಕರು ಮಗುವಿನ ವಿವಿಧ ಹಂತಗಳ, ವಿವಿಧ ಮುಖಗಳ ಬೆಳವಣಿಗೆಯನ್ನು ಸಹಜವಾಗಿ ನಿಯೋಜಿಸಬೇಕು. ಮಗುವನ್ನು ಮುಕ್ತ ವಾತಾವರಣದಲ್ಲಿ ಚಟುವಟಿಕೆಗಳು ಮತ್ತು ಕ್ರೀಡೆಗಳಲ್ಲಿ ತೊಡಗಿಸಿದಾಗ ಅದರಲ್ಲಿರುವ ವಿಶೇಷ ಸಾಮರ್ಥ್ಯಗಳು ಕುಡಿಯೊಡೆಯುತ್ತವೆ. ಇದರಿಂದಾಗಿ ಮಕ್ಕಳ ಸೃಜನಶೀಲ ಗುಣಗಳು ವಿಕಾಸವಾಗುತ್ತದೆ.

3.3.9 ಪಾತ್ರ ನಿರ್ವಹಣಾ/ ರೂಪಕ(Role playing)ಪದ್ಧತಿ :

ಪಠ್ಯ ವಿಷಯಗಳನ್ನು ಒಂದು ಸಂದರ್ಭ/ಸನ್ನಿವೇಶದ ರೀತಿಯಲ್ಲಿ ಸಂಘಟಿಸಿ ಈ ಪಠ್ಯಕ್ಕೆ ಹೊಂದಿಕೆ ಆಗುವಂತೆ ಪಾತ್ರಗಳನ್ನು ಸೃಷ್ಟಿಸಿ ಸೂಕ್ತ ಸಂಭಾಷಣೆಗಳ ಮೂಲಕ ಅಭಿನಯದೊಂದಿಗೆ ಭಾಷಾ ಕೌಶಲಗಳು, ವಿಷಯ ಮತ್ತು ಮೌಲ್ಯಗಳನ್ನು ಕಲಿಯುವುದು/ ಗ್ರಹಿಸುವ ವಿಧಾನವೇ ಪಾತ್ರ ನಿರ್ವಹಣೆ. ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳು ಸ್ವಯಂ ಪಾಲ್ಗೊಂಡು ಅಥವಾ ಜೀವಂತ ಸನ್ನಿವೇಶಗಳನ್ನು ನೋಡುತ್ತಾ ಮಾತುಗಳನ್ನು ಕೇಳುತ್ತಾ ಕಲಿಯುವುದರಿಂದ ಕಲಿಕೆ ಅರ್ಥಪೂರ್ಣವಾಗುತ್ತದೆ. ಇಲ್ಲಿ ಗುಂಪಿನಲ್ಲಿ ಪಾಲ್ಗೊಂಡು ಕಲಿಯುತ್ತಾರೆ. ಸಾಂದರ್ಭಿಕವಾಗಿ ಭಾಷೆಯ ಪ್ರಯೋಗ ನಡೆಯುತ್ತದೆ. ಭಾವನಾತ್ಮಕ, ಮನೋಭಾವ ಮತ್ತು ಮೌಲ್ಯಗಳ ಮಟ್ಟದ ಕಲಿಕೆ ಸಾಧ್ಯವಾಗುತ್ತದೆ.

3.3.10 ಸ್ವಯಂ ಬೋಧಿನಿ ಅಥವಾ ಕಲಿಕಾ ಸಾಮಾಗ್ರಿಗಳ ವಿಧಾನ

ಒಂದು ನಿರ್ದಿಷ್ಟ ಪಠ್ಯಾಂಶ, ಭಾಷಾಂಶಗಳಿಗೆ ಸಂಬಂಧಿಸಿದಂತೆ ಕಲಿಕಾರ್ಥಿಗಳು ಸ್ವಯಂ ತಾವೇ ಕಲಿಯಲು ಸಾಧ್ಯವಾಗುವಂತೆ ನಿರ್ದೇಶನ, ಸೂಚನೆಗಳನ್ನೊಳಗೊಂಡ

ಕಲಿಕಾಸಾಹಿತ್ಯ ಸಾಮಗ್ರಿಗಳನ್ನು ವ್ಯವಸ್ಥೆಗೊಳಿಸಿರುವ, ಕಲಿಕಾ ಸಾಮಾಗ್ರಿಗಳ ಮೂಲಕ ಸ್ವಯಂ ಕಲಿಕೆಯನ್ನು ಚಾಲನಗೊಳಿಸುವುದೇ ಸ್ವಯಂ ಬೋಧಿನಿ ವಿಧಾನ. ಇಲ್ಲಿ ನಿರ್ದಿಷ್ಟ ಉದ್ದೇಶಗಳಿಗೆ ಅನುಗುಣವಾಗಿ ಸಿದ್ಧಪಡಿಸಿರುವ ಸ್ವಯಂ ಕಲಿಕಾ ಸಾಹಿತ್ಯ ಸಲಕರಣೆಗಳನ್ನು ಕಲಿಕಾರ್ಥಿಗಳಿಗೆ ಸೂಕ್ತ ನಿರ್ದೇಶನ ಮತ್ತು ಸಲಹೆಗಳೊಂದಿಗೆ ಒದಗಿಸಲಾಗುತ್ತದೆ. ಕಲಿಕಾರ್ಥಿ ಸೂಚನೆ, ನಿರ್ದೇಶನಗಳನ್ನು ಪಾಲಿಸುತ್ತಾ ಕಾರ್ಯಕಾರಣ ಸಂಬಂಧಗಳನ್ನು ತಿಳಿಯುತ್ತಾ, ತಮ್ಮ ಕಲಿಕೆಯನ್ನು ಅಭ್ಯಾಸಗಳ ಮೂಲಕ ಬಲಪಡಿಸಿಕೊಳ್ಳುತ್ತಾ, ಮೌಲ್ಯಮಾಪನ ಮಾಡುತ್ತಾ, ಕಲಿಕೆಯನ್ನು ತಾಳೆ ನೋಡುತ್ತಾ ಕಲಿಯುತ್ತಾನೆ. ಓದು, ಬರಹ, ವ್ಯಾಕರಣ ಅಂಶಗಳ ಲೇಖನ ಚಿಹ್ನೆಗಳು, ವಾಕ್ಯ ರಚನೆ, ವಾಕ್ಯವೃಂದ ರಚನೆ, ಕೋಷ್ಟಕಗಳ ರಚನೆ ಇತ್ಯಾದಿ ಅಂಶಗಳ ಬಗ್ಗೆ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ತಯಾರಿಸಿ ಕಲಿಕಾರ್ಥಿಳಿಗೆ ಕಲಿಯಲು ಅವಕಾಶ ಕಲ್ಪಿಸಬಹುದು.

3.3.11. ದೃಕ್– ಶ್ರವಣೋಪಕರಣಗಳ ಮೂಲಕ ಬೋಧನ :

ಬೋಧನೋಪಕರಣಗಳೇ ಸ್ವತಂತ್ರವಾಗಿ ಒಂದು ವಿಧಾನ ಎನಿಸುವುದಿಲ್ಲವಾದರೂ ಬೋಧನಾ ಕ್ರಿಯೆಯಲ್ಲಿ ಪ್ರಧಾನ ಪಾತ್ರ ವಹಿಸುವ ಸಲಕರಣೆಗಳನ್ನು ಆಧರಿಸಿ ಇದನ್ನು ಒಂದು ಬೋಧನಾ ವಿಧಾನ ಎಂದು ಪರಿಗಣಿಸಲಾಗಿದೆ. ಬೋಧನೆ ಮತ್ತು ಕಲಿಕೆಯನ್ನು ಪರಿಣಾಮಕಾರಿಗೊಳಿಸಲು ಮತ್ತು ಅರ್ಥಪೂರ್ಣ ಕಲಿಕೆಯನ್ನು ಮೂಡಿಸಲು ಬೋಧನಾ/ ಕಲಿಕಾ ಉಪಕರಣಗಳು ಅವಶ್ಯಕ. ಬಾಯಿ ಮಾತಿನ ಯಾಂತ್ರಿಕ ಬೋಧನೆಯು ಕೇವಲ ವಿಷಯ ರವಾನಿಸುವ ಕ್ರಿಯೆಯಾಗಿರುತ್ತದೆ. ಆದುದರಿಂದ ವಿಷಯಕ್ಕೆ ಸೂಕ್ತ ಸಲಕರಣೆಗಳನ್ನು ಉಪಯೋಗಿಸಿಕೊಂಡು ಬೋಧಿಸಬೇಕು. ಬಾಯಿ ಮಾತಿಗೆ ನಿಲುಕದ ಕಲ್ಪನಾತ್ಮಕ ವಿಷಯಗಳನ್ನು ತರಗತಿಯೊಳಗಡೆ ತರಲು ಬೋಧನೋಪಕರಣಗಳು ಸಹಾಯಕ. ದೃಕ್–ಶ್ರವಣೋಪಕರಣಗಳು ಬೋಧನೆ ಮತ್ತು ಕಲಿಕೆಯ ನಡುವೆ ನೇರ ಸಂಬಂಧವನ್ನುಂಟು ಮಾಡಿ ಬೋಧನೆಗೆ ಜೀವ ತುಂಬುತ್ತವೆ. ಪರಿಣಾಮಕಾರಿ ಕಲಿಕೆಗೆ ಹಲವು ಜ್ಞಾನೇಂದ್ರಿಯಗಳು ಸಹಭಾಗಿಯಾಗಿ ಕೆಲಸ ಮಾಡುತ್ತವೆ. ಕಲಿಕೆಯ ಕ್ರಿಯೆಯಲ್ಲಿ ಹೆಚ್ಚು ಜ್ಞಾನೆಂದ್ರಿಯಗಳು ಸಹ ಭಾಗಿಯಾಗಲು ಬೋಧನೋಪಕರಣಗಳು ಸಹಾಯಕವಾಗುತ್ತವೆ.

3.3.12. ಮಾಂಟೆಸೋರಿ ಪದ್ಧತಿ

ಇಟಲಿ ಅಂಕೋನಾ ಪ್ರಾಂತ್ಯದ ಜಯರಾವೆಲ್ ಎಂಬಲ್ಲಿ ಮಾಂಟೆಸೋರಿ ಆಗಸ್ಟ್ 31, 1870ರಲ್ಲಿ ಜನಿಸಿದರು. ಮಾಂಟೆಸೋರಿಯು ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕ ಪದವಿ ಪಡೆದರೂ ತಮ್ಮ ಸೇವೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಸಿದರು. ರೋಮ್ ವಿಶ್ವವಿದ್ಯಾಲಯದಲ್ಲಿ ಮಾನಸಿಕ ದೌರ್ಬಲ್ಯಗಳಿಗೆ ಹಾಗೂ ಜಡತ್ವಕ್ಕೆ ಕಾರಣಗಳನ್ನು ಕಂಡುಕೊಂಡರು. ಮಾನಸಿಕ ಹಾಗೂ ಶಾರೀರಿಕ ದೌರ್ಬಲ್ಯಕ್ಕೆ ಜ್ಞಾನೇಂದ್ರಿಯಗಳ ನಿಶ್ಚೇತನ ಅಥವಾ ಜಡತ್ವವೇ ಮುಖ್ಯ ಕಾರಣ ಎಂದು ಅರ್ಥಮಾಡಿಕೊಂಡ ಇವರು ಮಾನಸಿಕ ದೌರ್ಬಲ್ಯದ ಮಕ್ಕಳಿಗೆ ಚಟುವಟಿಕೆಯ

ಮೂಲಕ ಜ್ಞಾನೇಂದ್ರಿಯಗಳ ಶಿಕ್ಷಣ ನೀಡಿದರು. ತಮ್ಮ ಈ ಪ್ರಯೋಗದಲ್ಲಿ ಫಲ ಪಡೆದರು. 'ಜ್ಞಾನೇಂದ್ರಿಯಗಳ ದುರ್ಬಲತೆ ಹಾಗೂ ಜಡತ್ವದಿಂದಲೇ ಮಕ್ಕಳು ಮಾನಸಿಕ ಹಾಗೂ ಶಾರೀರಿಕ ದುರ್ಬಲತೆಗೆ ಈಡಾಗುತ್ತಾರೆ' ಎಂಬ ಸತ್ಯವನ್ನು ಅರಿತು ಮಕ್ಕಳ ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಜ್ಞಾನೇಂದ್ರಿಯಗಳ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದರು.

ಮಾಂಟೆಸೋರಿಯವರ ಪ್ರಕಾರ ಪ್ರತಿಯೊಂದು ಮಗುವಿನಲ್ಲಿಯು ಜ್ಞಾನ, ಕೌಶಲ ಮತ್ತು ಸಾಮರ್ಥ್ಯಗಳು ಸುಪ್ತವಾಗಿರುತ್ತವೆ. ಈ ಸುಪ್ತ ಪ್ರತಿಭೆಗಳಿಗೆ ಸಹಜ, ಸ್ವಾಭಾವಿಕ ಉತ್ತೇಜನ ನೀಡುಲು ಕ್ರೀಯಾಶೀಲತೆ ಸಹಾಯಕ, ಉತ್ತೇಜನವೇ ಶಿಕ್ಷಣ. ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರತಂದು ವಿಕಾಸಗೊಳಿಸುವ ಕ್ರಿಯೆಯಲ್ಲಿ, ಜ್ಞಾನೇಂದ್ರಿಯಗಳ ಪಾತ್ರ ಮಹತ್ವವಾಗಿರುವುದರಿಂದ ಪ್ರಾಥಮಿಕ ಹಂತದಲ್ಲಿ ಜ್ಞಾನೇಂದ್ರಿಯಗಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ.

ಮಕ್ಕಳ ಶಿಕ್ಷಣದಲ್ಲಿ ಹೊಸ ಆಲೋಚನೆ ಮತ್ತು ಚಟುವಟಿಕೆಗಳನ್ನು ಕಂಡುಕೊಂಡ ಇವರು ತಮ್ಮ ಆಲೋಚನೆಗಳನ್ನು ಪ್ರಯೋಗಮಾಡಿ ನೋಡಲು 1907ರಲ್ಲಿ ಇಟಲಿಯಲ್ಲಿ 3ರಿಂದ7 ವರ್ಷಗಳ ಬುದ್ಧಿಮಾಂಧ್ಯ ಮಕ್ಕಳಿಗಾಗಿ, "ಮಕ್ಕಳ ಮನ" (Children House) ಎಂಬ ವಿಶೇಷ ಶಾಲೆ ತೆರೆದರು. ತನ್ನ ಎಲ್ಲ ಶೈಕ್ಷಣಿಕ ವಿಚಾರಗಳು ಮತ್ತು ಚಟುವಟಿಕೆಗಳನ್ನು ಪ್ರಾಯೋಗಿಕವಾಗಿ ಬಳಕೆಗೆ ತಂದ ಮಾಂಟೆಸೋರಿಯವರು ಚಿಕ್ಕ ಮಕ್ಕಳ ಶಿಕ್ಷಣಕ್ಕೆ ಉತ್ತಮ ಬುನಾದಿ ಹಾಕಿಕೊಟ್ಟಿದ್ದಾರೆ. ಬೆಳೆಯುವ ಮಗುವಿನಲ್ಲಿ ಸುಪ್ತವಾಗಿರುವ ವೈವಿಧ್ಯ ರೀತಿಯ ಪ್ರತಿಭೆಯನ್ನು ಸಹಜವಾಗಿ ಅರಳಿಸಲು ಶಿಕ್ಷಣ ಸಹಾಯಕವಾಗಬೇಕು. ಮಕ್ಕಳು ಸ್ವತಂತ್ರವಾದ ಸನ್ನಿವೇಶದಲ್ಲಿ ವಿಭಿನ್ನ ರೀತಿಯ ಚಟುವಟಿಕೆಗಳ ಮೂಲಕ ಬೆಳೆದು ವಿಕಾಸವಾಗಬೇಕು ಎಂಬುದೇ ಇವರ ಧ್ಯೇಯ. ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆ ಸ್ವಾಭಾವಿಕವಾಗಿ ಮೂಡಿ ಬರಲು ಸೂಕ್ತವಾದ ಸನ್ನಿವೇಶ ಹಾಗೂ ಚಟುವಟಿಕೆಗಳನ್ನು ಶಾಲೆ ಒದಗಿಸಿಕೊಡಬೇಕು ಎಂಬುದು ಇವರ ಅಭಿಪ್ರಾಯ. ಮಕ್ಕಳ ಕಲಿಕೆಯಲ್ಲಿ ಶಿಕ್ಷಕನು ಅನವಶ್ಯಕವಾಗಿ ತಲೆಹಾಕದೆ ಮಕ್ಕಳಿಗೆ ಅವಶ್ಯಕ, ಸೂಕ್ತ ಮಾರ್ಗದರ್ಶನ ನೀಡಬೇಕು. ಅವರ ಕಲಿಕೆಯಲ್ಲಿ ಸಹಾಯಕನಾಗಿರಬೇಕು. ಶ್ರೇಷ್ಠ ಶಿಕ್ಷಣತಜ್ಞರಾದ ರುಸೋ, ಪಸ್ತಾಲಜಿ ಮತ್ತು ಫ್ರೊಬೆಲ್ಲರು ಪ್ರತಿಪಾದಿಸಿದ ಚಟುವಟಿಕೆ ಪ್ರಧಾನವಾದ, ಶಿಶು ಕೇಂದ್ರಿತ, ಸ್ವಯಂ ಕಲಿಕೆಯ ತತ್ತ್ವವನ್ನೇ ಮಾಂಟೆಸೋರಿಯವರು ಪ್ರತಿಪಾದಿಸಿ ತಮ್ಮ "ಮಕ್ಕಳ ಮನೆ" ಯಲ್ಲಿ ಪ್ರಯೋಗಕ್ಕೆ ತಂದರು.

3.3.13. ರಚನಾ ಸಿದ್ಧಾಂತ (ರಾಷ್ಟ್ರೀಯ ಪಠ್ಯಕ್ರಮ ನೀತಿ 2005)

ರಾಷ್ಟ್ರೀಯ ಪಠ್ಯಕ್ರಮ ನೀತಿಯನ್ನು 2005ರಲ್ಲಿ ಪ್ರೊ.ಯಶ್‌ಪಾಲ್ ನೇತೃತ್ವದ ಸಮಿತಿಯಿಂದ ಪಡೆದುಕೊಳ್ಳಲಾಯಿತು. ಈ ನೀತಿಯು ರಚನಾ ಸಿದ್ಧಾಂತಕ್ಕೆ ಹೆಚ್ಚು ಮಹತ್ವ ನೀಡಿದ್ದಲ್ಲದೇ ಭಾರತೀಯ ಶಿಕ್ಷಣದಲ್ಲಿ ಅಳವಡಿಸಬೇಕಾದ ಬದಲಾವಣಾ ಕ್ರಮಗಳನ್ನು ಪ್ರಕಟಿಸಲಾಯಿತು. ಈ ವರದಿ ನೀಡಿದ ಮುಖ್ಯಾಂಶಗಳು ಈ ರೀತಿ ಇದೆ.

1. ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸಬೇಕು.
2. ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸಬೇಕು
3. ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸಬೇಕು.
4. ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸಿಕೊಳ್ಳಬೇಕು.
5. ಮಕ್ಕಳ ಅವಶ್ಯಕತೆಗಳಿಗೆ ಅನುಗುಣವಾಗಿ ಸ್ಪಂದಿಸಬೇಕು.
6. ಶಿಕ್ಷಣ ಇಂದಿನ ಮತ್ತು ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡಬೇಕು.
7. ವಿಷಯಗಳ ಮೇರೆಯನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸಬೇಕು.
8. ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜನ ಮಾಡಬೇಕು.
9. ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸಬೇಕು.

ಈ ರೀತಿಯಾಗಿ ಮಗುವಿನ ಕಲಿಕೆಯನ್ನು ರೂಪಿಸಲು ಪಠ್ಯಪುಸ್ತಕದಲ್ಲಿ ಅಂತರ್ಗತ ವಿಧಾನ, ರಚನಾತ್ಮಕ ವಿಧಾನ ಹಾಗೂ ಸುರುಳಿಯಾಕಾರದ ವಿಧಾನವನ್ನು ಅಳವಡಿಸಲು ಸೂಚಿಸುತ್ತದೆ. ವಿಷಯ ಹಾಗೂ ಅಭ್ಯಾಸಗಳಲ್ಲಿ ಕಲಿಕಾರ್ಥಿ ಯೋಚನೆ ಮಾಡುವಂತೆ ಮಾಡಿ,ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡಬೇಕು. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳು ಅಂತರ್ಗತವಾಗಿ ಬಳಸಬೇಕು. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಕಲಿಕೆ ನಡೆಯಬೇಕು. ಹೀಗೆ ಎನ್.ಸಿ.ಎಫ್ ತಿಳಿಸುತ್ತದೆ.[*4]

ಈ ಮೇಲಿನ ವಿವರಣೆಗಳು ಸಹಜ ಕಲಿಕೆಯನ್ನು ಬೆಂಬಲಿಸುವ ಹಿನ್ನೆಲೆಯಿಂದ ಅನುಮೋದಿಸಲ್ಪಟ್ಟ ಸೂಚನೆಗಳಾಗಿವೆ. ಇದಕ್ಕೆ ಪೂರಕವಾಗಿಯೇ ಜನಪದ ಶಿಕ್ಷಣ ಇರುವುದನ್ನು ಒಪ್ಪಿಕೊಳ್ಳಬೇಕು. ಎನ್.ಸಿ.ಎಫ್[*5] ಜನಪದ ಶಿಕ್ಷಣದ ಆಲಿಸುವ ಮತ್ತು ಮಾತನಾಡುವ ಕೌಶಲಗಳನ್ನು ಬಳಸಿಕೊಂಡಿರುವುದನ್ನು ಇಲ್ಲಿ ಗುರುತಿಸಬಹುದು.

3.4. ಔಪಚಾರಿಕ ಶಿಕ್ಷಣ ಪದ್ಧತಿಗಳು ಮತ್ತು ಜನಪದ ಸಾಹಿತ್ಯ ಶಿಕ್ಷಣ

ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಲ್ಪಟ್ಟ ಈ ಮೇಲಿನ ಬೇರೆ ಬೇರೆ ಪದ್ಧತಿಗಳಿಗೆ ಜಾಗತಿಕ ನೆಲೆಗಳಿವೆ. ಜಗತ್ತಿನ ಯಾವುದೋ ಮೂಲೆಯಲ್ಲಿ ಪ್ರಾಯೋಗಿಕವಾಗಿ ಹುಟ್ಟಿಕೊಂಡ ಈ ಪದ್ಧತಿಗಳು ಕ್ರಮೇಣ ಇತರ ಮೂಲೆಗಳಿಗೂ ಪಸರಿಸಿದವು. ಆದರೆ ಈ ಪದ್ಧತಿಗಳ ಹಿಂದೆ ಜನಪದ ಮೂಲವಿದೆ ಎನ್ನುವುದು ಗಮನಾರ್ಹ. ಇಲ್ಲಿ ಹೇಳಿರುವ ಬಹುತೇಕ ಎಲ್ಲಾ ಪದ್ಧತಿಗಳನ್ನು ಯಾವುದೇ ಅಧಿಕೃತ ಸಿದ್ಧಾಂತದ ಹಿನ್ನೆಲೆ ಇಲ್ಲದೇ ಜನಪದ ಸಾಹಿತ್ಯದ ಕಲಿಕಾರ್ಥಿ ಬಳಸಿಕೊಳ್ಳುತ್ತಿದ್ದ ಎನ್ನುವುದು ಈ ಅಧ್ಯಾಯದಲ್ಲಿ ಬಂದಿರುವ ಶೈಕ್ಷಣಿಕ ಪದ್ಧತಿಗಳನ್ನು ತುಲನೆ ಮಾಡಿದಾಗ ಅರಿವಿಗೆ ಬರುತ್ತದೆ. ಈ ಹಿಂದಿನ ಅಧ್ಯಾಯದಲ್ಲಿ ತಿಳಿಸಿರುವ ಜನಪದ ಸಾಹಿತ್ಯದ ಕಲಿಕೆಯಲ್ಲೂ ಇದೇ ಪದ್ಧತಿಗಳು ಅಳವಡಿಸಿಕೊಂಡಿರುವುದನ್ನು ಗಮನಿಸಬಹುದಾಗಿದೆ.

ಇಲ್ಲಿ ವಿವರಿಸಿರುವ ಕಥಾನಕ ಪದ್ಧತಿ ಜನಪದರಲ್ಲಿ ಹೆಚ್ಚು ಪ್ರಚಲಿತವಿದ್ದ ಪದ್ಧತಿಯಾಗಿದೆ. ಬಹುತೇಕ ಎಲ್ಲಾ ಜನಪದ ಸಾಹಿತ್ಯಗಳಲ್ಲೂ ಈ ಪದ್ಧತಿಯ ಬಳಕೆ ಇದೆ. ಭೂತಾರಾಧನೆಯ ಸಂದರ್ಭದ ನುಡಿಕಟ್ಟುಗಳಲ್ಲಿ ಉಪನ್ಯಾಸ ಪದ್ಧತಿಯ ಬಳಕೆಯನ್ನು ಕಾಣಬಹುದಾಗಿದೆ. ನೇಜಿಗದ್ದೆ, ಭೂತಾರಾಧನೆಯ ಸಂದರ್ಭದಲ್ಲಿ ಮುಖ್ಯವಾಗಿ ಕಂಡುಬರುವುದೇ ಅಭಿನಯ ಪದ್ಧತಿ. ಒಗಟು ಪ್ರಶ್ನೋತ್ತರ ಮಾದರಿ ಒಳ್ಳೆಯ ಉದಾಹರಣೆಯಾಗಿದೆ. ಅನುಗಮನ ಪದ್ಧತಿಯು ಜನಪದ ಸಾಹಿತ್ಯಗಳ ನಿರೂಪಣೆಯ ಸಂದರ್ಭದಲ್ಲಿ ಬಳಕೆಯಾಗುವ ಪ್ರಮುಖ ಪದ್ಧತಿಯಾಗಿದೆ. ಪಾಡ್ದನ ಹಾಡುವುದಕ್ಕೆ ತನ್ನದೇ ಆದ ಕೆಲವು ನಿಯಮಗಳಿವೆ ಈ ನಿಯಮಕ್ಕಾಗಿ ನಿಗಮನ ಪದ್ಧತಿಯ ಬಳಕೆ ಜನಪದ ಸಾಹಿತ್ಯ ಶಿಕ್ಷಣದಲ್ಲಿ ಬಳಕೆಯಾಗುತ್ತಿತ್ತು. ಕ್ರೀಡಾ ಮತ್ತು ರೂಪಕ ಪದ್ಧತಿಗಳಿಗೆ ಉತ್ತಮ ಉದಾಹರಣೆ 'ಈಜೋ ಮಂಜೊಟಿಗೋಣ' ಪಾಡ್ದನ ಮತ್ತು ಭೂತಾರಾಧನೆಯ ಸಂದರ್ಭ. ಕಿಂಡರ್ ಗಾರ್ಟನ್ ಮತ್ತು ಮಾಂಟೆಸರಿಯ ಕಲಿಯುವ ಮಕ್ಕಳ ಮನೆಯಂತೆ ಜನಪದರು ಸಾಹಿತ್ಯಗಳನ್ನು ಮನೆಯ ಜಗಲಿಯಲ್ಲಿ ರಾತ್ರಿ ಹೊತ್ತು ತಮ್ಮ ಮಕ್ಕಳಿಗೆ ಸಂತಸದಾಯಕವಾಗಿ ಹೇಳಿಕೊಡುವ ಕ್ರಮವೊಂದಿತ್ತು.

ಆಧುನಿಕ ಶಿಕ್ಷಣದಲ್ಲಿ ಕಂಡುಬರುವ ಪ್ರಮುಖ ಶಿಕ್ಷಣ ಪದ್ಧತಿಗಳ ಹಿಂದೆ ಜನಪದರ ಕಲಿಕಾ ವಿಧಾನ ಇದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಅಲ್ಲದೇ ಪ್ರಕೃತಿಯಲ್ಲಿ ಅಂತರ್ಗತವಾಗಿರುವ ವಿಚಾರಗಳೇ ಸೈದ್ಧಾಂತಿಕ ಸ್ವರೂಪವನ್ನು ಪಡೆಯುತ್ತವೆ ಎನ್ನುವುದೂ ಇದರಿಂದ ತಿಳಿಯುತ್ತದೆ. ಇದು ದೇಶ ಭಾಷೆ ಮತ್ತು ವ್ಯಕ್ತಿಗಳನ್ನು ಮೀರಿದ ರಚನೆಯಾಗಿರುತ್ತದೆ. ಹಾಗೆಂದು ತುಳು ಜನಪದ ಸಾಹಿತ್ಯವನ್ನು ನೋಡಿ ಔಪಚಾರಿಕ ಶಿಕ್ಷಣ ಪದ್ಧತಿಯನ್ನು ರೂಪಿಸಲಾಗಿದೆ ಎಂದರ್ಥವಲ್ಲ. ಜಾಗತಿಕ ಜಾನಪದದಲ್ಲಿ ಈ ಅಂಶಗಳು ಇವೆ ಎನ್ನುವುದು ಒಪ್ಪಿತವಾದ ವಿಷಯವಾಗಿದೆ. ಆದ್ದರಿಂದ ಜಾಗತಿಕ ಜನಪದ ಸಾಹಿತ್ಯವನ್ನು ಕಲೆಹಾಕಿ ಅದರಲ್ಲಿರುವ ಕಲಿಕಾ ವಿಧಾನವನ್ನು ಗುರುತಿಸಿದ್ದೇ ಆದರೆ ಕಲಿಕಾ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಹಜ ವಿಧಾನವನ್ನು ಕಂಡುಕೊಳ್ಳಲು ಸಾಧ್ಯವಿದೆ. ಆದರೆ ಈ ಪದ್ಧತಿಗಿಂತ ಭಿನ್ನವಾದ ವ್ಯವಸ್ಥೆಯೊಂದು ಶಿಕ್ಷಣ ಕ್ಷೇತ್ರದಲ್ಲಿ ಪ್ರಚಲಿತವಾಗಿತ್ತು ಮತ್ತು ಕೆಲವು ಈಗಲೂ ಇದೆ. ಅದನ್ನು ಈ ಕೆಳಗೆ ನೀಡಲಾಗಿದೆ.

3.5. ಗುರುಕುಲ ಅಥವಾ ವೇದ ಕಾಲದ ಶಿಕ್ಷಣ

ಭಾರತದ ಇತಿಹಾಸದಲ್ಲಿ ಅತೀ ಪುರಾತನವೆನಿಸಿದ ನಾಲ್ಕು ವೇದಗಳು ರಚನೆಗೊಂಡ ಕಾಲದವೆಂದು(ಕ್ರಿ.ಪೂ.ಸುಮಾರು 3000ದಿಂದ ಕ್ರಿ.ಪೂ.ಸುಮಾರು 500ರವರೆಗೆ) ಪರಿಗಣಿಸಲಾದ ಶಿಕ್ಷಣ ವ್ಯವಸ್ಥೆಯನ್ನು ವೇದ ಕಾಲದ ಶಿಕ್ಷಣ ಅಥವಾ ಗುರುಕುಲ ಪದ್ಧತಿ ಆರಂಭವಾದ ಕಾಲವೆಂದು ಕರೆಯುತ್ತೇವೆ. ಇದು ಭಾರತೀಯ ಚರಿತ್ರೆಯಲ್ಲಿ ಔಪಚಾರಿಕ ಶಿಕ್ಷಣ ಆರಂಭವಾದ ಕಾಲವೂ ಹೌದು. ಭಾರತೀಯ ನಾಗರಿಕತೆ ಹಾಗು ಜೀವನ ವಿಧಾನ ಬೆಳೆದು ಬಂದ ಹಾಗೇ ಶಿಕ್ಷಣ ವ್ಯವಸ್ಥೆಯೂ ಈ ಕಾಲದಿಂದಲೇ ಬೆಳೆದು ಬಂದಿತು. ಆದರೆ ಪಠ್ಯವಸ್ತು ಮತ್ತು ಬೋಧನಾ ವಿಧಾನ ಮಾತ್ರ ಭಿನ್ನವಾಗಿತ್ತು. ಧಾರ್ಮಿಕ ಮತ್ತು ವೃತ್ತಿಗೆ ಸಂಬಂಧಿಸಿದ ಅಂಶಗಳೇ ಇಲ್ಲಿಯ ಪಠ್ಯಗಳಾದರೆ, ಗುರು

ಇಲ್ಲಿ ಕೇಂದ್ರ ವ್ಯಕ್ತಿ. ಪ್ರಾಚೀನ ಭಾರತೀಯ ಸಂಸ್ಕೃತಿ, ಸಂಪ್ರದಾಯ ಮತ್ತು ಜೀವನ ದೃಷ್ಟಿ ಅದರಲ್ಲೂ ಇಹಕ್ಕಿಂತಲೂ ಪರದ ಕಲ್ಪನೆ ಬೋಧನೆಯ ಪ್ರಧಾನ ವಸ್ತು. ಇವುಗಳಿಗೆಲ್ಲ ದಾರಿ ತೋರುವವನೇ ಗುರು. ಆದ್ದರಿಂದಲೇ ಗುರುವಿಗೆ ದೇವರ ಸ್ಥಾನಮಾನ ನೀಡಲಾಗಿತ್ತು. ಹಾಗಾಗಿ ಒಬ್ಬ ಕಲಿಕಾರ್ಥಿ ಗುರುವನ್ನು ಪಡೆಯುವುದು ಶಿಕ್ಷಣ ಪಡೆಯುವುದಕ್ಕಿಂತಲೂ ಕಷ್ಟದ ವಿಚಾರವಾಗಿತ್ತು.

ಬೋಧನಾ ವಿಧಾನ : ಪ್ರಾಚೀನ ಕಾಲದ ಶಿಕ್ಷಣವು ಕೇವಲ ಮೌಖಿಕ ಪದ್ಧತಿಗೆ ಮಾತ್ರ ಸೀಮಿತವಾದುದು. ಶಿಕ್ಷಕರು ವೇದಗಳ ಜ್ಞಾನವನ್ನು ನೆನಪಿನಲ್ಲಿಟ್ಟುಕೊಂಡು ಕಲಿಕಾರ್ಥಿಗೆ ಬೋಧಿಸುತ್ತಿದ್ದರು. ಶಿಕ್ಷಕನೇ ಶಿಕ್ಷಣದ ಜ್ಞಾನ ಭಂಡಾರ. ಬರವಣಿಗೆಯ ವ್ಯವಸ್ಥೆ ಜೊತೆಗೆ ಲಿಪಿಗಳ ಆವಿಷ್ಕಾರ ಆಗಿಲ್ಲವಾದ್ದರಿಂದ ಶಿಕ್ಷಕ ಹೇಳಿದನ್ನು ಗಮನವಿಟ್ಟು ಆಲಿಸಿ ಕಲಿಯಬೇಕಿತ್ತು. ಶ್ಲೋಕಗಳನ್ನು ಹೇಳಿ ನಂತರ ಅದರ ಅರ್ಥವಿವರಣೆ ನೀಡುವ ಪದ್ಧತಿ ಜಾರಿಯಲ್ಲಿತ್ತು. ಕಥೆ, ಜೀವನ ಚಿತ್ರಣ, ಇತಿಹಾಸ ಮತ್ತು ಉದಾಹರಣೆಯ ಮೂಲಕ ಭಿನ್ನ ಸಂಗತಿಗಳನ್ನು ನಿರರ್ಗಳವಾಗಿ ಹೇಳುತ್ತಿದ್ದರು. ಸ್ವಯಂ ಅಭ್ಯಾಸ ಇಲ್ಲಿಯ ಪ್ರಧಾನ ವಿಧಾನ. ಇದರಲ್ಲಿ ಮೌಖಿಕ ವಿಧಾನ, ವೈಯಕ್ತಿಕ ವಿಧಾನ, ಪದ್ಯರೂಪದ ವಿಧಾನ, ಚರ್ಚಾ ಪದ್ಧತಿ ಮುಖ್ಯವಾಗಿತ್ತು. ಬಾಯಿಪಾಠ ವಿಧಾನ ಗುರುಕುಲ ಪದ್ಧತಿಯ ಮುಖ್ಯ ಲಕ್ಷಣಗಳಲ್ಲಿ ಒಂದು. ವೇದಗಳನ್ನು ಸಂಹಿತಾಪಾಠ, ಕ್ರಮಪಾಠ, ಜಟಪಾಠ, ಘನಪಾಠ ಎಂಬ ಕ್ರಮದಲ್ಲಿ ಕಲಿಯುತ್ತಿದ್ದರು. ಇದರೊಂದಿಗೆ ಮೌಖಿಕವಾಗಿಯೇ ಮೌಲ್ಯಮಾಪನವೂ ನಿರಂತರ ನಡೆಯುತ್ತಿತ್ತು.

ಈ ಕಾಲಘಟ್ಟದ ನಂತರ ಬೌದ್ಧ ಶಿಕ್ಷಣ ತದನಂತರ ಇಸ್ಲಾಂ ಶಿಕ್ಷಣ ಉತ್ತರ ಭಾರತದ ಬಹುಭಾಗಗಳಲ್ಲಿ ಪ್ರಸಿದ್ಧಿ ಪಡೆಯಿತು. ಇದು ವೇದಗಳ ಕಾಲದ ಶಿಕ್ಷಣಕ್ಕೆ ಪರ್ಯಾಯಾವಾಗಿ ನಡೆಯಿತೇ ಹೊರತು ವಿಭಿನ್ನವಾಗಿ ಅಲ್ಲ. ಆದ್ದರಿಂದ ಇದನ್ನು ಪ್ರಸ್ತುತ ಅಧ್ಯಯನದಲ್ಲಿ ವಿವರಿಸಿರುವುದಿಲ್ಲ. ಆದರೆ ಈ ಹೊತ್ತಿಗೆ ಲಿಪಿಗಳ ಬಳಕೆ ಹೆಚ್ಚು ಅಭಿವೃದ್ಧಿ ಹೊಂದಿದ ಕಾರಣ ಆಲಿಸುವ ಜೊತೆಗೆ ಇತರ ಕೌಶಲಗಳೂ ಬೆಳವಣಿಗೆ ಹೊಂದಿದವು ಎನ್ನುವುದು ಗಮನಾರ್ಹ ವಿಷಯ.

3.6. ಇಂಗ್ಲೀಷ್ ಶಿಕ್ಷಣ

ಇಂಗ್ಲೀಷ್ ಶಿಕ್ಷಣ ಭಾರತೀಯ ಶೈಕ್ಷಣಿಕ ಚರಿತ್ರೆಯ ಅತ್ಯಂತ ಪ್ರಮುಖ ಮೈಲುಗಲ್ಲು. ಆಧುನಿಕ ಪರಿಕಲ್ಪನೆ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ಭಾರತೀಯ ನೆಲೆಗಟ್ಟಿನಿಲ್ಲಿ ರೂಪುಗೊಂಡ ಶಿಕ್ಷಣ ಇದಾಗಿರುವುದರಿಂದ ಜಗತ್ತಿನ ಅನೇಕ ಶೈಕ್ಷಣಿಕ ಆವಿಷ್ಕಾರಗಳು ಜಾರಿಗೊಳ್ಳಲು ಇದೊಂದು ಪ್ರಯೋಗಾಲಯವೂ ಆಯಿತು. ಕ್ರಿ.ಶ 1600 ರಿಂದ 1947ವರೆಗೆ ಅಂದರೆ ಬ್ರಿಟೀಷ್ ಆಗಮನದಿಂದ ನಿರ್ಗಮನದ ವರೆಗಿನ ಕಾಲವನ್ನು ಇಂಗ್ಲೀಷ್ ಶಿಕ್ಷಣದ ಕಾಲವೆಂದು ಕರೆಯುತ್ತೇವೆ. ಆದರೆ ಆನಂತರದ ಕಾಲವೂ ಇದೇ ಚೌಕಟ್ಟಿನಲ್ಲಿ ಶಿಕ್ಷಣ ಮುಂದುವರಿಯಿತು(ಪ್ರತ್ಯೇಕ ಚರ್ಚಿಸಿದೆ). ಶಿಕ್ಷಣದ ಉದ್ದೇಶ, ವ್ಯಾಪ್ತಿ, ಗುರಿ ಇವುಗಳನ್ನು ಪೂರ್ವ ನಿರ್ಧರಿಸಿ ಆ ಪ್ರಕಾರ ಕಲಿಕಾರ್ಥಿಗೆ ನೀಡುವ ವ್ಯವಸ್ಥೆ ರೂಪುಗೊಂಡದ್ದೇ ಇಂಗ್ಲೀಷ್ ಶಿಕ್ಷಣದ ನಂತರ. ಆರಂಭದಲ್ಲಿ ಈಸ್ಟ್ ಇಂಡಿಯಾ

ಕಂಪೆನಿಯ ನೌಕರರ ಮಕ್ಕಳಿಗಾಗಿ ತೆರೆದ ಶಾಲೆಗಳು ಕ್ರಮೇಣ ಭಾರತೀಯ ಸ್ಥಿತಿವಂತರ ಮಕ್ಕಳಿಗೂ ವಿಸ್ತರಿಸಲ್ಪಟ್ಟಿತು. ಮುಂದೆ ಶಿಕ್ಷಣವೆನ್ನುವುದು ಸಾರ್ವಜನಿಕವಾದುದು ಎನ್ನುವ ಪರಿಜ್ಞಾನವನ್ನು ಭಾರತೀಯರಲ್ಲಿ ಬಿತ್ತಿದವರೂ ಬ್ರಿಟೀಷರೇ ಆಗಿದ್ದಾರೆ.

3.6.1 ಪಠ್ಯ ಮತ್ತು ಬೋಧನೆ

ಭಾರತದಲ್ಲಿ ಧಾರ್ಮಿಕ ಶಿಕ್ಷಣವೇ ಮುಖ್ಯ ಎನ್ನುವ ಕಾಲದಲ್ಲಿಯೇ ಜಗತ್ತಿನಾದ್ಯಂತ ಕ್ರೈಸ್ತ ಧರ್ಮ ಪ್ರಚಾರದ ಮಿಶನರಿಗಳು ಚಟುವಟಿಕೆಯಲ್ಲಿದ್ದವು. ವ್ಯಾಪಾರ ಮತ್ತು ಧರ್ಮ ಪ್ರಚಾರದ ಉದ್ದೇಶಕ್ಕಾಗಿ ಜಗತ್ತು ಸುತ್ತಲು ಆರಂಭಿಸಿದ ಯುರೋಪ್ಯನ್ನರು ಅದನ್ನೇ ಪಠ್ಯವಾಗಿಸಿದರು. ಇದಕ್ಕಾಗಿ ಕೆಲವೊಂದು ಆಕ್ಟ್‌ಗಳು, ಆಯೋಗಗಳ ರಚನೆ ಮಾಡಲಾಯಿತು. ಪಠ್ಯಕ್ರಮ,ಮಾಧ್ಯಮ ಹಾಗೂ ಇನ್ನಿತರ ಶೈಕ್ಷಣಿಕ ತೀರ್ಮಾನಗಳನ್ನು ಇವುಗಳು ಕೈಗೊಳ್ಳುತ್ತಿದ್ದವು. ಅದರ ಪ್ರಕಾರ ಕ್ರೈಸ್ತ ಧರ್ಮ ಮತ್ತು ಇಂಗ್ಲೀಷ್ ಭಾಷೆ ನಿರ್ಣಾಯಕ ಸ್ಥಾನದಲ್ಲಿ ನಿಂತಿತು. ಲಾರ್ಡ್ ಮೆಕಾಲೆ ಎನ್ನುವ ಸಲಹಾ ಸಮಿತಿಯ ಸದಸ್ಯನ ಶಿಫಾರಸ್ಸಿನಂತೆ ಇಂಗ್ಲೀಷ್ ಶಿಕ್ಷಣ ಭಾರತದಲ್ಲಿ ಭದ್ರ ಸ್ಥಾನ ಪಡೆಯಿತು. ಧಾರ್ಮಿಕ ಶಿಕ್ಷಣದ ಜೊತೆಗೆ ಲೌಕಿಕ ಶಿಕ್ಷಣ,ಸ್ತ್ರೀ ಶಿಕ್ಷಣ ಮತ್ತು ಸಮಾನ ಶಿಕ್ಷಣದ ಪರಿಕಲ್ಪನೆಗಳು ಬೆಳೆಯಿತು. ಆ ಸಂದರ್ಭದಲ್ಲಿ ಈ ಎಲ್ಲರಿಗೂ ಅನ್ವಯವಾಗುವ ಪಠ್ಯ ಕ್ರಮ ಜಾರಿಗೆ ಬಂದಿತು. ಅಲ್ಲದೇ ಈ ಹಿಂದೆ ಚರ್ಚಿಸಿದ ಅನೇಕ ಶೈಕ್ಷಣಿಕ ಪದ್ಧತಿಗಳು ಭಾರತದಲ್ಲೂ ಪರಿಚಯಿಸಲ್ಪಟ್ಟಿತು. ಇಂಗ್ಲೀಷ್ ಸಾಹಿತ್ಯ, ಪಾಶ್ಚಿಮಾತ್ಯ ತತ್ವಜ್ಞಾನ,ವಿಜ್ಞಾನ ಮತ್ತು ತಂತ್ರಜ್ಞಾನಗಳ ಕಲಿಕೆ ಈ ಕಾಲದಿಂದ ಭಾರತದಲ್ಲಿ ನಡೆಯತೊಡಗಿತು. ಯುರೋಪಿನಲ್ಲಿ ನಡೆದ ಕೈಗಾರಿಕಾ ಕ್ರಾಂತಿ ಇವೆಲ್ಲದಕ್ಕೂ ಬೆಂಬಲವಾಗಿ ನಿಂತಿತು.

ಈ ರೀತಿಯ ಶೈಕ್ಷಣಿಕ ಬದಲಾವಣೆಗಳು ಜ್ಞಾನ ಕ್ಷೇತ್ರದ ಕ್ರಾಂತಿಕಾರಕ ಬದಲಾವಣೆಗೆ ಅವಕಾಶ ಮಾಡಿಕೊಟ್ಟರೂ ಕಲಿಕಾರ್ಥಿಯ ಅರಿವನ್ನು ವೃದ್ಧಿಮಾಡುವ ತಂತ್ರಗಳಲ್ಲಿ ಅನೇಕ ಗೊಂದಲ ಅಪಕ್ವತೆಯನ್ನು ರೂಪಿಸಿದವು. ದೇಶಿಯ ಮಾದರಿಯ ಶೈಕ್ಷಣಿಕ ವ್ಯವಸ್ಥೆಗೆ ಸಂಪೂರ್ಣ ತಿಲಾಂಜಲಿ ಇತ್ತು, ಪಾಶ್ಚಿಮಾತ್ಯ ಪರಿಕಲ್ಪನೆ ನಾಂದಿ ಹಾಡಿದ್ದು ಒಂದು ರೀತಿಯ ಅಸ್ಥಿರತೆಗೆ ಕಾರಣವಾಯಿತು. ಶಿಕ್ಷಣ ವೃತ್ತಿ ಕೇಂದ್ರಿತವಾಗಿ ರೂಪುಗೊಳ್ಳಲು ಆರಂಭವಾದಲ್ಲಿಂದ ಇನ್ನೂ ಹೆಚ್ಚಿನ ಅಂತರವನ್ನು ಸೃಷ್ಟಿಸಿತು. ಸ್ವತಂತ್ರ ಭಾರತದ ಶೈಕ್ಷಣಿಕ ಪ್ರಕ್ರಿಯೆಯ ಉತ್ಪಾದಿತ ಚಿಂತನೆ ಇದಕ್ಕೆ ಬಲಕೊಟ್ಟಿತು.

3.7.ವೃತ್ತಿ ಶಿಕ್ಷಣ

ಸ್ವಾತಂತ್ರ್ಯಾ ನಂತರ ಭಾರತದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ತರುವ ನೆಲೆಯಲ್ಲಿ ಚಿಂತನೆಗಳು ನಡೆದವು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗ, ಮಾಧ್ಯಮಿಕ ಶಿಕ್ಷಣ ಆಯೋಗ, ಕೊಠಾರಿ ಶಿಕ್ಷಣ ಆಯೋಗ, ರಾಷ್ಟ್ರೀಯ ಶಿಕ್ಷಣ ನೀತಿ ಇವೇ ಮೊದಲಾದ ಸುಧಾರಣಾ ತಂತ್ರಗಳನ್ನು ಜಾರಿಗೆ ತರಲಾಯಿತು. ಮಾತೃ ಭಾಷೆ,ರಾಷ್ಟ್ರೀಯ ಭಾಷೆ, ಅಂತರರಾಷ್ಟ್ರೀಯ ಭಾಷೆ ಹೀಗೆ ಮಾಧ್ಯಮದಲ್ಲೂ ಕೆಲವೊಂದು ನಿಲುವುಗಳನ್ನು ಸ್ಪಷ್ಟ ಪಡಿಸಲಾಯಿತು. ಶಿಕ್ಷಣ

ಮೂಲಭೂತ ಹಕ್ಕಾದುದು ಮಾತ್ರವಲ್ಲದೇ ಕಡ್ಡಾಯ ಶಿಕ್ಷಣವನ್ನೂ ಜಾರಿಗೆ ತರಲಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವುದರ ಜೊತೆಗೆ ಉನ್ನತ ಶಿಕ್ಷಣ ನೀಡುವ ನೆಲೆಯಲ್ಲಿ ಅನೇಕ ಸುಧಾರಣೆಗಳು ನಡೆದವು. ಉನ್ನತ ಶಿಕ್ಷಣದಲ್ಲಿ ನಿರ್ದಿಷ್ಟ ವೃತ್ತಿಯನ್ನು ಪಡೆಯುವ ನೆಲೆಯಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳು ಹೆಚ್ಚು ಜನಪ್ರಿಯವಾಗತೊಡಗಿದವು. ಇತ್ತೀಚೆಗೆ ಇದು ಎಷ್ಟರ ಮಟ್ಟಿಗೆ ಬೆಳೆಯಿತೆಂದರೆ ಮಗು ಹುಟ್ಟಿ ಮೂರು ವರ್ಷ ಪೂರೈಸುವ ಮುನ್ನವೇ ಅದು ಇಂತದೇ ವೃತ್ತಿ(ಡಾಕ್ಟರ್, ಇಂಜಿನಿಯರ್, ವಿಜ್ಞಾನಿ, ಸರಕಾರಿ ಹುದ್ದೆ ಇತ್ಯಾದಿ)ಯನ್ನು ಮಾಡಬೇಕು. ಹಾಗಾಗಿ ಇದೇ ಭಾಷೆ (ಇಂಗ್ಲೀಷ್) ಯನ್ನೂ ಇಂತಹದೇ ವ್ಯಾಪ್ತಿಯ ಪಠ್ಯವಸ್ತುವನ್ನು ಕಲಿಯಬೇಕು ಎನ್ನುವ ಹಂತಕ್ಕೆ ತಲುಪಿದೆ. ಇದು ಕಲಿಕೆಯನ್ನು ಅಂಕ ಕೇಂದ್ರೀಕೃತ ವ್ಯವಸ್ಥೆಗೆ ತಲುಪಿಸಿದೆ. ಪರಿಣಾಮ ಸಮಾಜದಲ್ಲಿ ಸಾಂಪ್ರದಾಯಿಕ ಉದ್ಯೋಗಿಗಳ ಕೊರತೆ, ಕಲಿಕಾರ್ಥಿಗಳಲ್ಲಿ ಮಾನಸಿಕ ಒತ್ತಡ, ಗೊಂದಲ ಮತ್ತು ಅಸ್ಥಿರ ಬದುಕು ಸೃಷ್ಟಿಯಾಗುವಂತೆ ಮಾಡುತ್ತಿದೆ. ಅನೇಕ ಶಾಲಾ–ಕಾಲೇಜುಗಳು ಪದವಿಗಳನ್ನು ಉತ್ಪಾದಿಸುವ ಕಾರ್ಖಾನೆಗಳಂತಾಗಿವೆ. ಇಲ್ಲಿ ಕಲಿತ ಮಕ್ಕಳ ವಾಸ್ತವಿಕ ಜೀವನದಲ್ಲಿ ವಿಫಲತೆಯನ್ನು ಕಾಣುವುದೇ ಹೆಚ್ಚಾಗಿದೆ. ಆದ್ದರಿಂದ ಆಧುನಿಕ ಶಿಕ್ಷಣ ವ್ಯವಸ್ಥೆ ಮಗುವಿನ ವಿಕಾಸಕ್ಕೆ ಪೂರಕವಾಗುವಷ್ಟೇ ಮಾರಕವಾಗುತ್ತಿರುವುದು ಚೋದ್ಯವಾಗಿದೆ. ನಿರ್ದಿಷ್ಟ ವೃತ್ತಿಯನ್ನಾಧರಿಸಿ ನಡೆಯುವ ಕಲಿಕೆ ಕಲಿಕಾರ್ಥಿಯನ್ನು ಸಮಗ್ರನನ್ನಾಗಿ ನೋಡುವ ಸ್ಥಿತಿಯಿಂದ ವಂಚಿಸುತ್ತಿದೆ. ಇದರ ಮಧ್ಯೆ ಕಳೆದ ದಶಕಗಳಿಂದ ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನದ ಬಳಕೆ ಕಲಿಕಾ ವಿಧಾನವನ್ನೇ ಬುಡಮೇಲು ಮಾಡುತ್ತಿದೆ.

3.7.1.ತಂತ್ರಜ್ಞಾನದ ಬಳಕೆ

ವೃತ್ತಿ ಶಿಕ್ಷಣ ಕಲಿಕಾರ್ಥಿಗೆ ನೀಡುವ ಪಠ್ಯವಸ್ತುವಾದರೆ ತಂತ್ರಜ್ಞಾನದ ಬಳಕೆ ಬೋಧನಾ ವಿಧಾನ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ತಾಂತ್ರಿಕ ಆವಿಷ್ಕಾರಗಳು ಶಿಕ್ಷಣ ಮಾಧ್ಯಮವಾಗಿ ಹೆಚ್ಚು ಬಳಕೆಗೆ ಬರುತ್ತಿದೆ. ಗುರು ಮುಖೇನ ಆರಂಭವಾದ ಔಪಚಾರಿಕ ಶಿಕ್ಷಣದ ವ್ಯಾಪ್ತಿ ಒಂದು ನಿರ್ದಿಷ್ಟ ಗುಂಡಿ(ಬಟನ್)ಗಳನ್ನು ಒತ್ತುವ ಮೂಲಕ ನಡೆಯುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಂತರ್‌ಜಾಲದ ಬಳಕೆಯಂತೂ ಅನಿವಾರ್ಯವೆಂಬಂತೆ ಬೆಳೆಯುತ್ತಿದೆ. ತಂತ್ರಜ್ಞಾನದ ಬೆಳವಣಿಗೆಯಿಂದ ಜಾಗತಿಕ ಮಾಹಿತಿಯನ್ನು ಕಲೆಹಾಕುವುದಕ್ಕೆ ಬಹಳ ಅನುಕೂಲವಾಗಿದೆ. ಆದರೆ ಕಲಿಕಾರ್ಥಿಯ ಅನುಭವವನ್ನು ವಿಸ್ತರಿಸುವಲ್ಲಿ ಇದು ವಿಫಲವಾಗಿದೆ. ಆದ್ದರಿಂದಲೋ ಏನು ಮಾಹಿತಿಯ ಹಿಂದೆ ಬಿದ್ದ ಅನೇಕ ಪದವೀಧರರು ಜೀವನದ ಅನುಭವಗಳಿಲ್ಲದೇ ಸಂಕಷ್ಟಕ್ಕೀಡಾಗುತ್ತಿರುವುದು.

ಆದ್ದರಿಂದ ತಂತ್ರಜ್ಞಾನದ ಬಳಕೆ ಎನ್ನುವುದು ಶಿಕ್ಷಣದ ಭಾಗವಾಗುತ್ತಿರುವ ಈ ಕಾಲಘಟ್ಟದಲ್ಲಿ ಶಿಶು ಕೇಂದ್ರಿತ ವ್ಯವಸ್ಥೆ ಮತ್ತು ಪ್ರಕೃತಿಯ ಜೊತೆಗಿನ ಕಲಿಕೆ ದೂರವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇವೆರಡರ ಮಧ್ಯೆ ತಂತ್ರಜ್ಞಾನವನ್ನು ಹೇಗೆ ಇಟ್ಟುಕೊಳ್ಳುವುದು ಎನ್ನುವುದೇ ಪ್ರಮುಖ ವಿಷಯವಾಗಿದೆ.

3.8. ಭಿನ್ನ ಶಿಕ್ಷಣ ಕ್ರಮಗಳು ಮತ್ತು ಜನಪದ ಸಾಹಿತ್ಯ ಶಿಕ್ಷಣ

ಭಾರತದಲ್ಲಿ ಬೆಳವಣಿಗೆ ಹೊಂದಿದ ಈ ಮೇಲಿನ ಶಿಕ್ಷಣ ಕ್ರಮಗಳು ಮಾಧ್ಯಮ, ವಿಷಯವಸ್ತು ಮತ್ತು ವಿಧಾನ ಮತ್ತು ಕಾಲದ ಮೂಲಕ ಭಿನ್ನವಾಗಿದೆ. ಈ ಹಿಂದೆ ಹೇಳಿದ ಪದ್ಧತಿಗಳಲ್ಲಿ ವಿಧಾನಕ್ಕೆ ಆದ್ಯತೆ ನೀಡಲಾಗಿತ್ತೇ ಹೊರತು ಮಾಧ್ಯಮ ಮತ್ತು ವಿಷಯವಸ್ತುವಿನಲ್ಲಿ ಯಾವುದೇ ಕಟ್ಟುಪಾಡುಗಳಿರಲಿಲ್ಲ. ಗುರುಕುಲ ಅಥವಾ ವೇದಗಳ ಕಾಲದ ಶಿಕ್ಷಣ ಅತಿಪುರಾತನ, ಸಂಸ್ಕೃತವೇ ಪ್ರಧಾನ ಮಾಧ್ಯಮ, ಅಲೌಕಿಕ ವಿಚಾರಗಳೇ ವಿಷಯವಸ್ತು. ಇದು ಇಂಗ್ಲೀಷ್ ಶಿಕ್ಷಣದ ಕಾಲಕ್ಕೆ ಬಂದಾಗ ಹೊಸತೊಂದು ಮಾಧ್ಯಮದ ಕಲಿಕೆಯೂ ಸೇರ್ಪಡೆಗಂಡಿತು. ವಿಷಯವಸ್ತುವಿನಲ್ಲಿ ವ್ಯವಹಾರಿಕ ಅಂಶಗಳು ಹೆಚ್ಚಾದವು, ಇದು ವೃತ್ತಿ ಶಿಕ್ಷಣದ ಕಾಲದಲ್ಲಿ ಇನ್ನೂ ತೀವ್ರಗೊಂಡಿತು. ಆದ್ದರಿಂದ ಪ್ರಾದೇಶಿಕ ಭಾಷಾ ಮಾಧ್ಯಮ, ಪರಿಸರದ ವಿಷಯವಸ್ತು, ಹಾಗೂ ಕಲಿಕಾ ಅವಧಿಯ ಕೊರತೆ ಈ ಬದಲಾವಣೆ ಕಲಿಕೆಯಲ್ಲಿ ಒತ್ತಡವನ್ನು ಹೆಚ್ಚಿಸುತ್ತಾ ಸಾಗಿತು ಎನ್ನುವುದನ್ನು ಮೇಲಿನ ಶಿಕ್ಷಣ ಕ್ರಮದಲ್ಲಿ ಗುರುತಿಸಬಹುದಾಗಿದೆ. ಅಲ್ಲದೇ ಜನಪದ ಶಿಕ್ಷಣದ ಯಶಸ್ಸಿನ ಗುಟ್ಟು ಅದರ ಪ್ರಾದೇಶಿಕ ಮಾಧ್ಯಮ, ಅನುಭವಜನ್ಯ ವಿಷಯವಸ್ತು ಹಾಗೂ ನಿರಂತರ ಕಲಿಕೆ ಮತ್ತು ಬದಲಾಣೆಯಲ್ಲಿ ಅಡಗಿದೆ ಎನ್ನುವುದರಿಂದ ತಿಳಿದುಕೊಳ್ಳಬಹುದು.

ಶಿಕ್ಷಣವನ್ನು ನಿರ್ದಿಷ್ಟ ಚೌಕಟ್ಟಿನ ಅಡಿಯಲ್ಲಿ ರೂಪಿಸುತ್ತಾ ಹೋದಂತೆ ಅದರಲ್ಲಿನ ಕಲಿಕೆಯ ಸಾಧ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ ಎನ್ನುವುದಕ್ಕೆ ಮೇಲಿನ ಕ್ರಮಗಳನ್ನು ಪರಿಚಯಿಸಲಾಗಿದೆ. ಆಧುನಿಕ ಚಿಂತನಾ ಕ್ರಮದಿಂದ ಬೆಳೆದು ಬಂದ ಶಿಕ್ಷಣ ವ್ಯವಸ್ಥೆಯ ಜನಪದ ಕಲಿಕಾ ಮಾದರಿಗಳನ್ನು ಅಳವಡಿಸಲ್ಲು ಸಾಧ್ಯವಾದಷ್ಟು ಕಲಿಕೆ ಸಹಜವಾಗುತ್ತದೆ. ಮತ್ತು ಪರಿಣಾಮಕಾರಿಯಾಗುತ್ತದೆ ಎನ್ನುವುದನ್ನು ಈ ಅಧ್ಯಾಯದಿಂದ ತಿಳಿದುಕೊಳ್ಳಬಹುದಾಗಿದೆ.

*1 ಜನಪದ ಶಿಕ್ಷಣಕ್ಕೆ ನೇರ ಸಂಬಂಧ ಇರುವ ಶಿಕ್ಷಣ ಪದ್ಧತಿಗಳನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ.

*2 ಜನಪದದಲ್ಲಿ ಆಲಿಸುವ ಕೌಶಲವು ಮಹತ್ವ ಪೂರ್ಣವಾದುದು. ಆನಂತರ ಮಾತಿನ ಕೌಶಲ. ಇಲ್ಲಿ ಸಂದರ್ಭನುಸಾರ ಎರಡನ್ನೂ ವಿವರಿಸಲಾಗಿದೆ

*3 ಆಲಿಸುವಿಕೆಯ ಬಗೆಗಿನ ಈ ಸೂತ್ರಗಳು ವೆಜ್ಞಾನಿಕವಾದುದಾಗಿದ್ದು ಮತ್ತು ಇದು ತಜ್ಞರ ವಿವರಣೆ

*4 ಈ ಪದ್ಧತಿಗಳನ್ನು ಸಮಗ್ರವಾಗಿ ನೋಡಿದಾಗ ಅಲ್ಲಿ ಜನಪದ ಕಲಿಕಾ ವಿಧಾನ ಇರುವುದನ್ನು ಗುರುತಿಸಬಹುದು

*5 ರಾಷ್ಟ್ರೀಯ ಪಠ್ಯಕ್ರಮ ನೀತಿ ಸಹಜ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡುವುದರಿಂದ ಅದು ಜಾನಪದ ಕಲಿಕೆಯಿಂದ ಪ್ರಭಾವಗಂಡಿದೆ ಎನ್ನುವುದನ್ನು ಸಮರ್ಥಿಸಬಹುದು

ಅಧ್ಯಾಯ 4

ಶಿಕ್ಷಣದಲ್ಲಿ ಸಮನ್ವಯ–ಜನಪದ ತಂತ್ರಗಳ ಅಳವಡಿಕೆ

ಪೀಠಿಕೆ: ಭಾಷೆ, ಸಾಹಿತ್ಯ ಮತ್ತು ಶಿಕ್ಷಣ ಇವುಗಳಿಗೆ ಮೂಲ ಜಾನಪದ. ಇಂದು ನಮ್ಮ ಮಧ್ಯೆ ಅಸ್ತಿತ್ವದಲ್ಲಿರುವ ಔಪಚಾರಿಕ ಶಿಕ್ಷಣ ವ್ಯವಸ್ಥೆಯ ಹಿಂದೆ ಜನಪದ ಶಿಕ್ಷಣ ಪ್ರಧಾನ ಪಾತ್ರ ವಹಿಸಿರುತ್ತದೆ ಎನ್ನುವುದು ಈಗಾಗಲೇ ನೀಡಿದ ಎರಡು ಶೈಕ್ಷಣಿಕ ವ್ಯವಸ್ಥೆಯಿಂದ ತಿಳಿಯಬಹುದಾಗಿದೆ. ಜನಪದ ವ್ಯವಸ್ಥೆಯ ಕಲಿಕಾ ಪದ್ಧತಿ ಮತ್ತು ಔಪಚಾರಿಕ ಕಲಿಕಾ ವಿಧಾನ ಇವುಗಳಲ್ಲಿ ಒಂದನೇ ವಿಧಾನವು ಸ್ವತಂತ್ರವಾದುದು. ಎರಡನೇ ವಿಧಾನವು ಮೊದಲನೇ ವಿಧಾನವನ್ನು ನೋಡಿ ರೂಪುಗೊಂಡದ್ದು. ಆದ್ದರಿಂದ ಮೊದಲನೇ ವಿಧಾನವೇ ಹೆಚ್ಚು ಸತ್ವಯುತವಾದುದು ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಈ ಎರಡೂ ಪದ್ಧತಿ ಎಲ್ಲಿ ಸಮನ್ವಯಗೊಳಿಸಲಾಗಿದೆ ಮತ್ತು ಜನಪದ ಕಲಿಕಾ ತಂತ್ರಗಳನ್ನು ಎಲ್ಲಿ ಅಳವಡಿಸಲು ಸಾಧ್ಯವಿದೆ ಎನ್ನುವುದನ್ನು ಚರ್ಚಿಸಲಾಗಿದೆ.

4.1.ಶಿಕ್ಷಣದಲ್ಲಿ ಸಮನ್ವಯ ಮತ್ತು ತಂತ್ರಗಳ ಅಳವಡಿಕೆ

4.1.1 ಮೌಖಿಕ ಸೂತ್ರ ವಿಧಾನ

ಜನಪದ ಸಾಹಿತ್ಯದ ಕಲಿಕೆಯಲ್ಲಿ ಅಳವಡಿಸಲಾದ ಮೌಖಿಕ ಸೂತ್ರ ಔಪಚಾರಿಕ ಶಿಕ್ಷಣದಲ್ಲಿ ಅಳವಡಿಸಲಾಗಿರುವ ಪ್ರಮುಖ ಭಾಗ. ಆಧುನಿಕ ಶಿಕ್ಷಣದ ಪದ್ಯ ಬೋಧನೆ ಮತ್ತು ಶಿಷ್ಟ ಕಾವ್ಯ ರಚನೆಯೂ ಒಂದು ಸೂತ್ರದ ಹಿನ್ನಲೆಯಿಂದಲೇ ರಚನೆಗೊಂಡಿರುತ್ತದೆ. ಛಂದೋ ಬದ್ಧ ರಚನೆಯಾದ ಕಾವ್ಯಗಳ ಕಲಿಕೆಗೂ ಒಂದು ಸೂತ್ರವಿದೆ. ಬಾಯಿಪಾಠವನ್ನು ಹೊರತುಪಡಿಸಿದ ಪದ್ಯ ಕಲಿಕೆಯ ತಂತ್ರ ಅದಾಗಿರುತ್ತದೆ. ಸಾಮಾನ್ಯವಾಗಿ ಒಂದು ಕಾವ್ಯ ಸಾರ್ವಕಾಲಿಕವಾಗಿ ನಿಲ್ಲುವುದು ಅದರ ರಚನಾ ಸೂತ್ರದಿಂದ. ಈ ರಚನಾ ಸೂತ್ರ ಸಮರ್ಪಕವಾಗಿದ್ದರೆ ಅದು ಮೌಖಿಕವಾಗಿ ಹೆಚ್ಚು ಕಾಲ ಮತ್ತು ಹೆಚ್ಚು ಜನರ ಬಳಿಗೆ ಹೋಗುತ್ತದೆ. ಆದ್ದರಿಂದ ಜನಪದ ಸಾಹಿತ್ಯವನ್ನು ಮೌಖಿಕ ಸೂತ್ರದಲ್ಲಿ ಹೇಗೆ ರಚಿಸಲಾಗಿದೆಯೋ ಅದೇ ಸೂತ್ರವನ್ನು ಇಟ್ಟುಕೊಂಡು ಕಾವ್ಯಗಳನ್ನೂ ರಚಿಸಲಾಗುತ್ತದೆ ಅಥವಾ ಯಾವ ಕಾವ್ಯ ಹಾಗೆ ರಚಿಸಲ್ಪಟ್ಟಿರುತ್ತದೆಯೋ ಅದು ಶೈಕ್ಷಣಿಕವಾಗಿಯೂ ಹೆಚ್ಚು ಬಳಕೆಯಾಗುತ್ತದೆ. ಇದಕ್ಕೆ ಒಂದು ಕಾಲದ ಪಂಪ(ಹಳೆಗನ್ನಡ) ಕುಮಾರವ್ಯಾಸ(ನಡುಗನ್ನಡ) ಕುವೆಂಪು,ಬೇಂದ್ರೆ(ಹೊಸಗನ್ನಡ) ಕವಿಗಳ ಕಾವ್ಯಗಳೇ ಸಾಕ್ಷಿ. ತುಳು ಜನಪದ ಸಾಹಿತ್ಯದ ಕೋಟಿ–ಚೆನ್ನಯ, ಸಿರಿ, ಬಲೀಂದ್ರ ಪಾಡ್ದನಗಳ ರಚನೆಯಲ್ಲಿನ ಜನಪ್ರಿಯತೆಯಂತೆ ಈ ಶಿಷ್ಟ ಕಾವ್ಯಗಳ ರಚನೆಯಾಗಿವೆ. ಅಲ್ಲದೇ ಈ ಎಲ್ಲಾ ಪಾಡ್ದನಗಳು ಸಾಮಾಜಿಕವಾಗಿ ಹೆಚ್ಚು ಬಳಕೆಯಾಗುತ್ತಿದ್ದುದೂ ಇದಕ್ಕೆ ನಿದರ್ಶನ. ಅಂದರೆ ಮನುಷ್ಯನ ಯೋಚನೆಗೆ ಸಹಜವಾದ ಯಾವುದೇ ರಚನೆಯಾದರೂ ಅದು

ಹೆಚ್ಚು ಜನ ಕಲಿಯುವಂತೆ ಮತ್ತು ಹೆಚ್ಚು ಜನ ಇಷ್ಟಪಡುವಂತೆ ಮಾಡುತ್ತದೆ ಎಂದರ್ಥ. ಇದು ಒಂದು ಕಾಲದ ಪರಿಸರ ಪೂರಕ ರಚನೆಯೂ ಆಗಿರುವುದು ಕಾರಣವಾಗಿರುತ್ತದೆ. ಈ ಅರ್ಥದಲ್ಲಿ ಶಿಷ್ಟ ರಚನೆಯಲ್ಲೂ ಜನಪದ ತಂತ್ರ ಅಡಕವಾಗಿರುತ್ತದೆ. ಆದ್ದರಿಂದ ಶೈಕ್ಷಣಿಕ ರಚನೆಗಳೂ ನಿರ್ದಿಷ್ಟ ಸೂತ್ರಕ್ಕೆ ಒಳಪಟ್ಟು ರಚನೆಯಾಗುವ ಅನಿವಾರ್ಯ ಕಲಿಕೆಯ ದೃಷ್ಟಿಯಿಂದ ಇದೆ ಎನ್ನುವುದು ಸತ್ಯ.

4.1.2 ದೃಷ್ಟಾಂತ ಕಲಿಕಾ ವಿಧಾನ

ಜನಪದ ಕಲಿಕೆ ಎನ್ನುವುದು ವಾಸ್ತವದ ಹಿನ್ನಲೆಯಲ್ಲಿ ವ್ಯಕ್ತವಾಗುವ ಕಲಿಕೆ. ಇಲ್ಲಿಯ ಪಠ್ಯವಸ್ತು ಮನುಷ್ಯ ಜೀವನದ ಅನುಭವದಿಂದ ಕೂಡಿರುವುದೇ ಹೆಚ್ಚು. ಪಾಡ್ದನದಂತಹಾ ಕಥನ ಕಾವ್ಯಗಳ ವಸ್ತು ಅತಿಮಾನುಷವೆಂದು ಕಂಡುಬಂದರೂ ಅದರಲ್ಲಿ ಬರುವ ಸಾಂಸ್ಕೃತಿಕ ವಿವರಣೆಗಳು ಮನುಷ್ಯನ ಸಾಮಾಜಿಕ ಜೀವನಾನುಭವಗಳೇ ಆಗಿರುತ್ತವೆ. ಉದಾಹರಣೆಗೆ ಕೋಟಿ–ಚೆನ್ನಯ ಪಾಡ್ದನದ ಬೇಸಾಯ, ಮೂರ್ತೆ ಹಾಗೂ ಶತಮಾನಗಳ ಹಿಂದಿನ ಸ್ಥಳೀಯ ರಾಜಕೀಯ ಮೇಲಾಟಗಳು,ಬಲೀಂದ್ರ ಪಾಡ್ದನದ ವರ್ಗ ಸಂಘರ್ಷ, ಸಿರಿ ಪಾಡ್ದನದ ಸ್ತ್ರೀವಾದಿ ನಲೆ ಮತ್ತು ಸಾಮಾಜಿಕ ದೃಷ್ಟಿಕೋನ ಹೀಗೆ ಪ್ರತೀ ಪಾಡ್ದನಗಳೂ ಈ ದೃಷ್ಟಾಂತಗಳ ವಿವರಣೆಯನ್ನೇ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತಾ ಸಾಮಾಜಿಕ ಮೌಲ್ಯಗಳನ್ನು ಗಟ್ಟಿಗೊಳಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ನಡೆಸುತ್ತಾ ಬಂದಿದೆ. ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಪಾಡ್ದನಗಳನ್ನು ಅಧ್ಯಯನ ನಡೆಸಿದ್ದೇ ಆದರೆ ಪಾಡ್ದನಗಳು ತುಳುನಾಡನ್ನು ಕಟ್ಟಿವೆ ಎನ್ನುವುದು ತಿಳಿದು ಬರುತ್ತದೆ. ಸಾಮಾಜಿಕವಾದ ಮೇಲ್ವರ್ಗ ಮತ್ತು ಕೆಳವರ್ಗ ಎರಡೂ ಸಮಾನವಾಗಿ ಸ್ವೀಕರಿಸಿದ ತುಳುನಾಡಿನ ವೃತ್ತಿ ಬೇಸಾಯ, ಪ್ರವೃತ್ತಿ ಭೂತಾರಾಧನೆ ಇವೆರಡರಲೂ ಬಳಕೆಯಾಗುತ್ತಿದ್ದ ಸಾಹಿತ್ಯ ಪಾಡ್ದನ. ಆದ್ದರಿಂದ ಹೆಚ್ಚು ಜನರ ಬಳಿಗೆ ತಲುಪುತ್ತಿದ್ದ ಈ ರಚನೆಗಳು ಜನರ ಅನೌಪಚಾರಿಕ ಕಲಿಕೆಗೆ ಪ್ರೇರಣೆಯಾಗಿತ್ತು ಎನ್ನುವುದು ಇಲ್ಲಿ ಕಂಡುಕೊಂಡ ವಾಸ್ತವ.

ಔಪಚಾರಿಕ ಕಲಿಕೆ ಸಾಹಿತ್ಯದ ಕಲಿಕೆಯಲ್ಲೂ ಇದೇ ಕಾರ್ಯ ಮಾಡುವುದಕ್ಕೆ ಪಠ್ಯ ರಚನೆ ಮಾಡಿ ಬೋಧನೆ ಮಾಡುತ್ತಿರುವುದನ್ನು ಗುರುತಿಸಬಹುದು. ಆದರೆ ಅದು ಹೆಚ್ಚು ಪರಿಣಾಮಕಾರಿಯಾಗುತ್ತಿಲ್ಲ ಎನ್ನುವುದು ಬಹುತೇಕ ಶಿಕ್ಷಣ ತಜ್ಞರ ಮತ್ತು ಶಿಕ್ಷಣ ಪಡೆದವರ ಅಭಿಪ್ರಾಯ. ಕಾರಣ ನೇರ ಅನುಭವಗಳ ಬದಲು ಮಾಹಿತಿಗಳ ವರ್ಗಾವಣೆ ಹೆಚ್ಚು ನಡೆಯುದರಿಂದಲೋ ಏನೋ ದೃಷ್ಟಾಂತಗಳು ಕಲಿಕಾ ವ್ಯವಸ್ಥೆಗಳಿಂದ ದೂರವಾಗಿವೆ. ಹಾಗಾಗಿ ದೃಷ್ಟಾಂತ ಕಲಿಕೆ ಔಪಚಾರಿಕ ವಿಧಾನಕ್ಕಿಂತ ಜನಪದ ವಿಧಾನದಲ್ಲೇ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಆ ಬಗ್ಗೆ ಆಧುನಿಕ ಶಿಕ್ಷಣ ಹೆಚ್ಚು ಗಮನ ಹರಿಸುವುದು ಉತ್ತಮ.

4.1.3 ಆಲಿಸುವ ವಿಧಾನ

ಜನಪದ ಶಿಕ್ಷಣವು ಮುಖ್ಯವಾಗಿ ಕೇವಲ ಆಲಿಸುವ ಮತ್ತು ಮಾತನಾಡುವ ಈ

ಎರಡೇ ಕೌಶಲದ ಮೇಲೆ ನಿಂತಿದೆ. ಉಳಿದಂತೆ ಓದುವ ಮತ್ತು ಬರೆಯುವ ಕೌಶಲಗಳು ಆಧುನಿಕ ವ್ಯವಸ್ಥೆಯಲ್ಲಿ ಬಳಕೆಯಲ್ಲಿವೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಧುನಿಕ ಶಿಕ್ಷಣದ ಬಹುಪ್ರಧಾನ ಕೌಶಲಗಳ ಬಳಕೆ ಇಲ್ಲದೆಯೂ ಜನಪದ ಕಲಿಕೆ ಗಟ್ಟಿಗೊಳ್ಳುತ್ತಿತ್ತು. ಆದರೆ ನಾಲ್ಕೂ ಕೌಶಲಗಳನ್ನು ಸೇರಿಸಿಕೊಂಡರೂ ಕಲಿಕೆಯಲ್ಲಿ ಹಿಂದುಳಿಯುವಿಕೆ, ಬೋಧನೆಗಳಲ್ಲಿ ಅಸಮರ್ಥತೆ ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಕಾಣುವ ಮುಖ್ಯ ಸಮಸ್ಯೆ. ಆಲಿಸುವಿಕೆಯಲ್ಲಿನ ಆಸಕ್ತಿ ಸಾಹಿತ್ಯದ ಹಿನ್ನೆಲೆಯನ್ನೂ ಅವಲಂಬಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಭಾಷಾ ಪಠ್ಯಗಳ ರಚನೆಯನ್ನು ಗಮನಿಸಬೇಕಾಗುತ್ತದೆ. ಜನಪದ ಪಠ್ಯಗಳು ಆಲಿಸುವಿಕೆಗೆ ಪೂರಕವಾದ ರಚನೆಗಳೇ ಆಗಿವೆ. ಅದರ ರಾಗ, ಲಯ, ಕತೆ, ಆಕರ್ಷಣೀಯವಾಗಿದೆ. ತಾಳಗತಿಯನ್ನು ಗಮನಿಸಿದಾಗ ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತದ ಮೃದಂಗ ಅಥವಾ ಯಕ್ಷಗಾನದ ಮದ್ದಳೆ ಹಾಗು ಚೆಂಡೆಗಳ ಬಾಯಿತಾಳಗಳಿಗಿಂತ ಭಿನ್ನವಾದ ಬಾಯಿತಾಳಗಳಿವೆ ಎಂದು ವೆಂಕಟರಾಜ ಪುಣಿಂಚಿತ್ತಾಯರು ಅಭಿಪ್ರಾಯ ಪಡುತ್ತಾರೆ.(ತುಳು ಛಂದೋವಿನ್ಯಾಸ ಪುಟ–111) ಆದ್ದರಿಂದ ತುಳು ಜನಪದ ಸಾಹಿತ್ಯದ ಗದ್ಯ ಅಥವಾ ಪದ್ಯ ಇವೆರಡರಲ್ಲೂ ಆಲಿಸುವ ಕೌಶಲಕ್ಕೆ ಪೂರಕವಾದ ರಚನೆಯೊಂದನ್ನು ಕಾಣಲು ಸಾಧ್ಯವಿದೆ. ಔಪಚಾರಿಕ ಕಲಿಕೆಯಲ್ಲೂ ಈ ರೀತಿಯ ರಚನೆಯನ್ನು ನಿರೀಕ್ಷಿಸಬೇಕಾಗುತ್ತದೆ.

4.1.4 ಕಥಾನಕ ವಿಧಾನ

ಕತೆ ಹೇಳುವುದು ಮತ್ತು ಕೇಳುವುದು ಪರಿಣಾಮಕಾರಿ ಎನ್ನುವ ವಿಚಾರ ಈಗಾಗಲೇ ತಿಳಿದಿದೆ. ತುಳು ಜನಪದ ಸಾಹಿತ್ಯಗಳು ಕತೆಗೆ ಮಹತ್ವವನ್ನು ಕೊಟ್ಟಿವೆ. ಪಾಡ್ದನಗಳಾಗಲಿ ಕಬಿತಗಳಾಗಲಿ ಅವುಗಳಲ್ಲಿ ನಿರ್ದಿಷ್ಟವಾದ ಕತೆ ಅಥವಾ ಘಟನೆ ಒಳಗೊಂಡಿರುತ್ತದೆ. ಆದ್ದರಿಂದ ಕಲಿಕೆ ಸುಲಭ ಸಾಧ್ಯವಾಗುತ್ತದೆ. ಇಂದಿನ ಔಪಚಾರಿಕ ಕಲಿಕಾ ಪದ್ಧತಿಗಳಲ್ಲೂ ಕಥಾನಕ ಪದ್ಧತಿಯ ಬಳಕೆ ಇದೆ. ಆದರೆ ಅದು ಜನಪದ ಮಾದರಿಯಷ್ಟು ಪರಿಣಾಮಕಾರಿಯಾಗಿಲ್ಲ ಎನ್ನುವುದು ಒಪ್ಪಿತ ವಿಚಾರ. ಸಾಮಾನ್ಯವಾಗಿ ಪೂರ್ವ ಕತೆಗಳನ್ನೇ ಬಳಸಿ ಅದನ್ನು ಪಠ್ಯಕ್ಕೆ ಅಥವಾ ಬೋಧನೆಗೆ ಬಳಸಿಕೊಳ್ಳುವುದನ್ನು ಇಂದಿನ ಪಠ್ಯಗಳಲ್ಲಿ ಕಾಣುತ್ತದೆ. ಮಕ್ಕಳು ಇಷ್ಟಪಡುವ ಹೊಸ ಕತೆಗಳ ಹುಟ್ಟು ಕಡಿಮೆ ಎಂದೇ ಹೇಳಬೇಕು. ಜನಪದ ಕತೆಗಳಿಗೆ ತನ್ನದೇ ಆದ ಮಿತಿಗಳಿವೆ. ಕಾಲದ ದೃಷ್ಟಿಯಿಂದಲೂ ಬೋಧನೆಯಲ್ಲಿ ಈ ಕತೆಗಳ ಬಳಕೆ ಅಪ್ರಸ್ತುತವೆನಿಸುತ್ತವೆ. ಆದ್ದರಿಂದ ಕಲಿಕೆ ಹಿನ್ನೆಲೆಯಲ್ಲಿ ಪಠ್ಯಕ್ಕೆ ಪೂರಕವಾದ ಮತ್ತು ಮಕ್ಕಳ ಇಷ್ಟಪಡುವ ಕತೆಗಳು ರಚನೆಗೊಳ್ಳಬೇಕಾಗುತ್ತದೆ. ಇಂದಿನ ಹೊಸ ಕಲಿಕಾ ಚಿಂತನಗಳಾದ ರಚನಾವಾದ(Constructive Approach)ಅಂದರೆ ಮಗು ತನ್ನ ಕಲಿಕೆಯನ್ನು ತಾನೇ ಕಟ್ಟಿಕೊಳ್ಳುವ ನೆಲೆಯಲ್ಲಿ ಜನಪದ ಪದ್ಧತಿಯನ್ನು ಸಮನ್ವಯಗೊಳಿಸಬಹುದಾಗಿದೆ.

4.1.5 ರಚನಾತ್ಮಕ ವಿಧಾನ

ಹೊಸ ಪಠ್ಯಕ್ರಮಗಳು ರಾಷ್ಟ್ರೀಯ ಪಠ್ಯಕ್ರಮ ನೀತಿ 2005ರ ಅನ್ವಯ

ರಚನೆಗೊಳ್ಳುತ್ತಿರುವುದನ್ನು ಗಮನಿಸಿದಾಗ ಅಲ್ಲಿರುವ ರಚನಾ ಸಿದ್ಧಾಂತ ಈ ಮೊದಲೇ ಜನಪದ ಕಲಿಕೆಯಲ್ಲಿದ್ದುದು ತಿಳಿದು ಬರುತ್ತದೆ. ಇಲ್ಲಿ ಕಲಿಕಾರ್ಥಿಗೆ ತಾನು ಕಲಿಯಬೇಕಾದ ವಸ್ತು ಮುಂದಿರುತ್ತದೆ. ಅದರೆ ನಿರ್ದಿಷ್ಟ ಗುರುವಾಗಲಿ, ಕಾಲವಾಗಲಿ ಇರುವುದಿಲ್ಲ. ವಸ್ತುವನ್ನು ಪರಿಸರದ ಯಾವುದೇ ಮೂಲದಿಂದಲಾದರೂ ಕಲಿಕಾರ್ಥಿ ಕಲಿಯಲು ಅವಕಾಶವಿದೆ. ಹಾಗೆಂದು ಒತ್ತಡವಾಗಲಿ, ನಿರ್ದಿಷ್ಟ ಕಾರ್ಯಸೂಚಿಯಾಗಲಿ ಇರುವುದಿಲ್ಲ. ಇಲ್ಲಿ ಕಲಿಕಾರ್ಥಿ ತನ್ನ ಜ್ಞಾನವನ್ನು ತಾನೇ ಕಟ್ಟಿಕೊಳ್ಳುತ್ತಾನೆ. ಅದಕ್ಕೆ ಪೂರಕವಾದ ಚಟುವಟಿಕೆಯನ್ನು ಕಲಿಕಾರ್ಥಿಗಳು ಕಲಿಕಾ ವ್ಯಾಪ್ತಿಯಲ್ಲಿ ಪ್ರದರ್ಶಿಸುತ್ತಿದ್ದುದೂ ಇದೆ. ಜನಪದ ಆಚರಣೆಗಳಲ್ಲಿ ಇದಕ್ಕೆ ಹೆಚ್ಚಿನ ಮಹತ್ವವಿದ್ದುದನ್ನು ಗುರುತಿಸಬಹುದು. ಇದೇ ಜನಪದರ ರಚನಾತ್ಮಕತೆ ಈ ರಚನಾ ಸ್ವರೂಪದ ಕಲಿಕೆಯು ಸ್ವಯಂ ಕಲಿಕೆಯ ಪ್ರೇರಣೆಯೂ ಹೌದು. ಆದ್ದರಿಂದ ರಚನಾವಾದ ಏನನ್ನು ಇಂದು ಹೇಳುತ್ತಿದೆಯೋ ಅದನ್ನು ಈಗಾಗಲೇ ಜನಪದ ಸಾಹಿತ್ಯ ಶಿಕ್ಷಣ ಹೇಳಿದೆ.

ಅಧ್ಯಾಯ 5

ಉಪಸಂಹಾರ

5.1 ಅಧ್ಯಯನದ ಪರಿಮಿತಿ

ಪ್ರಸ್ತುತ ಅಧ್ಯಯನವನ್ನು ಎರಡು ರೀತಿಯಿಂದ ನೋಡಬೇಕಾದ ಅಗತ್ಯವಿದೆ. ಒಂದು ಸಾಹಿತ್ಯದ ರಚನೆಯ ಕಲಿಕೆಯ ಹಿನ್ನಲೆಯಲ್ಲಿ, ಇನ್ನೊಂದು ಕಲಿಕಾರ್ಥಿಯ ಸಮಗ್ರ ವ್ಯಕ್ತಿತ್ವವನ್ನು ರೂಪಿಸುವ ನೆಲೆಯಲ್ಲಿ. ಇಲ್ಲಿ ಎರಡನ್ನೂ ಗಮನಿಸುತ್ತಾ ವಿಶ್ಲೇಷಿಸಲಾಗಿದೆ. ಆದರೆ ಇದು ಸಮಗ್ರವಲ್ಲ. ಅಧ್ಯಯನದ ವ್ಯಾಪ್ತಿ ದೊಡ್ಡದಾದರೂ ಅದಕ್ಕೆ ಬಳಸಿಕೊಂಡ ವಿಷಯವಸ್ತು ಸೀಮಿತವಾದುದು. ಅಂದರೆ ಇಲ್ಲಿ ಕೇವಲ ಜನಪದ ಸಾಹಿತ್ಯದ ಕಲಿಕೆಯನ್ನು ಮಾತ್ರ ಪರಿಗಣಿಸಿ ಶಿಕ್ಷಣದ ವಿಭಿನ್ನ ಮುಖಗಳನ್ನು ಪರಿಚಯಿಸಲಾಗಿದೆ. ಆದರೆ ಜಾನಪದ ಎನ್ನುವ ವಿಷಯ ವ್ಯಾಪ್ತಿ ಬಹಳ ದೊಡ್ಡದು ಮತ್ತು ಶಿಕ್ಷಣದ ವ್ಯಾಪ್ತಿಯೂ ಅಷ್ಟೇ ವಿಸ್ತೃತವಾದುದು. ಈ ವಿಶಾಲ ವ್ಯಾಪ್ತಿಯ ಎರಡು ಕ್ಷೇತ್ರಗಳಲ್ಲಿ ಸಾಹಿತ್ಯದ ವ್ಯಾಪ್ತಿಗೆ ಸೀಮಿತಗೊಳಿಸಲು ಕಾರಣವಿದೆ. ಸಾಮಾನ್ಯವಾಗಿ ಭಾಷೆ ಮತ್ತು ಸಾಹಿತ್ಯ ಎಲ್ಲಾ ಕಲಿಕೆಯ ಮೂಲವಾಗಿರುತ್ತದೆ. ಇವೆರಡರಲ್ಲಿ ಹಿಡಿತ ಸಾಧಿಸಿದ ಕಲಿಕಾರ್ಥಿ ಉಳಿದ ವಿಷಯ ಜ್ಞಾನವನ್ನು ಗಳಿಸುವುದಕ್ಕೆ ಸುಲಭ ಸಾಧ್ಯವಾಗುತ್ತದೆ. ಆದರೆ ಇವೆರಡನ್ನು ಗಳಿಸುವುದಕ್ಕೆ ಒಂದಷ್ಟು ಸವಾಲುಗಳೂ ಇವೆ. ಆದ್ದರಿಂದಲೇ ಇಂದಿಗೂ ಕಲಿಕೆ ನಿರೀಕ್ಷಿತ ಫಲವನ್ನು ಶೈಕ್ಷಣಿಕ ವ್ಯವಸ್ಥೆಯಲ್ಲಿ ನೀಡದೇ ಇರುವುದು. ವಿಷಯವನ್ನು ಮುಖ್ಯವಾಗಿ ಕಲಿಯಬೇಕಾದ ಓರ್ವ ಕಲಿಕಾರ್ಥಿ ಭಾಷೆಯನ್ನು ಮತ್ತು ಅನುಭವಜನ್ಯವಲ್ಲದ ವಸ್ತುವನ್ನೂ ಕಲಿಯಬೇಕಾಗುತ್ತದೆ. ತಾನು ಎಂದೂ ಕೇಳದ ನೋಡದ ಮತ್ತು ಅನುಭವಿಸದ ವಿಷಯ ಪಠ್ಯವಾಗಿರುವುದೇ ಕಲಿಕಾರ್ಥಿಯ ಸವಾಲು. ಈ ಸವಾಲು ಜನಪದ ಸಾಹಿತ್ಯ ಕಲಿಕೆಯ ಕಲಿಕಾರ್ಥಿಗೆ ಎಂದೂ ಬಂದಿರುವುದಿಲ್ಲ. ಆದ್ದರಿಂದ ಜಾನಪದ ಕ್ಷೇತ್ರವನ್ನು ಸಮಗ್ರವಾಗಿ ಪರಿಗಣಿಸಿ ಅಧ್ಯಯನ ನಡೆಸಿ ಔಪಚಾರಿಕ ಶಿಕ್ಷಣದ ಎಲ್ಲಾ ವಿಷಯಗಳಿಗೂ ವಿಸ್ತರಿಸಲು ಸಾಧ್ಯವಾದರೆ ಕಲಿಕಾರ್ಥಿ ಹೆಚ್ಚು ಪಡೆದುಕೊಳ್ಳಲು ಸಾಧ್ಯವಿದೆ. ಆದರೆ ಈ ಅಧ್ಯಯನ ಕೆಲವೊಂದು ಮಿತಿಗಳಿಂದಾಗಿ ಅಷ್ಟೊಂದು ವಿಸ್ತೃತವಾಗಿಲ್ಲ.

ಜನಪದರ ವ್ಯಕ್ತಿತ್ವದ ಹಿನ್ನಲೆಯಲ್ಲಿ ಜನಪದ ಸಾಹಿತ್ಯವನ್ನು ವಿಶ್ಲೇಷಿಸಿದ್ದಲ್ಲಿ ಇಲ್ಲಿಯ ದುಡಿಯುವ ವರ್ಗದ ಸಂಸ್ಕೃತಿ ಪ್ರಮುಖ ಪಾತ್ರ ವಹಿಸಿರುವುದು ಕಂಡುಬರುತ್ತದೆ. ಆದರೆ ಅಧ್ಯಯನದಲ್ಲಿ ಅದಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದಿಲ್ಲ. ಆದ್ದರಿಂದ ಇಲ್ಲಿ ಚರ್ಚಿಸಿರುವ ವಿಚಾರಗಳು ಮುಖ್ಯವಾಗಿ ಜನಪದ ಸಾಹಿತ್ಯ ಶಿಕ್ಷಣದ ಎರಡು ಕೌಶಲಗಳು ಮಾತ್ರವಾಗಿವೆ. ಆದರೆ ಮೌಖಿಕ ಕೌಶಲಗಳಿಗೆ ಇಲ್ಲಿ ಹೆಚ್ಚಿನ ಆದ್ಯತೆ ನೀಡಿರುವುದಿಲ್ಲ. ಯಾಕೆಂದರೆ ಜನಪದ ಸಾಹಿತ್ಯದ ಕಲಿಕೆಯಲ್ಲಿ ಮೌಖಿಕತೆಯು ಒಂದು ಸೂತ್ರವಾಗಿರುವುದೇ ಇದಕ್ಕೆ ಕಾರಣ. ಅಲ್ಲದೇ ವ್ಯಕ್ತಿತ್ವದ ರೂಪೀಕರಣದಲ್ಲಿ ಅಭಿವ್ಯಕ್ತಿಗಿಂತ ಆಲಿಸುವಿಕೆಯೇ ಮುಖ್ಯವಾದುದು. ಆಲಿಸುವಿಕೆಯಿಂದ ಕಲಿಕೆ ನಡೆಯುದರಿಂದ ಅಭಿವ್ಯಕ್ತಿಗೊಳ್ಳದಿದ್ದರೂ ಕಲಿಕಾರ್ಥಿಯ ಮೇಲೆ ಅದು ಪರಿಣಾಮ ಬೀರಿಯೇ ಬೀರುತ್ತದೆ.

ಈ ರೀತಿಯ ಪರಿಣಾಮ ಆತನ ವ್ಯಕ್ತಿತ್ವ ರೂಪಿಸಲು ಸಹಕಾರಿಯಾಗುತ್ತದೆ. ಎಲ್ಲಾ ಶಿಕ್ಷಣದ ಮೂಲ ಗುರಿ ವ್ಯಕ್ತಿತ್ವದಲ್ಲಿನ ಬಲಾವಣೆಯೇ ಆಗಿರುವುದರಿಂದ ಇಲ್ಲಿ ಅಭಿವ್ಯಕ್ತಿ ಎರಡನೇಯದ್ದಾಗಿದೆ.

5.2 ಅಧ್ಯಯನದ ಫಲಿತಗಳು

ಈ ಅಧ್ಯಯನವು ಆಧುನಿಕ ಶಿಕ್ಷಣದ ಹಿನ್ನಲೆಯಲ್ಲಿ ನೋಡಲಾಗಿದೆ. ವಿಸ್ತೃತವಾದ ಅಧ್ಯಯನ ಅಲ್ಲದಿದ್ದರೂ ವಿಷಯ ವ್ಯಾಪ್ತಿಯ ನೆಲೆಯಲ್ಲಿ ತನ್ನದೇ ಆದ ಫಲಿತವನ್ನು ನೀಡಿದೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

ಮಗುವಿನ ಕಲಿಕೆ ಎಂದರೆ 1.ಸಂತಸದಾಯಕವಾದುದು 2.ಒತ್ತಡ ರಹಿತವಾದುದು 3.ಕಾಲಾತೀತವಾದುದು 4.ಸೂತ್ರಾತ್ಮಕವಾದುದು 5.ಅನುಭವ ಜನ್ಯವಾದುದು ಎನ್ನುವ ಅಂಶಗಳನ್ನು ಈ ಅಧ್ಯಯನದಿಂದ ತಿಳಿಯಲಾಗಿದೆ. ತನ್ನ ವಸ್ತು ಮತ್ತು ರಚನೆಯ ಮೂಲಕ ಜನಪದ ಸಾಹಿತ್ಯವು ಕಲಿಕಾರ್ಥಿಯಲ್ಲಿ ಸಂತಸವನ್ನು ಮೂಡಿಸುತ್ತದೆ. ಆಸಕ್ತನಿಗೆ ಮಾತ್ರ ಕಲಿಯಲು ಅವಕಾಶವಿರುವ ಕಾರಣ ಅದು ಒತ್ತಡ ರಹಿತವಾಗಿದೆ. ಕಲಿಕೆಗೆ ಯಾವುದೇ ಸಮಯದ ಮಿತಿ ಇಲ್ಲದ ಕಾರಣ ಅದು ಕಾಲಾತೀತವಾಗಿದೆ. ಜನಪದ ಸಾಹಿತ್ಯ ನಿರ್ದಿಷ್ಟವಾದ ಸೂತ್ರದ ಮೂಲಕ ರಚನೆಗೊಂಡಿದ್ದರೆ ಮಾತ್ರ ಅದನ್ನು ಕಲಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಅದು ಸೂತ್ರಾತ್ಮಕವಾದುದು. ಜನಪದ ಸಾಹಿತ್ಯದ ಪಠ್ಯವಸ್ತು ವ್ಯಕ್ತಿಯಿಂದ ವ್ಯಕ್ತಿಗೆ ಹರಿದು ಬಂದ ಜೀವನ ವಿಧಾನ ಸಂಗತಿಗಳೇ ಆಗಿರುವುದರಿಂದ ಅದು ಅನುಭವಜನ್ಯವಾದುದು ಎನ್ನುವುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲು ಸಾಧ್ಯವಾಗಿದೆ.

ಈ ಅಧ್ಯಯನ ವೈಜ್ಞಾನಿಕ ವಾದಗಳ ಹಿನ್ನಲೆಯಲ್ಲಿ ರಚನೆಗೊಂಡಿರುವ ಶೈಕ್ಷಣಿಕ ಸಿದ್ಧಾಂತಗಳು ಮತ್ತು ಅನುಭವದ ಹಿನ್ನೆಲೆಯಲ್ಲಿ ರೂಪಿಸಿರುವ ಜನಪದ ವಸ್ತು ಮತ್ತು ಕಲಿಕೆಯನ್ನು ಮುಖಾಮುಖಿಗೊಳಿಸಿದೆ. ತುಳು ಜನಪದ ಸಾಹಿತ್ಯ, ಅದರ ವ್ಯಾಪ್ತಿ, ವಸ್ತು, ಬೋಧನ ಮತ್ತು ಕಲಿಯುವ ವಿಧಾನಗಳ ಮೂಲಕ ಅದು ಹೇಗೆ ಔಪಚಾರಿಕ ಕಲಿಕೆಗೆ ಮೂಲವಾಗಿದೆ, ಹಾಗೆ ಶೈಕ್ಷಣಿಕ ಸಿದ್ಧಾಂತಗಳಿಗೆ ಹೇಗೆ ಪ್ರೇರಣೆಯಾಗಿದೆ, ಆದರೆ ಈ ಬೇರೆಬೇರೆ ಸಿದ್ಧಾಂತಗಳ ಹೆಸರಿನಲ್ಲಿ ಹೇಳಲ್ಪಟ್ಟಿರುವ ವಿಚಾರಗಳು ಜಾನಪದ ಮೂಲದವುಗಳೇ ಆಗಿವೆ ಎನ್ನುವುದನ್ನು ಇಲ್ಲಿ ಮುಖ್ಯವಾಗಿ ಕಂಡುಕೊಳ್ಳಲಾಗಿದೆ.

ಜಾನಪದ ಮೂಲದಿಂದ ಸ್ವೀಕಾರಗೊಳಿಸಿ ಅದನ್ನು ವ್ಯವಸ್ಥಿತವಾಗಿ ಜೋಡಿಸಿ ಒಂದಷ್ಟು ಸಿದ್ಧಾಂತಗಳನ್ನು ಶೈಕ್ಷಣಿಕ ಕ್ಷೇತ್ರಕ್ಕೆ ತರಲಾಗಿದೆ ಎನ್ನುವುದು ಈ ಅಧ್ಯಯನದ ಮೂಲಕ ತಿಳಿಯಲಾಗಿದೆ. ಅಂದರೆ ಜನಪದ ಸಾಹಿತ್ಯದ ವಸ್ತು ಮತ್ತು ರಚನೆಯಲ್ಲಿ ವ್ಯತ್ಯಾಸವಿದ್ದರೂ ಸ್ವರೂಪ ಮಾತ್ರ ಜಾಗತಿಕವಾಗಿ ಏಕಪ್ರಕಾರವಾಗಿದೆ. ಆದ್ದರಿಂದ ಯಾವುದೇ ಸೂತ್ರ, ಸಿದ್ಧಾಂತ ಅಥವಾ ಪದ್ಧತಿಗಳಾದರೂ ಅಲ್ಲಿ ಪ್ರಾದೇಶಿಕತೆ ಗೌಣವಾಗಿರುತ್ತದೆ ಎನ್ನುವುದನ್ನು ಈ ಅಧ್ಯಯನದ ಮೂಲಕ ತಿಳಿದುಕೊಳ್ಳಲಾಗಿದೆ. ತುಳುನಾಡಿನ ಪಾಡ್ದನ, ಕಬಿತ, ಕನ್ನಡದ ಜನಪದ ಮಹಾಕಾವ್ಯ, ಜನಪದ ಹಾಡುಗಳು

ಅಥವಾ ಜಾಗತಿಕ ನೆಲೆಯಲ್ಲಿ ಗುರುತಿಸಿದ ಕಲೇವಾಲ, ಹೋಮರನ ಇಲಿಯೆಡ್, ಒಡೆಸ್ಸಿ ಇವೆಲ್ಲವುಗಳಲ್ಲಿ ಮುಖ್ಯವಾಗಿ ಪ್ರಾದೇಶಿಕ ವ್ಯತ್ಯಾಸಗಳಿವೆಯೇ ಹೊರತು ಆಶಯಗಳಲ್ಲಿ ವ್ಯತ್ಯಾಸಗಳಿಲ್ಲ. ಆದ್ದರಿಂದ ಇವುಗಳ ಕಲಿಕೆ ಜಗತ್ತಿನಾದ್ಯಂತ ಏಕಪ್ರಕಾರವಾಗಿಯೇ ನಡೆದಿದೆ ಎನ್ನುವುದನ್ನು ಈ ಅಧ್ಯಯನದಿಂದ ಸಮರ್ಥಿಸಿಕೊಳ್ಳಬಹುದು.

ಎರಡು ಕಲಿಕಾ ವಿಧಾನಗಳನ್ನು ವಿಸ್ತರಿಸುವ ಆ ಮೂಲಕ ತುಳುನಾಡಿನ ಮೂಲ ಹಾಗೂ ಸಹಜವಾದ ಕಲಿಕಾ ವಿಧಾನವೊಂದು ಬಹಳ ಪರಿಣಾಮಕಾರಿ ಎಂದು ತಿಳಿಸುವ ಕಾರ್ಯವನ್ನು ಇಲ್ಲಿ ಮಾಡಲಾಗಿದೆ. ಕೇವಲ ಒಂದು ಕೌಶಲವು ಶಿಕ್ಷಣ ವ್ಯವಸ್ಥೆಯಲ್ಲಿ ಇಷ್ಟೊಂದು ಪರಿಣಾಮ ಬೀರುವುದಾದರೆ ಶಿಕ್ಷಣದ ಹೆಸರಿನಲ್ಲಿ ಇಂದು ನಡೆಯುತ್ತಿರುವ ಇಷ್ಟೆಲ್ಲಾ ಕಸರತ್ತುಗಳು ವ್ಯರ್ಥವೇ ಆಗಿದೆ ಎನ್ನುವುದನ್ನು ಈ ಅಧ್ಯಯನ ತಿಳಿಸುತ್ತದೆ. ನಾಲ್ಕು ಕೌಶಲಗಳನ್ನು ಇಟ್ಟುಕೊಂಡರೂ ಶಿಕ್ಷಣ ವ್ಯವಸ್ಥೆಯನ್ನು ನಿರೀಕ್ಷಿತ ಮಟ್ಟಕ್ಕೆ ತಂದು ನಿಲ್ಲಿಸಲು ಸಾಧ್ಯವಾಗಿಲ್ಲ ಎನ್ನುವ ವಾಸ್ತವಾಂಶವನ್ನು ತಿಳಿಸಲು ಈ ಅಧ್ಯಯನದಿಂದ ಸಾಧ್ಯವಾಗಿದೆ. ಜಾನಪದ ಕಲಿಕಾ ವಿಧಾನದ ಸೂತ್ರಗಳ ಹಿನ್ನೆಲೆಯಲ್ಲಿ ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಕಟ್ಟಿಬೆಳೆಸಲು ಸಾಧ್ಯವಾದದ್ದೇ ಆದರೆ ಆಧುನಿಕ ಶಿಕ್ಷಣ ವ್ಯವಸ್ಥೆಯೂ ಮೇಲ್ತರದಲ್ಲಿ ನಿಲ್ಲಲು ಸಾಧ್ಯವಿದೆ ಎನ್ನುವುದು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

ತುಳುನಾಡು ಶೈಕ್ಷಣಿಕವಾಗಿ ಅತ್ಯಂತ ಮುಂದುವರಿದ ನಾಡೆಂದು ಇಂದಿಗೂ ಪ್ರಸಿದ್ಧಿಯನ್ನು ಪಡೆದಿದೆ. ಇದಕ್ಕಿರುವ ಕಾರಣಗಳನ್ನು ಪಟ್ಟಿ ಮಾಡುವುದೇ ಆದರೆ ಇಲ್ಲಿಯ ಜನಪದ ಸಾಹಿತ್ಯದ ಕೊಡುಗೆಯನ್ನೂ ಅಲ್ಲಗಳೆಯುವಂತಿಲ್ಲ. ಅಂದರೆ ಉನ್ನತ ಮತ್ತು ಸಾಹಸಮಯ ವ್ಯಕ್ತಿತ್ವದ ವರ್ಣನೆ ಮಾಡುವ ಪಾಡ್ದನಗಳು ಹೊಸತು ಹಾಗೂ ಬೌದ್ಧಿಕತೆಗೆ ಒತ್ತು ನೀಡುವ ಅಂಶಗಳನ್ನು ಒಳಗೊಂಡಿರುತ್ತವೆ. ಆದ್ದರಿಂದಾಗಿ ಇಲ್ಲಿಯ ಜನರಲ್ಲಿ ಕಲಿಕೆ ಅತ್ಯಂತ ಪುರಾತನವಾಗಿಯೇ ಬೆಳೆದು ಬಂದಿದೆ ಎಂದು ಸಮರ್ಥಿಸಬಹುದು. ಇಲ್ಲಿಯ ವೃತ್ತಿ ಮತ್ತು ಆರಾಧನೆ ಕೇವಲ ವ್ಯವಹಾರ ಮತ್ತು ಭಾವನೆಗೆ ಸಂಬಂಧಿಸುವುದು ಮಾತ್ರವಾಗಿರದೇ ಅರಿವಿನ ದಾರಿಯನ್ನು ತೋರಿಸುವ ವಿಷಯಗಳೂ ಆಗಿವೆ. ಬದುಕಿನ ವಿಭಿನ್ನ ಮಾರ್ಗಗಳಿಗೆ ದಿಕ್ಸೂಚಿಯಾಗಿ ನಿಲ್ಲುವ ಸಾಮರ್ಥ್ಯ ತುಳು ಜನಪದ ಸಾಹಿತ್ಯಕ್ಕಿದೆ ಎನ್ನುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಒಟ್ಟಿನಲ್ಲಿ ಈ ಅಧ್ಯಯನದಲ್ಲಿ ಒಂದು ಪ್ರಾದೇಶಿಕ ಭಾಷೆ, ಪ್ರಾದೇಶಿಕ ವಸ್ತು(ಪಠ್ಯ), ಸ್ವವೇಗ, ಸ್ವಕಲಿಕೆ ಮತ್ತು ಕುತೂಹಲಕಾರಕ ನಿರೂಪಣೆ (ಬೋಧನೆ)ಯ ಮೂಲಕ ಕಲಿಕೆಯನ್ನು ಗಟ್ಟಿಗೊಳಿಸಲು ಸಾಧ್ಯವಿದೆ, ಈ ವಿಧಾನವನ್ನು ಇಂದಿನ ಶಿಕ್ಷಣದಲ್ಲಿ ಹೆಚ್ಚು ಬಳಸಿಕೊಳ್ಳಬೇಕಾದ ಅನಿವಾರ್ಯವಿದೆ ಎನ್ನುವುದನ್ನು ತಿಳಿದುಕೊಳ್ಳಲಾಗಿದೆ.

****

ಅನುಬಂಧಗಳು :

1.ಸಾಂಸ್ಕೃತಿಕ ವಿವರಣೆ

1. ಉರಲ್‌ಗಳ ರಚನೆ

1. ಆಟಿದ ಆದ್ರೇಗೆ ಸೋಣದ ಬೆಳಿಕ್ಕಿದವು
ಕುಂಞಿ ದೆಕ್ಕುಲೆ ಕುಂಟು ಬೊಲ್ಲೊಡು ಪೋಪುಂಡು ಓ ಓ ಓ ವ್ವಾ
(ಆಟಿಯ ತೇವ ಅಂತೆ ಶ್ರಾವಣದ ಬಿಸಿಲಂತೆ
ಕುಂಞ ಒಡೆಯನ ಬಟ್ಟೆ ನೆರೆಯಲ್ಲಿ ಹೋಗುತ್ತದೆ)

2. ಆಯಿರೆಗ್ ಪೋನಾಗ ಮಗಾ ಆಜಿಕಟ್ಟಬಡು
ಈಯರೆಗ್ ಬನ್ನಾಗ ಮಗಾ ಮೂಜಿಕಟ್ಟಬಡು ಓ ಓ ಓ ವ್ವಾ
(ಆಚೆಕರೆಗೆ ಹೋಗುವಾಗ ಆರುಕಟ್ಟು ಬೆತ್ತ
ಈಜೆ ಕರೆಗೆ ಬರುವಾಗ ಮಗಾ ಮೂರು ಕಟ್ಟು ಬೆತ್ತ)

3. ಬಿರಣನ ಬಂಜಿಯವು ಎರ್ಮೆದ ಕಂಜಿಗೆ
ಬ್ಯಾರಿನ ಮಂಡೆವು ತಾರಿದಾ ಕಂಡೆಗೆ ಓ ಓ ಓ ವ್ವಾ
(ಹಾರುವನ ಹೊಟ್ಟೆ ಎಮ್ಮೆಯ ಕರುವಿನಂತೆ
ಬ್ಯಾರಿಯ ತಲೆ ತಾಳೆಯ ಗಡ್ಡೆಯಂತೆ)

4. ಬಾರೆದ ಪುಂಡುಡೂ ಬಾವೋಲಿ ರಾಪುಂಡು
ಬ್ಯಾರಿನ ಮಂಡೆಗ್ ತೆಡಿಲ್ ಬೂರ್‌ದ್‌ಂಡ್ ಓ ಓ ಓ ವ್ವಾ
(ಬಾಳೆಯ ಹಿಂಡಿನಿಂದ ಬಾವಲಿ ಹಾರುತ್ತದೆ.
ಬ್ಯಾರಿಯ ತಲೆಗೆ ಸಿಡಿಲು ಬಡಿದಿದೆ)

5 . ಬೈಲ್ ಕಂಡೊಗು ಬೈಯಗ್ ಮುಟ್ಟಾ ಪೋಯಿಮಗಾ
ಕಂಪ ಕಂಡೊಗು ಮಧ್ಯಾಹ್ನ ಮುಟ್ಟಾ ಪೋಯಿಮಗಾ ಓ ಓ ಓ ವ್ವಾ
(ಬೈಲು ಗದ್ದೆಗೆ ಸಂಜೆಯವರೆಗೆ ಉಳುತ್ತಾ ಸಾಗೋಣ
ಕಂಪ ಗದ್ದೆಗೆ ಮಧ್ಯಾಹ್ನ ವರೆಗೆ ಉಳುತ್ತಾ ಸಾಗೋಣ)

6. ಎಂಕುಳೆ ಉಳ್ಳಾಯೆ ಊರುಗಾತಿ ಬಾರಗೆ
ಅರೆಗೊಂಜಿ ಕಾಣಿಕೆ ಪೊಟ್ಟು ತಾರೆಗೆ ಓ ಓ ಓ ವ್ವಾ
(ನಮ್ಮ ಒಡೆಯ ಊರಿಗಾಗುವ ಯಜಮಾನ
ಅವರಿಗೊಂದು ಕಾಣಿಕೆ ಹಾಳು ತೆಂಗಿನಕಾಯಿ)

7 .ಕಲಿಪರಿ ಮುಟ್ಟಾಲೆ ಮಂಜಡೊರಿಂಡವು
ನಿಕ್ಕ್‌ತೂಯಿ ದಿಕ್ಕಾಲ್ ಕೇರಿ ಡೊರಿದ್‌ಂಡ್‌ಗೆ ಓ ಓ ಓ ವ್ವಾ
(ಕಳ್ಳು ಕುಡಿದ ಮುಟ್ಟಾಳೆ ಮಂಜದಲ್ಲುಳಿಯಿತು
ನಿನಗೆ ನೋಡಿದ ಹೊಲೆತಿ ಕೇರಿಯಲ್ಲುಳಿಯಿತು)

8 . ಗಾಳಿಗಪ್ಪಾ ಪೋಪುಂಡೋ ಗೋಳಿದಾ ಗೆಲ್ಲ್
ದೋಲುಗಪ್ಪಾ ನಲಿತ್ತುವೇ ಜವ್ವನಾ ದಿಕ್ಕೇ ಓ ಓ ಓ ವ್ವಾ
(ಗಾಳಿಗೆ ಹೋಗುತ್ತದೆ ಗೋಳಿಯ ಗೆಲ್ಲು
ದೋಲಿಗೆ ಕುಣಿಯುತ್ತಾನೆ ತರುಣ ಹೊಲೆಯ)

9. ತೆಲಿ ಮೈಪಿ ದೆತ್ತಿಗೆ ಕುಲೆದರಿಪ್ಪಂಡೊ
ದರಿತ್ತ್‌ಂಡಲ ದರಿಪ್ಪಡ್ ತೆಲಿಮಯಿಪೂಲೆ ಓ ಓ ಓ ವ್ವಾ
ತೆಳಿ ಹ್ಯೊಯುವ ಯಜಮಾನಿಗೆ ಕುಲೆ ಹೆದರಿಸಿತಂತೆ
ಹೆದರಿಸಿದ್ರೂ ಹೆದರಿಸಲಿ, ತಿಳಿ ಹ್ಯೊದು ಬಿಡಿ

10. ನಮ್ಮ ಗೋಣವು ಗೋದಿ ಕುಡು ತಿಂದೆಗೆ
ಗೋದಿ ಕುಡು ತಿಂದ್‌ದ್ ದರಿಕುಂಟ ಪೊರ್ರುಗೆ ಓ ಓ ಓ ವ್ವಾ
(ನಮ್ಮ ಕೋಣ ಗೋದಿ ಹುರುಳಿ ತಿಂದನಂತೆ
ಗೋದಿ ಹುರುಳಿ ತಿಂದು ಕಟ್ಟಿದ ಗೂಟ ಕೀಳುತ್ತಾನೆ.)

11. ಪಟ್ಟೆ ಪರಿತೆರ್ ಪಾವಡೆ ಪಾಡ್ಯೆರ್ ಬೊಳ್ಳಾಗ್
ಕಂಚಿ ದರಿತೆರ್ ಕನ್ನಡಿ ಪಾಡ್ಯೆರ್ ಕಾಳಗ ಓ ಓ ಓ ವ್ವಾ
(ಪಟ್ಟೆ ಹರಿದರು ಶಾಲು ಹೊದೆಸಿದರು ಬೊಳ್ಳನಿಗೆ
ಕಂಚಿ ಒಡೆದರು ಕನ್ನಡಿ ಹಾಕಿದರು ಕಾಳನಿಗೆ)

12. ಪೊಯ್ಯ ಕಂಡೋಟು ಪೋಯಳಿಪ್ಪಡಾ
ಚಂಪ ಕಂಡೋಟು ಕುಂಪೊಳಿಪ್ಪಡಾ ಓ ಓ ಓ ವ್ವಾ
(ಹೊಯ್ಗೆ ಗದ್ದೆಯಲ್ಲಿ ....
ಕಂಪ ಗದ್ದೆಯಲ್ಲಿ ....)

13. ಮಾದಿಮರ್‌ಗಿಲ್ ಪುಳೆವೊಂಡು
ಕುಬರ ಕೊಡ್ಯಾಗ್ ಕೊಂಬುಡು ಮಣ್ಣಾಪುಂಡು ಓ ಓ ಓ ವ್ವಾ
(ಹೊರಳುವಾಗ ಭುಜವು ಸೇದುತ್ತದೆ
ಕೊಡ್ಯ ಎತ್ತಿಗೆ ಕೊಂಬಲ್ಲಿ ಮಣ್ಣಾಗುತ್ತದೆ)

14. ಮಧ್ಯಾಹ್ನ ಮಾಲ್‌ಂಡ್ ಮಗಾ ಎರುವೊ
ಪೊರ್ತ್ತು ಪೋಪುಂಡು ಮಗಾ ಓ ಓ ಓ ವ್ವಾ
(ಮಧ್ಯಾಹ್ನ ಸುರಿಯುತ್ತದೆ ಮಗಾ ಎತ್ತೇ
(ಹೊತ್ತು ಹೋಗುತ್ತದೆ ಮಗಾ ಎ)

15. ಮಾನೊಗೂ ಬಲ್ಲಾಳೆಗೆ ಅಡಿಯೆನ
ಮಂದ ತೆಲಿಕ್ಕ್ ಉಪ್ಪುಪಾಡ್ತ್ ಪರಿಯೆನ ಓ ಓ ಓ ವ್ವಾ
(ಮರ್ಯಾದೆಗೆ ಬಲ್ಲಾಳರನ್ನು ಮದವೆಯಾದನೇ
ಗಂಜಿಯ ದಪ್ಪ ತಿಳಿಗೆ ಉಪ್ಪು ಹಾಕಿಕುಡಿದನೇ)

16. ಮುಂಗಾರಗ್ ಸಿಂಗಾರ ಗುಜ್ಜೆರೆ ಕೆದುಗೆ
ಕದ್‌ರಗ್ ಸಿಂಗಾರ ಕಂಚಿ ದೀಪಲಂದ್ ಓ ಓ ಓ ವ್ವಾ
(ಮುಂಗಾರ ಕೆಯಿ ಸಿಂಗಾರ ಗುಜ್ಜರ ಕೆರೆಯಂತೆ
ತೆನೆಗೆ ಸಿಂಗಾರ ಕಂಚಿಯ ದೀಪವಂತೆ)

17. ಸಮ್ಮಾಲೆ ಮಗಲ್ ಧರ್ಮದಾರಗೆವು
ಪಂಚೋಲ ಬಚ್ಚಿರೆಗೆ ಪಂಚದಾರಗೆವು ಓ ಓ ಓ ವ್ವಾ
(ಮಾವನ ಮಗಳು ಧರ್ಮ ಧಾರೆಯಂತೆ
ಪಂಚೋಲಿ ಹೊಟ್ಟೆಬಾಕನಿಗೆ ಪಂಚ ಧಾರೆಯಂತೆ)

2. ಮಾದರಿ ಕಬಿತ

ಓ ಬೇಲೆ – (ಸಣ್ಣಕ್ಕ ಬಂಗ್ಲೆಗುಡ್ಡೆ ಸುಳ್ಯ)
ಓ ಬೇಲೆ ॥ಪಲ್ಲವಿ॥
ಓ ಓಬೇಲೆ ಪನ್ಲೇ
ಓ ನೇಜಿ ನಡುವೋ
ಓ ಸೋಬಾನೇ ಪನ್ಲೇ
ಓ ರಾಗಿನ ಬೀಸುವೋ
ಓ ಬೈರೆರ ಗುಡಿಟ್
ಓ ಬಂತೂತ್ ಪಂಣ್‌ಲಾ
ಓ ಮೇರಂದಟ್ಟಿಗೆಟ್
ಓ ಕುಳತ್ ಪಣ್‌ಲಾಂದ್
ಓ ಪಂಡೇರೆ ಉಳ್ಳಾಯೇ
ಓ ಪೋಪೆನೋದಿಕ್ಕೆ
ಓ ಮೂಡಾಯಿ ಪೋಪೆನೋ
ಓ ಬೈರೆತ್ತಿ ಗುಡಿಟ್
ಓ ಲಂದೋಯ ಲಂದೋಯ
ಬರುವೆ
ಓ ಬೈರತ್ತಿ ಪೊಣ್ಣುಲೇ
ಓ ನಿಕ್ಕುಲೆ ಬೈರರ್
ಓ ಓಡೆಗ್ ಪೋಪೆರೋ
ಓ ನೇಜಿಗ್ ನನ
ಓ ಬರುವೆರೊಂದ್ ಕೇಂಡೇ
ಓ ಮಣ್ಣ ಬೇಲೆಗ್
ಓ ಪಂಡೆರೋ ಬೈರೆತ್ತಿ
ಓ ಪಡ್ಡೇಯಿ ಪೋಯೀ
ಓ ಮೇರೆರೆ ದಟ್ಟಿಗೆಟ್
ಓ ಕುಳ್‌ತ್ ಪಂಡೇ

ಓ ಜವಾನರೇ
ಓ ನಿಕ್‌ಲೆ ಓಬೇಲೆ
ಓ ಕಂಡಾ ಕಡಪ್ಪೆ
ಓ ಕೇನಾಂತೆ ಪೋಂಡೋ
ಓ ಮುರ್ಲುಲೆಕಾವ
ಓ ಮುರ್ಳಾಡಿ ಜನೋ
ಓ ಬಡವುಟು ಬೀಸಾರೋ
ಓ ಒಂಜಾಲ್‌ದೆತ್ತೆ
ಓ ಕಳಿತಾನ ಗುತ್ತಿಗೆಟ್
ಓ ಅಡಾವುನನಾನ
ಓ ದೀಡಿಯೆನೋ ದಿಕ್ಕೇ
ಓ ಕಳಿನನ
ಓ ಪರಿಯೇನೋ ದಿಕ್ಕೇ
ಓ ಜನೋನ ಮುಂದೆ
ಓ ಕೊಂಡೋತ್
ಓ ಬೆತ್ತಾನೂ ಕೋಲು
ಓ ದೆತ್ತೊಂದು ಉಳ್ಳಾಯೇ
ಓ ಆಳ್‌ಗಣಿಪೇ
ಓ ಜನೂನ ಲೆಕ್ಕೋ
ಓ ಮಾಲ್ಪುನಾಗ ಉಳ್ಳಾಯಗ್
ಓ ಒಂಜಿನ ಜನೋ
ಓಕಡಿಮೆನ ಆತ್‌ಂಡ್
ಓ ದಾನೇನ ಮಾಲ್ತಾಯಾ
ಓ ಕೇಂಡೇರ್ ಉಳ್ಳಾಯೆ
ಓ ಬೆತ್ತಾನ ಕೋಲ್‌ಟ್

ಓ ನೇಜಿನನನ
ಓ ಬರುವರಾಂದ್ ಕೇಂಡೆ
ಓ ಬರೋಳೀಂದ್ ಪಂಡೆರೆ
ಓ ಮೂಡಾಯಿಡ್ದ್ ಮುಪ್ಪಾಳ್
ಲಾಚಾರೋ
ಓ ಪಡ್ಡೆಯಿಡ್ ಅಜಿಪ್ಪಾಳ್
ಓ ಪಿದಾಡ್‌ತ್ ಬರ್‌ವೇರ್
ಓ ಜನೋನ ಕೊಂಡು
ಓ ಬಣ್ಣಾಗ ದಿಕ್ಕಾಗ್
ಓ ಅಂಗಾತ್ ನೇಟ್ ಲಾಚಾರೋ
ಓ ಬತ್ತೇಂದ್ ಪಂಡೆ
ಓ ಜನೋನೇ ಮಂದೆ
ಓ ನೇಜಿತ ಕಂಡೋಗ್
ಓ ದತ್ತೇರ್‌ನನ
ಓ ಬೊಳಿಯರಿ ಬವಣೋ
ಓ ಕರುವಾತಿ ಜನೋಕ್
ಓ ಕಜೆ ಅರಿ ಬವಣೋ
ಓ ಮಲ್ಪಾಯೇರ್ ಉಳ್ಳಾಯೆ
ಓ ಕೊರ್‌ಪೇರ್ ಉಳ್ಳಾಯೆ
ಓ ಕತ್ತಾಲೆ ಲಾವೊಂತು
ಓ ಆತ್‌ಂಡ್ ಉಳ್ಳಾಯಾ
ಓ ಕಕ್ಕೆ ಕರೆಯಿಂಡ್
ಓ ಕಾನನ ರಾವುಂಡ್
ಓ ಭೂತೋಳು ಪೋಯೋ
ಓ ಮಾಡೋಟು ಲಾತ್‌ಂಡ್
ಓ ದೇವೆರ್ ಪೋಯೆರ್
ಓ ಗುಂಡೋಟುಲಾಯೆರ್
ಓ ಬಂತಾನನಾನ
ಓ ಪೋಪೆ ಉಳ್ಳಾಯೇ
ಓ ಬತ್ತೋನ ಬಾರ್
ಓ ಆಳ್ ಪುಲೇಂದ್ ಪನ್ ಪೇರ್
ಓ ರಡ್‌ಸೇರ್ ಬಾರ್
ಓ ಅರ್ಧ ಸೇರ್ ಅರಿಯೆ
ಓ ಒರಿಯಾಗ್‌ನನ
ಓ ಕೊರ್‌ಪೇರ್ ಉಳ್ಳಾಯೇ
ಓ ದೆತೊಂದ್ ನಾನ
ಓ ಪಾರೊಂದು ಬೂರೊಂದ್
ಓ ಪೋಪೆರ್ ಆವೋ
ಓ ದುಡಿವಲ್ಲಿಗೆ ಹೋದ್ರೆ

ಓ ಪೆಟ್‌ನೇ ಪಾಡ್ಯೇರ್
ಓ ದಮ್ಮಯ್ಯ ಉಳ್ಳಾಯ
ಓ ದಕ್ಕಯ್ಯ ಉಳ್ಳಾಯ
ಓ ಅಂಗತ್‌ನೇಟ್
ಓ ಬಡವುಟೆ ಬಿಸ್‌ರೋ
ಓ ಪೋಂಡು ಉಳ್ಳಾಯ
ಓ ಒಂಜಾಳ್‌ದೆತ್ತೇ
ಓ ಅಡಾವುನ ಕೊರಿಯೇ
ಓ ಕಳಿನ ಪರ್‌ತ್
ಓ ಅಗ್‌ಲೇನ ಅಗ್‌ಲೇನ
ಓ ಇಲ್‌ಗ್‌ನನ
ಓ ಪೋಪೇರ್‌ನನ
ಓ ಬೊಳುವಾಲೆ ಜನೋಕ್
ಓ ಬೇಲೆ ॥ಪಲ್ಲವಿ॥
ಓ ಬೇಲೆ ಹೇಳಿರಿ
ಓ ನೇಜಿಯ ನೆಡೋಣ
ಓ ಸೋಬಾನ ಹೇಳಿರಿ
ಓ ಮದುವೆಯ ಮಾಡೋಣ
ಓ ರಾಗವೇ ಹಾಕಿರಿ
ಓ ರಾಗಿ ಬೀಸುವೆವು
ಓ ಯುವಕರೇ
ಓ ನಿಮ್ಮ ಓ ಬೇಲೆ
ಓ ಗದ್ದೆಯ ಆಚೆಗೆ
ಓ ಕೇಳದೇ ಹೊಯಿತೇ
ಓ ಕುಂಬಾದ ಮರದಲ್ಲಿ
ಓ ದೊಡ್ಡೊಂದು ತುಂಬಿಯು
ಓ ಗುಂಯ್ಗುಡುವ ಹಾಗೆಯೇ
ಓ ಮುರ್ಳಾಡಿ ಮಂದಿ
ಓ ಧ್ವನಿ ಕೂಡಿ ಎಳೆಯೇ
ಓ ಧ್ವನಿಗದೋ ವಾಲೆ
ಓ ಯುವಕರೇ
ಓ ಬೇಲೆಯಪ್ಪ
ಓ ಸೊಲ್ಲಿಗೆ ಇದ್ದಾರೆ
ಓ ಸೂರ್ಯನ ಕಿರಣ
ಓ ಬೇಲೆಯಮ್ಮ
ಓ ಸೊಲ್ಲಿಗೆ ಇದ್ದಾಳೆ
ಓ ಓಡಿದಳೇ ಬಗ್ಗು
ಓ ನಮ್ಮ ಒಡೆಯ

ಓ ಹೇಳುವಾಗ ಇದ್ದಾರೆ
ಓ ನಾಕೂರು ಬೈಲು
ಓ ಭಂಡಾರಿ ಬಂಟರು
ಓ ಉಳ್ಳಾಯನ ಕುವರ
ಓ ಹೇಳುವಾಗ ಇದ್ದಾರೆ
ಓ ಸಿಟ್ಟಿನ ಗಡ್ಡೆ
ಓ ಕರಿಯ ಕುದುರೆ
ಓ ಇದ್ದಾರವ್ವ
ಓ ನಮ್ಮ ಒಡೆಯ
ಓ ನೇಜಿ ಹಾಕಿಸ್ತಾರೆ
ಓ ಗದ್ದೆ ಕೋರ್ಸಿದ್ದಾರೆ
ಓ ಹದಿನಾರು ಬೀಜ
ಓ ನೇಜಿಯನ್ನು
ಓ ಬೊಂಕಸಾಲೆ
ಓ ಬೀರಾಸಾಲೆ
ಓ ರಾಜಕಯಮ್ಮೆ
ಓ ನೇಜಿ ಹಾಕಿದರು
ಓ ನನ್ನ ಒಡೆಯಾ
ಓ ಮೂವತ್ತು ದಿನವೂ
ಓ ಮೂರನೇ ಗಂಟೆ
ಓ ಆಗಿದೆ ಈಗ
ಓ ನೇಜಿಗೆ ಜನ
ಓ ಇಲ್ಲದೇ ಅಗೋ
ಓ ನಮ್ಮ ಒಡೆಯ
ಓ ಓಡುವರು ಒಡೆಯ
ಓ ಕೆಳಗೊಮ್ಮೆ ಮೇಲೋಮ್ಮೆ
ಓ ಒಡುವರು ಒಡೆಯ

ಓ ಆಳುಗಳಲ್ಲಿ ಕೋಪ
ಓ ಮನೆಗೆ ಹೋದ್ರೆ
ಓ ಒಡತಿಯಲ್ಲಿ ಕೋಪ
ಓ ಕೋಪಿಸಿ ನಗೆದು
ಓ ಒಡತಿಯ ಬಸಿರಿ
ಓ ಆಗಿದ್ದಾಳಂತೆ
ಓ ಬಸಿರಲ್ಲಿ ಹಸಿವು
ಓ ಗಂಡು ಮಗುವೋ
ಓ ಹೆಣ್ಣು ಮಗುವೋ
ಓ ಗಂಡು ಮಗುವಾದರೆ
ಓ ಬೆಳಗಿನ ಹೊತ್ತಿನಲ್ಲಿ
ಓ ಏಳುತ್ತಾನೋ ಮಗು
ಓ ಕೈ ಮೋರೆಯನ್ನೇ
ಓ ತೊಳೆಯುವನೋ ಬಾಲ
ಓ ನೇಗಿಲು ಕೆಲಸ
ಓ ಮಾಡ್ತಾನ ಮಗುವು
ಓ ಹಾರೆ ಇಡುವ ಕೊಟ್ಟಾರಕ್ಕೆ
ಓ ಹೋಗುವನೋ ಮಗುವು
ಓ ಹಾರೆಯನ ತೆಗೆವ
ಓ ಹೆಗಲಲ್ಲಿ ಇಡುವ
ಓ ಸಣ್ಣೊಂದು ಗದ್ದೆಗೆ
ಓ ನೀರನ್ನು ಬಿಟ್ಕೊಂಡು
ಓ ಬರುವನೋ ಬಾಲ

ತುಳು: ನಿರೆಯಿಂಡ್ ಮೀನ್ ನಿರೆಯಿಂಡ್ ವಾವೂರಾ ಬೈಲ್‌ಟ್ ನಿರೆಯಿಂಡ್ ॥ಪ॥
ನಿರೆಯಿಂಡ್ ಮೀನ್ ನಿರೆಯಿಂಡ್ ಕುಡ್ಲದೂರ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕದ್ರಿದ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕಂಕನಾಡಿ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪಡಿಲ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಬಿ.ಸಿ.ರೋಡ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪಾಣೇರು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕಲ್ಲಡ್ಕ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಮಾಣಿ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕಬಕ ಬೈಲ್‌ಟ್ ನಿರೆಯಿಂಡ್

ನಿರೆಯಿಂಡ್ ಮೀನ್ ನಿರೆಯಿಂಡ್ ಉಬಾರ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪುತ್ತೂರು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಸಂಪ್ಯ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕುಂಬ್ರ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕಾವು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಅಮ್ಚಿನಡ್ಕ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪೆರ್ನಾಜೆ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಮುಗೇರ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಕನಕಮಜಲು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಜಾಲ್ಸೂರು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಅಡ್ಕಾರ್ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಬೈತಡ್ಕ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪೈಚಾರು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಸುಳ್ಯ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಸೋಣಂಗೇರಿ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಬೆಂಗಮಲೆ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಐವರ್ನಾಡು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ದರ್ಖಾಸು ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಬೆಳ್ಳಾರೆ ಬೈಲ್‌ಟ್ ನಿರೆಯಿಂಡ್
ನಿರೆಯಿಂಡ್ ಮೀನ್ ನಿರೆಯಿಂಡ್ ಪನ್ನ ಬೈಲ್‌ಟ್ ನಿರೆಯಿಂಡ್

ಕನ್ನಡ : ಸೇರಿತು ಮೀನು ಸೇರಿತು ಯಾವೂರು ಬೈಲಲ್ಲಿ ಸೇರಿತು ॥ಪ॥
ಸೇರಿತು ಮೀನು ಸೇರಿತು ಮಂಗಳೂರು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕದ್ರಿ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕಂಕನಾಡಿ ಬೈಲಲ್ಲಿ ಸೇರಿತು
ಸೇರಿತು ಮೀನು ಸೇರಿತು ಪಡಿಲ್ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಬಿ.ಸಿ.ರೋಡ್ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಪಾಣೆ ಮಂಗಳೂರು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕಲ್ಲಡ್ಕ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಮಾಣಿ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕಬಕ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಉಪ್ಪಿನಂಗಡಿ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಪುತ್ತೂರು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಸಂಪ್ಯ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕುಂಬ್ರ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಕಾವು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಅಮ್ಚಿನಡ್ಕ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಪೆರ್ನಾಜೆ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಮುಗೇರ್ ಬೈಲಲ್ಲಿ ಸೇರಿತು.

ಸೇರಿತು ಮೀನು ಸೇರಿತು ಕನಕಮಜಲು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಜಾಲ್ಸೂರು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಅಡ್ಕಾರ್ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಬೈತಡ್ಕ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಪೈಚಾರ್ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಸುಳ್ಯ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಸೋಣಂಗೇರಿ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಬೇಂಗಮಲೆ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಐವರ್ನಾಡು ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ದರ್ಖಾಸ್ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಬೆಳ್ಳಾರೆ ಬೈಲಲ್ಲಿ ಸೇರಿತು.
ಸೇರಿತು ಮೀನು ಸೇರಿತು ಪನ್ನೆ ಬೈಲಲ್ಲಿ ಸೇರಿತು.

3. ಅಮೃತ ಸೋಮೇಶ್ವರರು ದಾಖಲಿಸಿದ ನುಡಿಗಟ್ಟುಗಳು:

ಮಿತ್ತ ಮಿಲ್ಲೋಕ (ಮೇಲು ಲೋಕ) ಉದ್ಯ ಬೆನ್ಪುನಿ (ಸೃಷ್ಟಿಸು), ಸೊಲ್ಮೆಸಂದಾಯ (ಕೃತಜ್ಞತೆ ಸಲ್ಲಿಸುವುದು) ನಿಜರಂಗ ಬೆನ್ಪುನಿ (ನಿಜರೂಪ ತೋರಿಸುವುದು) ಏಳದೆ ಯಮಗುಂಡ (ರಹಸ್ಯ ಕೋಣೆ) ಕೂಡುಕುಟುಮ (ಕೂಡು ಕುಟುಂಬ) ವಣಸ್ ಬಲ್ಮಣ (ಗಮ್ಮತ್ತಿನ ಊಟ) ದುತ್ತಾಯಿತ (ಉಡುಗೆ ಶೃಂಗಾರ) ಪಣವು ಪದ್ವೈ (ಹಣ ಆಭರಣ), ಪಾತಾಳಂದ ಪನಿನೀರ್ (ಆಳದ ಬಾವಿಯ ನೀರು) ಇರಿಯಪೆರಿಯೆರೆ ಕಾಲ (ಹಿರಿಯರ ಕಾಲ) ಮೋನೆದ ಮುತ್ತು ಬೆಗರ್ (ಮುಖದ ಹನಿ ಬೆವರು) ಒಂಜಿ ಕಾಯಿಪು ಒಂಜಿ ಕೊಡಪು (ಒಮ್ಮೆ ಕಾಯಿಸಿ ಬಡಿಯುವುದು) ಸಿಂತೆಡ್ ಲಂತಾರ ಪೋಪಿನಿ (ಚಿಂತಮಗ್ನನಾಗು) ಕಡೆಕಣ್ಣ್‌ಡ್ ಕೊಡಿದುಕ್ಕ (ಕಣ್ಣೀರಿಳಿಸು) ಏಳ್‌ಗಿಂಡೆ ಕೋಪ (ಕೋಪಾವೇಷ) ಅಯ್ಯೊಯ್ಯೊ ಪಾಪೊನ ಉಳೊ ಉಳೊ ದೋಸೋನ (ಅಯ್ಯೊಯ್ಯೊ ಪಾಪವೇ ಹಾಹಾದೋಷವೇ) ಮೋಕೆ ಮೋವಂದ ಮಗಳ್ (ಮುದ್ದಿನ ಮಗಳ್) ಕಾಲ್ಯ ಕಡೆಸ್‌ಂಡ ವೇಳ್ಯ ಪೋಪುಂಡು (ಕಾಲ ತಡವಾದರೆ ವೇಳೆ ಹೋಗುತ್ತದೆ). ನಿದ್ರೆ ನಿಮನೋಡಾತೆರ್ (ಸುಖ ನಿದ್ರೆಯಲ್ಲಿದ್ದಾರೆ) ಇನಮೊಕೆ (ಪ್ರಣಯ) ಉಂಡಿ ಉಣುಪುಡು ತುತ್ತುದಿ ಕುಂಟುಡು ಬರೊಡು (ಉಂಡ ಊಟದಲ್ಲಿ ಉಟ್ಟ ಬಟ್ಟೆಯಲ್ಲಿ ಬರಬೇಕು) ಸಿರಿಮೋನಡ್ ಕಲಿ ಪುಟ್ಟುದುಂಡು (ಸಿರಿ ಮುಖದಲ್ಲಿ ಕಪ್ಪುಕಲೆ ಹುಟ್ಟಿದೆ ಗಡ್ಡ ಮೀಸೆ ಬೆಳೆದಿದೆ) ಉದಿಪುಗು ಸೂರ್ಯೆ ಕಂತ್‌ಗ್ ಚಂದ್ರೆ (ಉದಯಕ್ಕೆ ಸೂರ್ಯ ಅಸ್ಥಮಾನಕ್ಕೆ ಚಂದ್ರ) ಮುಕ್ಕೋಲು ಮೂಜಿ ಸರ್ತಿ ಮುರ್ಕುಳ (ಮೂರು ಸರ್ತಿ ಮುಳುಗುವುದು) ತರೆಕೊಡಿ ಮಾಸ್‌ಂದ್‌ಂಡ್ ಮಿರೆ ಕೊಡಿ ದಂಗ್‌ದ್‌ಂಡ್ (ತಲೆಕೂದಲ ತುದಿ ಮಾಸಿದೆ, ಮೊಲೆ ತುದಿ ಬಾಗಿದೆ). ಕಡೆಮೀಸೆ ಕತ್ತೆರಿಯೆ ಕೊಡಿ ಮೀಸೆ ಮುತ್ತೆರಿಯೆ (ಕಡೆ ಮೀಸೆ ಕತ್ತರಿಸಿದ ತುದಿ ಮೀಸೆ ಕಿರಿದು ಗೊಳಿಸಿದ) ಕಾಳೂರ ಕರಿಯ ಪಟ್ಟೆ ಬೋಳೂರ ಬೊಳೆಯ ಪಟ್ಟೆ ತರ್ಪುಡಾಯೆರ್ (ಕಾಳೂರ ಕರಿಯ ಪಟ್ಟೆ ತರಿಸಿದರು. ಬೋಳೂರ ಬಿಳಿಯ ಪಟ್ಟೆ ತರಿಸಿದರು) ನರ್ಲ್‌ಂಡ್ ಬಿರು ನಾಲರೆ ಲೋಕೊಗು ಕೇನ್‌ಂಡ್ (ಬಿಲ್ಲು ಘರ್ಜಿಸಿತು ನಾಲ್ಕುವರೆ ಲೋಕಕೆ ಕೇಳಿಸಿತು) ಅಳೆ ಕೂಟುದು ಐನೂದು ಬಗೆ ಪುಳಿ ಕೂಟುದು ಮುನ್ನೂರು ಬಗೆ ತಾರಯಿ ಕೂಟುದು ಸಾರೊ ಬಗೆ (ಮಜ್ಜಿಗೆ ಸೇರಿಸಿ ಐನೂರು ಬಗೆ ಹುಳಿ ಸೇರಿಸಿ ಮುನ್ನೂರು ಬಗೆ ತೆಂಗಿನಕಾಯಿ ಸೇರಿಸಿ ಸಾವಿರ ಬಗೆ) ದಿಕ್ಕ್ ತೋಜಂದೆ ದೇಸಾಂತ್ರ ಪೋಯೆರೆ (ದಿಕ್ಕು ತೋಚದೆ ದೇಶಾಂತರ ಹೋದರು) ತೂಯಿನನ್ ತೂಯೆಂದ್ ಪನಡ ಕೆಂಡಿನನ್ ಕೇಂಡೆಂದ್ ಪನಡ (ನೋಡಿದ್ದನ್ನು ನೋಡಿದೆ ಎನ್ನದಿರು ಕೇಳಿದ್ದನ್ನು ಕೇಳಿದೆ ಎನ್ನದಿರು) ಬಾಳುನಾಯಗ್ ಬಡಕ್ಕಾಯಿ ರಾಜ್ಯ (ಬಾಳುವವನಿಗೆ ಬಡಗು ರಾಜ್ಯ) ಪನಸಂದ ಕೋಡಿಡ್ ಮಸಣಂದ ಕಾಟ ಒಯಿಪ್ಪೆಯೆರ್ (ಹೊಲದ ಮೂಲೆಯಲ್ಲಿ ಮಸಣದ ಕಾಷ್ಠ ಒಟ್ಟಿದರು) ಮೈಲೆ ಮಾತೆರ್ ಮಡಿ ತುತ್ತಿಯೆರ್ (ಮೈಲಿಗೆ ಬಟ್ಟೆ ಕಳಚಿದರು, ಮಡಿಯುಟ್ಟರು) ಕಾಯಬುಡ್ದು ಕೈಲಾಸ ಜೀವೋ ಬಡ್ದು ವೈಕುಂಠ ಸೇರ್ದೆರ್ (ಕಾಯ ಬಿಟ್ಟು ಕೈಲಾಸ ಜೀವಬಿಟ್ಟು ವೈಕುಂಠ ಸೇರಿದರು) ಕೈಲ ಬಚ್ಚಿನಾತ್ ಗುದ್ಯೆರ್ ಕಾರ್ ಬಚ್ಚಿನಾತ್ ತೊರ್ತೆರ್ (ಕೈ ದಣಿಯುವವರೆಗೂ ಗುದ್ದಿದರು, ಕಾಲು ದಣಿಯುವವರೆಗೂ ತುಳಿದರು) ಎರ್ಕಿನ

ನೀರ್‌ನ್ ಸಿರ್ಕವೊಂದ್ ಬತ್ತೆರ್ (ಹೆಚ್ಚಿದ ನೀರನ್ನು ತಗ್ಗಿಸುತ್ತಾ ಬಂದರು) ಕಲೆ ಪಂಡ್‌ದ್ ಕುಲದೂಸಿಯೆರ್ (ಕಳಂಕ ಹೇಳಿ ಕುಲದೂಷಣೆ ಮಾಡಿದರು) ಆಕಾಸೊಗೆ ಬಂಜಿಕೊರ್ತಿಜಿ ಭೂಮಿಗ್ ಬೆರಿ ಕೊರ್ತಿಜಿ (ಆಕಾಶಕ್ಕೆ ಹೊಟ್ಟೆ ಕೊಡಲಿಲ್ಲ ಭೂಮಿಗೆ ಬೆನ್ನು ಕೊಡಲಿಲ್ಲ) ಮಿತ್ತ್ ಸ್ವಾಮಿನ್ ತಿರ್ತ್ ಭೂಮಿನ್ ಎಣ್ಣೊಂಡೆ (ಮೇಲಿನ ಸ್ವಾಮಿಯನ್ನು ಕೆಳಗಿನ ಭೂಮಿಯನ್ನು ಎಣಿಸಿಕೊಂಡ) ಜೋಗ ಬುಡ್ದು ಮಾಯೊಗು ಸಂದ್ಯೆರ್ (ಗೋಚರದಿಂದ ಅಗೋಚರಕ್ಕೆ ಸೇರಿದರು)

4.ಗಾದೆ

1. ಕುದ್ರೆಡ್ಡು ದುಂಬು ಕುಡು'
2. ದಿಕ್ಕೆಲ್ ಕೋರಿ ಒಕ್ಕುಂಡು
3. ಗರ್ಜಿರ (ಕರ್ಜೂರ) ಪರ್‌ಂದ್‌ನಗ ಕಕ್ಕೆಗ್ ಬಾಯಿ ಬೇನ
4. ಪೆರಡೆ ಒಕ್ಕುಣಿ ಕಿನ್ನಿದಡಿಕೆ
5. ಪುಚ್ಚೆ ಇಜ್ಯಂದಿ ಕಳಟ್ ಎಲಿಕುಲೆ ಲಾಗ
6. ಉಲಯಿ ಮುಳ್ಳುದೀದ್ ಪಿದಯಿಡ್ದ್ ಮರ್ದ್ ಪೂಜಿಲೆಕ
7. ನಾಯಿನ್ ನೀರ್‌ಗ್ ನೂಕಿಲೆಕ
8. ಉಜ್ಜೆರ್‌ಡ್ದ್ ನಾರ್‌ದೆಪ್ಪುನಯೆ
9. ಕಾಡ ಬರಿತ ಕಂಡ ಅತ್ತ್ – ತೋಡ ಬರಿತ ಇಲ್ಲ್ ಅತ್ತ್ (ಕಾಡಿನ ಪಕ್ಕದ ಕೃಷಿಗೆ ಮೃಗಗಳ ಹಾವಳಿ ಜಾಸ್ತಿ – ನದಿಯ ದಂಡೆಯ ಮನೆಗಳಿಗೆ ನೆರೆಯ ಹಾವಳಿ ಜಾಸ್ತಿ)
10. ನೀರ್‌ಡ್ ಬರೆಯಿನ ತೋಜಂದ್ – ಪಾದೆಡ್ ಬರೆಯಿನ ಮಾಜಂದ್ (ನೀರಲ್ಲಿ ಬರೆದುದು ಕಾಣಲಾರದು– ಕಲ್ಲುಬಂಡೆಯಲ್ಲಿ ಬರೆದುದು ಮಾಸಿಹೋಗದು. ಅಹಂಕಾರ ಬಿಡದು)
11. ಉಂಡಿನಾಯಗ್ ಬಡವೆಚ್ಚ. ಮೀನಾಯಗ್ ಕುರೆ ಎಚ್ಚ.
12. ಆಳಾದ್ ಬೆನೂಡು, ಅರಸೆ ಆದ್ ಉನೂಡು.
13. ಅಂಡೆದ ಬಾಯಾಂಡಲಾ ಮುಚ್ಚೊಲಿ– ದೊಂಡೆದ ಬಾಯಿ ಮುಚ್ಚುನ ಬಂಜ
14. ಮುಟ್ಟಾಲೆ ದೀಯರೆ ಮನಸಿಜ್ಜಿ – ಮುಂಡಾಸ್ ಕಟ್ಟರೆ ಎತ್ತುಜಿ
15. ಕರಡಿಗ್ ಪೋಡ್ಯಂದಿನಾಯೆ – ಕಂಬೊಳಿಗ್ ಪೊಡಿವೆನಾ?

16. ಪೊಣ್ಣು ದಾಂತಿ ಇಲ್ಲ್ ಇಲ್ಲತ್ತ್ – ಅರಸುದಾಂತಿ ಊರು ಊರತ್ತ್.

17. ಮರ್ಮಲ್ ರಚ್ಚೆಡ್ದ್ ಬುಡಯಲ್ ಮಾಮಿ ಗೂಂಜಿಡ್ದ್ ಬುಡಯಲ್

18. ಪಜೆ ಇತ್ತಿನಾತೆ ಕಾರ್ ನೀರೊಡು

19. ನಾಲಯಿ ಎಡ್ಡೆ ಆಂಡ ನಾಲೂರು ಎಡ್ಡೆ

20. ಏಣೇಲ್ ಸೂಳೆ, ಸುಗ್ಗಿ ಮದಿಮಲ್, ಕೊಳಕೆ ಪೆದ್ಮೆದಿ

21. ಅಡಿ ನೀರ್ದ ಕೆಯಿ ಎಡ್ಡೆ, ಪೊಡಿ ನೇಜಿದ ಬಯಿ ಎಡ್ಡೆ

22.ಬಾರೆಗ್ ಒಂಜೇ ಕೈಲ್, ಎಡ್ಡೆ ತೆರಿನಾಯಗ್ ಒಂಜೇ ನಾಲಯಿ

23.ಮಾರಿ ಪೋಯಿ ಕಾಡ್ ಹಾಳ್

5.ಎದುರ್ಕತೆ (ಒಗಟು)

1. ಕತ್ತಿದಾಂತೆ ಕಾಡ್ ಕಡ್ತ್ತೆ (ಕತ್ತಿ ಇಲ್ಲದೆ ಕಾಡು ಕಡಿದಿದ್ದೇನೆ – ವೀಳ್ಯದೆಲೆ ಕೀಳುವುದು ಬಚ್ಚಿರೆ ಮುದ್ದುನೆ)
2. ಆಕಾಸೊಡು ಕತ್ತಿ ಅಕ್ಕ್‌ಡ್ದೆ (ಆಕಾಸದಲ್ಲಿ ಕತ್ತಿ ತೂಗಿದ್ದೇನೆ – ಪುನ್ಕದಪುಳಿ, ಹುಣಸೆ ಹುಳಿ)
3. ಸಾರೊ ಜೋಕ್ಲೆಗ್ ಒಂಜೇ ಒಕ್ಕನೂಲು (ಸಾವಿರ ಮಕ್ಕಳಿಗೆ ಒಂದೇ ಸೊಂಟದ ನೂಲು – ಮೈಪುಸೂಡಿ, ಹಿಡಿಸೂಡಿ)
4. ಕಿನ್ನಿ ಕಿನ್ನಿ ಜೋಕ್ಲೆಗ್ ಕಿನ್ನಿ ಮುಟ್ಟಾಲೆ – ಸಣ್ಣ ಸಣ್ಣ ಮಕ್ಕಳಿಗೆ ಸಣ್ಣ ಸಣ್ಣ ಟೊಪ್ಪಿ – ಉಗುರು
5. ಪೊರ್ಲುದಕ್ಕ ಮುಳ್ಳುಡ್ ತಿಕ್ಕ್‌ದಲ್ (ಚಂದದಕ್ಕ ಮುಳ್ಳಲ್ಲಿ ಸಿಕ್ಕಿದ್ದಾಳೆ – ಕೇದಗೆ)
6. ತೂಯರೆ ಚೆಂಡ್ ಕುಟ್ಟರೆ ಮಲ್ಲೆ, ದೆರ್ಪರೆ ದಿನ್ನೊ (ಕಾಣಲು ಚೆಂಡು, ಕುಟ್ಟಲು ದೊಡ್ಡದು, ಎತ್ತಲು ಭಾರ – ಅಕ್ಕಿಮುಡಿ)
7. ಅಪ್ಪೆ ಮಗಳೆ ಕಾರ್ಬಾರ್‌ಡ್ ಬತ್ತಿನಕಲು ಪೊಡಿ ಪೊಡಿ (ತಾಯಿ ಮಗಳ ಕಾರುಭಾರಿನಲಿ ಬಂದವರೆಲ್ಲ ಹುಡಿ ಹುಡಿ – ಕಡೆಯುವ ಕಲ್ಲು) ಅಡ್ಡ ಕೊಯಿಂಡ ಚಕ್ರ ನೀಟ ಕೊಯಿಂಡ ಶಂಕೊ, ಬುಡ್ಪಂಡ ಪತ್ತಿರ್ವೊ ಮೂಸ್ಂಡ ವಾಸನೆ (ಅಡ್ಡ ಕೊಯಿದರೆ ಚಕ್ರ, ನೀಟ ಕೊಯಿದರೆ ಶಂಖ ಬಿಡಿಸಿದರೆ ಹತ್ತಿಪ್ಪತ್ತು ಮೂಸಿದರೆ ವಾಸನೆ – ನೀರುಳ್ಳಿ)
8. ಕಪ್ಪು ಮುಂಡಾಸ್‌ದ ಬೊಲಿಯೆ ತರೆಟ್ ಬಲಿತೆಂಡ ಮರಣ (ಕಪ್ಪು ಮುಂಡಾಸಿನ ಬೊಳಿಯ ತಲೆಯಲ್ಲೋಡಿದರೆ ಮರಣ – ಬೆಂಕಿಕಡ್ಡಿ (ಸೂತಕಡ್ಡಿ)
9. ಕೈಯುಂಡು ಕಾರಿಜ್ಜಿ ಬಂಜಿಂಡು ತರೆ ಇಜ್ಜಿ ಏರೇರೆ ಮೈಟೊ ಐತಾವೊಂದು

ಓಡೋಡೆಗೋ ಪೋಪೆ (ಕೈಯುಂಟು ಕಾಲಿಲ್ಲ ಹೊಟ್ಟೆ ಇದೆ ತಲೆ ಇಲ್ಲ, ಯಾರ್ಯ್ಯಾರ ಮೈಯಲ್ಲೋ ಆಲಂಕಾರವಾಗಿಕೊಂಡು, ಎಲ್ಲೆಲ್ಲೋ ಹೋಗುತ್ತಾನೆ) ಅಂಗಿ

10. ಅಕ್ಕಗ್ ಆಜಿ ಕಣ್ಣ್ ಮುಕ್ಕಗ್ ಮೂಜಿಕಣ್ಣ್ ತೋಟೊದಜ್ಜಗ್ ಒಂಜೇ ಕಣ್ಣ್ (ಅಕ್ಕನಿಗೆ ಆರು ಕಣ್ಣು ಮುಕ್ಕನಿಗೆ ಮೂರು ಕಣ್ಣು ತೋಟದಜ್ಜನಿಗೆ ಒಂದೇ ಕಣ್ಣು – ಕೊಳಲು, ತೆಂಗಿನಕಾಯಿ, ಅಡಿಕೆ (ಪುರಾಲ್, ತಾರಾಯಿ, ಬಜ್ಜೆಯಿ)

11. ನಾಲ್ ಕಾರ್ ಮುರ್ಗತ್ತ್ ರಡ್ಡ್ ಕೈ ನರಮನಿ ಅತ್ತ್
ಬೆರಿ ಉಂಡು ತರೆ ಇಜ್ಜಿ ಪೀಂಕನ್ ಉಂಡು ಬಂಜಿ ಇಜ್ಜಿ
(ನಾಲ್ಕು ಕಾಲು ಮೃಗವಲ್ಲ, ಎರಡು ಕೈ ಮನುಷ್ಯನಲ್ಲ, ಬೆನ್ನು ಇದೆ ತಲೆ ಇಲ್ಲ, ಕುಂಡೆ ಇದೆ ಹೊಟ್ಟೆ ಇಲ್ಲ) ಕುರ್ಚಿ(ಕುರ್ಸು)

12. ಸುಂಯಿಕೊಂದು ಬರ್ಪೆ ಸರ್ಪೆ ಅತ್ತ್
ಸಾದಿದಡ್ಡ ಉಂತ್ಂಡ ಕರ್ಪೆ ರಕ್ಕಸೆ ಅತ್ತ್
ತರ್ಕೊಂಡ ಜಕ್ಕೆಲ್ಡ್ ಕುಲ್ಲವೆ ಅಮ್ಮೆ ಅತ್ತ್
(ಸುಂಯಿಗುಟ್ಟುತ್ತಾ ಬರುತ್ತಾನೆ ಸರ್ಪವಲ್ಲ, ದಾರಿಗಡ್ಡ ನಿಂತರೆ ಕೊಲ್ಲುತ್ತಾನೆ ರಕ್ಕಸನಲ್ಲ, ಅಪ್ಪಿಕೊಂಡರೆ ಮಡಿಲಿಗೆತ್ತಿಕೊಳ್ಳುತ್ತಾನೆ ಅಪ್ಪನಲ್ಲ) – ರೈಲು

13. ಕಂಟೆಲ್ಡ್ ಕಪ್ಪುಂಡು ಈಸ್ವರ ದೇವೆರತ್ತ್, ನೆತ್ತಿಡ್ ಜುಟ್ಟುಂಡು ಪೂಜೆದ ಬಟ್ರ್‌ತ್ತ್,
ಮೈಯಿನಿಲಿಕೆ ಕಣ್ಣ್ಂಡು ದೇವೆಂದ್ರೆ ಅತ್ತ್ ಬೆರಿಟ್ ಅಣಿ ಉಂಡು ರಾಜನ್ ದೈವೊ ಅತ್ತ್
ನಲಿಕೆಡ್ ನಟರಾಜನ್ ಗೆಂದುವ ಉಂದು ಎರ್‌ಪನ್ಲ
(ಕಂಠದಲ್ಲಿ ಕಪ್ಪುಂಡು ಈಶ್ವರನಲ್ಲ, ನೆತ್ತಿಯಲ್ಲಿ ಜುಟ್ಟಿದೆ ಪೂಜೆ ಭಟ್ಟ ಅಲ್ಲ, ಶರೀರ ತುಂಬಾ ಕಣ್ಣುಗಳಿವೆ ದೇವೇಂದ್ರನಲ್ಲ, ಬೆನ್ನಲ್ಲಿ ಅಣಿ ಇದೆ ರಾಜನ್ ದೈವವಲ್ಲ, ನೃತ್ಯದಲ್ಲಿ ನಟರಾಜನನ್ನು ಗೆಲ್ಲುವ ಇವನಾರು ಹೇಳಿ) ನವಿಲು (ಮಯಿರ್)

14. ಬಾಲೆಗ್ ಖಾರೊದ ನೀರ್, ಜವ್ವನಗ್ ಉಪ್ಪಿ ನೀರ್, ಪರಬಗ್ ಬೆಲ್ಲ ನೀರ್ (ಮಗುವಿಗೆ ಖಾರದ ನೀರು, ಯುವಕನಿಗೆ ಉಪ್ಪು ನೀರು, ಮುದುಕನಿಗೆ ಬೆಲ್ಲ ನೀರು) ಮಾವಿನಕಾಯಿ (ಕುಕ್ಕು)

15. ಅಕ್ಕ ಅಕ್ಕ ದಯಿ ತೂಲ ದಯಿತ ಮಿತ್ತ್ ಫಲ ತೂಲ, ಫಲೊತ ಮಿತ್ತ್ ದಯಿ ತೂಲ (ಅಕ್ಕ ಅಕ್ಕ ಗಿಡ ನೋಡು ಗಿಡದ ಮೇಲೆ ಫಲ ನೋಡು ಫಲದ ಮೇಲೆ ಗಿಡ ನೋಡು) ಅನನಾಸು (ಪರೆಂಗಿ ಪಿಲಕ್ಕಯಿ)

6.ಜನಪದ ಕತೆಗಳ ವಿಧಗಳು

7.2.1 A ಪೌರಾಣಿಕ ಆಶಯಗಳು (Mythological Motifi)
7.2.2 B ಪ್ರಾಣಿಗಳು (Animales)

7.2.3 C ನಿಷಿದ್ಧ (Taboo)

7.2.4 D ಮಾಂತ್ರಿಕತೆ (Magic)

7.2.5 E ಮರಣ (The Dead)

7.2.6 F ಅದ್ಭುತಗಳು (Marveles)

7.2.7 G ರಕ್ಕಸರು (Ogres)

7.2.8 H ಪರೀಕ್ಷೆಗಳು (Tests)

7.2.9 J ಬುದ್ಧಿವಂತರು ಮತ್ತು ಮೂರ್ಖರು (The wise and foolish)

7.2.10 K ಮೋಸಗಳು (Decepetions)

7.2.11 L ವ್ಯತಿರಿಕ್ತವಾದ ಅದೃಷ್ಟ (Reversal of fortune)

7.2.12 M ಭವಿಷ್ಯ ನಿರ್ಧರಿಸುವುದು (Ordaining the future)

7.2.13 N ಆಕಸ್ಮಿಕ ಮತ್ತು ಅದೃಷ್ಟ (Chance and fete)

7.2.14 P ಸಮಾಜ (Society)

7.2.15 Q ಬಹುಮಾನಗಳು ಮತ್ತು ಶಿಕ್ಷೆ (Rewards and Fanishment)

7.2.16 R ಬಂಧಿಗಳು ಮತ್ತು ನಿರಾಶ್ರಿತರು (Ceaptives and fugitives)

7.2.17 S ಅಸಾಧ್ಯ ಕ್ರೌರ್ಯ (Unnatural cruality)

7.2.18 T ಲೈಂಗಿಕತೆ ಮತ್ತು ಕಾಮ (Sex)

7.2.19 U ಜೀವನದ ಸ್ವರೂಪ (Nature of Life)

7.2.20 V ಧರ್ಮ (Religion)

7.2.21 W ಸ್ವಭಾವ ವಿಶೇಷಗಳು (Tracites of character)

7.2.22 X ಹಾಸ್ಯ (Humor)

7.2.23 Z ಇತರ ಆಶಯಗಳು (Miscellancous groups)

7.ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಳು

1. ಕಥನ ಪದ್ಧತಿ
2. ಉಪನ್ಯಾಸ ಪದ್ಧತಿ
3. ಪ್ರಶ್ನೋತ್ತರ ಪದ್ಧತಿ
4. ನಾಟಕಾಭಿನಯ ಪದ್ಧತಿ
5. ಅನುಗಮನ ಪದ್ಧತಿ
6. ನಿಗಮನ ಪದ್ಧತಿ

8.ಆಧುನಿಕ ಶಿಕ್ಷಣ ಪದ್ಧತಿಗಳು

1. ಸಂಶೋಧನಾ ಪದ್ಧತಿ (Heuristic Method)
2. ಆವಿಷ್ಕಾರ/ ಅನ್ವೇಷಣಾ ಪದ್ಧತಿ (Inquiry Approach)

3. ಕ್ರೀಡಾ ಪದ್ಧತಿ (Play Way Method)
4. ಕಿಂಡರ್ ಗಾರ್ಟನ್ ಪದ್ಧತಿ (Kinder Garten Method)
5. ಮಾಂಟೆಸೋರಿ ಪದ್ಧತಿ (Montessori Method)
6. ಪಠ್ಯಪುಸ್ತಕ ಪದ್ಧತಿ (Taxt Book Method)
7. ದೃಕ್– ಶ್ರವಣೋಪಕರಣಗಳ ಪದ್ಧತಿ (Audio – Visual Method)
8. ಡಾಲ್ಟನ್ ಯೋಜನೆ (Dalton Plan)
9. ಪ್ರಯೋಗಾಲಯ ಪದ್ಧತಿ (Laboratory Method)
10. ಸ್ವಯಂ ಬೋಧಿನಿ ಸಾಮಾಗ್ರಿಗಳ ವಿಧಾನ (Self- Instructional Approach)
11. ಕಂಪ್ಯೂಟರ್ ಸಹಾಯಕ ಬೋಧನಾ ಪದ್ಧತಿ (C.A.I)
12. ಪಾತ್ರ ನಿರ್ವಹಣಾ ವಿಧಾನ (Role Playing)
13. ಮನೋವೈಜ್ಞಾನಿಕ ಆಟಗಳ ವಿಧಾನ (Games)

ಕಥನ ಪದ್ಧತಿಯ ಮೂಲಕ ಕಲಿಕೆಯ ಬೆಳವಣಿಗೆ

1. ಒಂದು ಭಾವ ರೂಪದ ಚಟುವಟಿಕೆಯಾಗಿರುವ ಕಥೆ ಹೇಳುವಿಕೆ ಮತ್ತು ಕೇಳುವಿಕೆಯಿಂದ ಸಾಹಿತ್ಯ ಮತ್ತು ಐತಿಹಾಸಿಕ ವಿಷಯಗಳನ್ನು ಮನದಟ್ಟುವಂತೆ ತಿಳಿಸಬಹುದು.
2. ಇಲ್ಲಿ ಮಕ್ಕಳು ವಿಷಯವನ್ನು ನೇರವಾಗಿ ಗ್ರಹಿಸುವುದರಿಂದ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮಧ್ಯೆ ನಿಕಟ ಸಂವಹನ ಮೂಡುತ್ತದೆ.
3. ಆಲಿಸುವ ಕ್ರಿಯೆ ಪ್ರಧಾನವಾಗಿರುವ ಇಲ್ಲಿ ವಿಷಯಗ್ರಹಿಕೆ ಉತ್ತಮವಾಗಿ ಆಗುತ್ತದೆ.
4. ಒಂದು ವಿಷಯದ ಬಗೆಗೆ ಹೆಚ್ಚು ಕಾಲ ಮನಸ್ಸನ್ನು ಕೇಂದ್ರೀಕರಿಸಿ ಕೇಳುವುದರಿಂದ ಮಾನಸಿಕ ಶಿಸ್ತು, ಏಕಾಗ್ರತೆ ಬೆಳೆಯುತ್ತದೆ.
5. ವಿಷಯವನ್ನು ಕಥೆಯ ರೀತಿ ನಿರೂಪಿಸುವ ಶಿಕ್ಷಕರು ಅನೇಕ ಹೊಸ ಪದಗಳು, ವಾಕ್ಯಗಳು, ಹೇಳಿಕೆ, ವಿವರಣೆ ನೀಡುವುದರಿಂದ ಪದಸಂಪತ್ತು ಮತ್ತು ವಾಕ್ಯ ರಚನಾ ಕೌಶಲ ಬೆಳೆಯುತ್ತದೆ.
6. ಕಥೆಯಲ್ಲಿ ಸಂದರ್ಭಗಳನ್ನು ಯಥಾವತ್ತಾಗಿ ಭಾವಪೂರ್ಣವಾಗಿ ವಿವರಿಸುವುದರಿಂದ ಮಕ್ಕಳ ಭಾವನಾಶಕ್ತಿ ಬೆಳೆಯುತ್ತದೆ.
7. ಮಹಾವ್ಯಕ್ತಿಗಳ, ಸಾಹಸಿಗಳ, ರಾಷ್ಟ್ರನಾಯಕರ ವಿಷಯಗಳನ್ನು ಕಥೆಗಳ ಮೂಲಕ ಪರಿಚಯ ಮಾಡಿಕೊಡುವುದರಿಂದ ಮಕ್ಕಳಲ್ಲಿ ಧೈರ್ಯ, ತ್ಯಾಗ, ಸಂಯಮ, ಅರ್ಪಣಾ ಭಾವನೆ, ಸಂಕಲ್ಪ, ಸತ್ಯ, ನಿಷ್ಠೆ, ದೇಶಪ್ರೇಮಗಳಂತಹ ಗುಣಗಳು ಬೆಳೆಯುತ್ತವೆ.
8. ಕಥೆಗಳಲ್ಲಿ ಬರುವ ಸಾಹಸಿಗಳು, ದೇಶಪ್ರೇಮಿಗಳು, ದಾರ್ಶನಿಕರು, ಪ್ರಕೃತಿಯ ವರ್ಣನೆ ಮುಂತಾದವುಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುವ ಮಕ್ಕಳು ರಸಸ್ವಾದನಾ

ಗುಣವನ್ನು ಬೆಳೆಸಿಕೊಳ್ಳುತ್ತಾರೆ.

9. ಕಥೆ ಕೇಳುವುದರಿಂದ ಕಲ್ಪನಾಶಕ್ತಿ, ಆಲೋಚನಾ ಶಕ್ತಿ ಮತ್ತು ಮಾನಸಿಕ ಶಿಸ್ತು ಮೂಡುತ್ತದೆ.
10. ಕಥೆ ಹೇಳುವವರ ಭಾಷೆ, ಧ್ವನಿ ಮತ್ತು ವಿಷಯ ನಿರೂಪಣಾ ಶೈಲಿಗಳನ್ನು ಮಕ್ಕಳು ಅನುಸರಿಸುವುದರಿಂದ ಭಾಷಾಕೌಶಲಗಳು ಕುಡಿಯೊಡೆಯುತ್ತವೆ.
11. ಅಪೂರ್ಣ ಕಥೆಗಳನ್ನು ಪೂರ್ಣಗೊಳಿಸುವುದು, ಕಾಲ್ಪನಿಕವಾಗಿ ಮಕ್ಕಳೇ ಕಥೆ ರಚಿಸಿ ಹೇಳುವುದರಿಂದ ಸೃಜನಶೀಲತೆ, ಉತ್ಪಾದಕ ಶಕ್ತಿ ವಿಕಸಿತವಾಗುತ್ತದೆ.
12. ಕತೆಗಳನ್ನು ಕೇಳುವುದರಿಂದ ಮಕ್ಕಳ ಸುಪ್ತಪ್ರತಿಭೆಗಳು, ರಸಭಾವಗಳು ಸಹಜವಾಗಿ ಹೊರಹೊಮ್ಮುತ್ತದೆ.
13. ಕತೆಗಳನ್ನು ಕೇಳುವುದರಿಂದ ಮಾನಸಿಕ ಹಾಗೂ ಭಾವನಾತ್ಮಕ ವಿಕಾಸ ಸಾಧ್ಯ.
14. ಕಥಾ ಪದ್ಧತಿಯಿಂದ ವಿಷಯ ಸಂಗ್ರಹಣ ಕಲೆ, ವಿಷಯವನ್ನು ಒಂದು ಚೌಕಟ್ಟಿನಲ್ಲಿ ಅಡಕಮಾಡಿ ನಿರೂಪಿಸುವ ಸಾಮರ್ಥ್ಯ, ವಿಷಯಕ್ಕೆ ಅನುಗುಣವಾದ ಸನ್ನಿವೇಶಗಳು, ಸನ್ನಿವೇಶಕ್ಕೆ ತಕ್ಕ ಪಾತ್ರಗಳು, ಪಾತ್ರಗಳಿಗೆ ಸೂಕ್ತ ಸಂಭಾಷಣೆ ಸಂಭಾಷಣೆಗೆ ಒಪ್ಪುವ ಧ್ವನಿ ಸ್ವರಭಾರಗಳನ್ನು ಬಳಸುವ ಕೌಶಲವನ್ನು ಬೆಳೆಸಬಹುದು.
15. ಮಕ್ಕಳೇ ಕತೆಗಳನ್ನು ರಚಿಸಿ ಅಥವಾ ಪಠ್ಯ ಮತ್ತು ಉಪಪಠ್ಯ ಪುಸ್ತಕಗಳಲ್ಲಿರುವ ವಿಷಯಗಳನ್ನು ಕತೆಯ ರೀತಿಯಲ್ಲಿ ಮೌಖಿಕವಾಗಿ ಹೇಳುವ ಅಭ್ಯಾಸಗಳನ್ನು ಮಾಡಿಸುವುದರಿಂದ ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯ, ನಿರೂಪಣಾ ಕಲೆ, ವಿಷಯ ವಿವರಿಸುವ ಜಾಣ್ಮೆ ಬೆಳೆಯುತ್ತದೆ. ಒಟ್ಟಾರೆ ಕಥನ ಪದ್ಧತಿಯು ಅರ್ಥಗ್ರಹಿಕೆ. ಅಭಿವ್ಯಕ್ತಿ ಹಾಗೂ ರಸಭಾವಗಳ ವಿಕಾಸಕ್ಕೆ ಸಹಾಯಕ.

2. ಸಾಂಸ್ಕೃತಿಕ ಪದಕೋಶ

ಆಲಿಸುವಿಕೆ=ಒಂದು ನಿರ್ದಿಷ್ಟ ಉದ್ದೇಶವನ್ನು ಇರಿಸಿಕೊಂಡು ಕೇಳುವ ಪ್ರಕ್ರಿಯೆ

ಉಬಾರ್ ಮೀನು=ಉಬ್ಬರದ ಅವಧಿಯಲ್ಲಿ ಕಾಣಿಸಿಕೊಳ್ಳುವ ಮೀನು

ಉರಲ್=ಉಳುಮೆಯ ಹಾಡು

ಎದುರ್ಕತೆ=ಎದುರುಬದುರಾಗಿ ಕುಳಿತು ಸವಾಲಿನ ಪ್ರಶ್ನೆ ಹಾಕುವುದು,ಒಗಟು

ಕೊಡಿಯಡಿ=ಭಂಡಾರ ಇಡುವ ಸ್ಥಳ

ಡೆನ್ನಾನ=ಪಾಡ್ದನ ಹಾಡುವಾಗ ಅಲ್ಲಲ್ಲಿ ಬಳಸುವ ಆಲಾಪನ

ಬಿನ್ನ=ದೈವಗಳ ಮುಂದೆ ಸಲ್ಲಿಸುವ ನಿವೇದನೆ

ಬರೆಕಲ=ಬತ್ತ ಕುಟ್ಟುವ ಸ್ಥಳ

ಬಾಕಿಮಾರ್=ಬೂಡು ಅಥವಾ ಗುತ್ತು ಮನೆಗಳ ಮುಂಭಾಗದಲ್ಲಿರುವ ವಿಶಾಲವಾದ ಗದ್ದೆ

ಮದಿಪು=ಭೂತ/ದೈವಗಳ ನುಡಿಕಟ್ಟು

3.ಪರಾಮರ್ಶನಾ ಗ್ರಂಥಸೂಚಿ

ಪ್ರೊ.ಅಮೃತ ಸೋಮೇಶ್ವರ 'ತುಳು ಪಾಡ್ದನ ಸಂಪುಟ' 1998

ಅನಸೂಯ ವಿ.ಪರಗಿ 'ಮಾತೃಭಾಷೆ ತತ್ತ್ವ ಮತ್ತು ಬೋಧನಾ ಮಾರ್ಗ'2011

ಡಾ.ಚಿನ್ನಪ್ಪ ಗೌಡ ಕೆ 'ಭೂತಾರಾಧನೆ ಒಂದು ಜಾನಪದೀಯ ಅಧ್ಯಯನ' 1990

ಡಾ.ಚಿನ್ನಪ್ಪ ಗೌಡ. ಕೆ 'ಸೇರಿಗೆ' 2000

ಡಾ.ಎಸ್.ಜಿ ದೇಸಾಯಿ ಮತ್ತು ಜಿ.ಎಸ್.ದೇಸಾಯಿ 'ಪ್ರಾಥಮಿಕ ಶಿಕ್ಷಣ' 1999

ಡಾ.ಗಣೇಶ್ ಅಮೀನ್ ಸಂಕಮಾರ್ 'ತುಳು ಪಾಡ್ದನೊಲು' 2008

ಜಯಂತಿ ಎಸ್.ಬಂಗೇರ 'ಎದುರು ಕತೆಕ್ಕುಲು' 2008

ಡಾ.ಕಮಲಾಕ್ಷ ಕೆ. 'ಕದಿರು ನುಡಿ' 2010

ಎಸ್.ಕೃಷ್ಣಪ್ಪ 'ಶಿಕ್ಷಣದ ತಾತ್ವಿಕ ಮತ್ತು ಸಾಮಾಜಿಕ ಮೂಲಾಧಾರಗಳು' 1999

ಡಾ.ಎಸ್.ಕೇಶವ ಮೂರ್ತಿ 'ಶಿಕ್ಷಣ ಸಿದ್ಧಾಂತ' 1999

ಡಾ.ಎನ್.ಬಿ.ಕೊಂಗವಾಡ 'ಭಾಷೆ ಮತ್ತು ಕನ್ನಡ ಬೋಧನೆ' 2011

ಡಾ. ಮಹಾಬಲೇಶ್ವರ ರಾವ್ 'ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಸವಾಲುಗಳು'1999

ಡಾ.ಎ.ವಿ.ನಾವಡ 'ಒಂದು ಸೊಲ್ಲು ನೂರುಸೊರ' 1999

ಡಾ.ಎ.ವಿ.ನಾವಡ 'ಗಿಡಿಕೆರೆ ರಾಮಕ್ಕ ಮುಗೇರ್ತಿ ಕಟ್ಟಿದ ಸಿರಿ ಪಾಡ್ದನ' 1999

ಡಾ.ಆರ್.ಓ.ಬಳೇಶಘಟ್ಟಿ 'ಭಾಷೆ ಮತ್ತು ಕನ್ನಡ ಭಾಷಾ ಬೋಧನೆ'2004

ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್ 'ತುಳು ಜಾನಪದ ಮತ್ತು ಸಂಸ್ಕೃತಿ' 2014

ಡಾ.ಪಾದೆಕಲ್ಲು ವಿಷ್ಣು ಭಟ್ 'ತುಳು ಛಂದೋವಿನ್ಯಾಸ'2007

ಡಾ.ಪೀಟರ್ ಜೆ ಕ್ಲಾಸ್ (ಅನು: ಎ.ವಿ. ನಾವುಡ, ಸುಭಾಶ್ಚಂದ್ರ) 'ತುಳುವ ದರ್ಶನ'1996

ಪ್ರೊ. ಬಿ. ವಿ. ರಮಣ 'ಕನ್ನಡ ನುಡಿ ಬೋಧನೆ' 1979

ಡಾ. ಸುಂದರ ಕೇನಾಜೆ 'ಬತ್ತದ ಲೋಕ' 2009

ಪ್ರೊ. ಸೂರ್ಯಕಾಂತ ಶೀಲವಂತ 'ಸ್ವತಂತ್ರ ಭಾರತದಲ್ಲಿ ಶಿಕ್ಷಣ' 2003

ಡಾ. ಬಿ. ಎ. ವಿವೇಕ ರೈ 'ತುಳು ಜನಪದ ಸಾಹಿತ್ಯ' 1985

ಡಾ. ವಿಶ್ವನಾಥ ಬದಿಕಾನ 'ತುಳುತ ಕತಾ ಸಂಸ್ಕೃತಿ' 2008

H. L. Marrou 'A History of Education in Antiqutу'1956

Parry Millman 'Studies in the technique or verse making.

Hareware studies in the classical philosopy' 1930

Padma M. Sarangapani 'Constructing School Knowledge' 2003

ಮಾಹಿತಿದಾರರ ವಿವರ

* ಬಾಬು ಅಜಿಲ ಪಜಿಂಕಿಲ ಮನ ಬಾಯಾರು ಕಾಸರಗೊಡು
* ಬಾಬು ಅಜಿಲ ಬಾಳಿಲ ಅಂಚೆ ಸುಳ್ಯ ದ.ಕ
* ಶ್ರೀಮತಿ ಚೆಲುವಮ್ಮ ಡೆಂಬುಗ ಕೆಯ್ಯೂರು ಗ್ರಾಮ ಬೆಳ್ತಂಗಡಿ ದ.ಕ
* ಗಂಗಾಧರ ಬೆಳ್ಳಾರೆ 'ಮನೋವಿಜ್ಞಾನ ಚಿಂತಕ' ಅವನಿ ಗುಂಪೆಕಲ್ಲು ಪುತ್ತೂರು.
* ಡಾ.ಗಣನಾಥ ಎಸ್.ಎನ್. ಶಿಕ್ಷಣತಜ್ಞರು ಕುವೆಂಪುನಗರ ಮೈಸೂರು
* ಗಿರಿಜ ನಲಿಕೆ ಬಾಳಿಲ ಸುಳ್ಯ ದ.ಕ
* ಜಾನಪ್ಪ ಅಜಿಲ ಕೂಜಿಗೋಡು ಮಟಿಜ ಕೋಟೆಬೈಲು ಐನಕಿದು ದ.ಕ
* ಕುಂಞಣ್ಣ ಗೌಡ ಬೊಳ್ಳಾಜೆ ಎಡಮಂಗಲ ಸುಳ್ಯ ದ.ಕ
* ಕಾಂತಪ್ಪ ನಲಿಕೆ ಸವಣೂರು, ಪುತ್ತೂರು ದ.ಕ
* ಕೃಷ್ಣ ಶಾಸ್ತ್ರಿ ಬಾಳಿಲ ಶಿಕ್ಷಣತಜ್ಞರು ಮೂಡಂಬೈಲು ಬಂಟ್ವಾಳ ದ.ಕ
* ಕೊರಪೊಳು ನಾರಾಜೆ, ಜಯನಗರ ಹಳೆಗೇಟು ಸುಳ್ಯ
* ಡಾ.ಕಮಲಾಕ್ಷ.ಕೆ 'ಅಕ್ಷತಾ' ಹಿದಾಯತ್‌ನಗರ.ಅಂಚೆ: ವಿದ್ಯಾನಗರ ಕಾಸರಗೋಡು.
* ಮುದರ ಮುಗೇರ ಪುಣೇರಿ ಮಟಿಜ ಬಾಳುಗೋಡು ಸುಳ್ಯ ದ.ಕ
* ಡಾ.ಮನೋಹರ್ ಎಂ.ಸಿ ಶಿಕ್ಷಣ ಚಿಂತಕರು ಕುವೆಂಪುನಗರ ಮೈಸೂರು
* ನಾರಾಯಣ ನೀರಬಿದರೆ ಅಂಚೆ,ದುಗ್ಗಲಡ್ಕ ಸುಳ್ಯ ದ.ಕ
* ನಾರಾಯಣ ಭಟ್ ಶಿಕ್ಷಣತಜ್ಞರು ರಾಮಕುಂಜ ಪತ್ತೂರು ದ.ಕ
* ಡಾ.ಪಾಲ್ತಾಡಿ ರಾಮಕೃಷ್ಣ ಆಚಾರ್ 'ನಲೆ' ಬೆದ್ರಾಳ ನರಿಮೊಗರು ಅಂಚೆ, ಪುತ್ತೂರು ದ.ಕ
* ಪೂವಕ್ಕ ಪರತಿ ಕಂದ್ರಪಾಡಿ ಗುತ್ತಿಗಾರು ಸುಳ್ಯ ದ.ಕ
* ಸದಾನಂದ ಆರ್. ಶಿಕ್ಷಣ ಚಿಂತಕರು ಕುವೆಂಪುನಗರ ಮೈಸೂರು
* ಶೀನ ಅಜಿಲ ಕಣ್ಣಂಗೋಡು ದೇಲಂಪಾಡಿ ಗ್ರಾಮ ಕಾಸರಗೋಡು
* ಸೌಡ ಸಬರಾಡಿ ಅಂಚೆ ಕೊಕ್ಕಡ ಬೆಳ್ತಂಗಡಿ ದ.ಕ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ತುಳು ಭವನ, ಉರ್ವಸ್ಟೋರ್, ಮಂಗಳೂರು - 6

ಅಧ್ಯಕ್ಷೆರ್

ಎಮ್. ಜಾನಕಿ ಬ್ರಹ್ಮಾವರ

ರಿಜಿಸ್ಟ್ರಾರ್

ಚಂದ್ರಹಾಸ ರೈ. ಬಿ.

ಅರ್ಥಸದಸ್ಯೆರ್

ಡಿ. ಎಮ್. ರವಿ ಕುಮಾರ್

ಅಕಾಡೆಮಿದ ಸದಸ್ಯೆರ್

ಪ್ರೊ. ಡಿ. ವೇದಾವತಿ
ಶ್ರೀ ಡಿ. ಎಂ. ಕುಲಾಲ್
ಶ್ರೀ ಸುಭಾಶ್ಚಂದ್ರ ಪಡಿವಾಳ್
ಶ್ರೀ ದುರ್ಗಾಪ್ರಸಾದ್ ರೈ ಕುಂಬ್ರ
ಶ್ರೀಮತಿ ಜಯಶೀಲ
ಶ್ರೀ ವಸಂತ ಶೆಟ್ಟಿ ಬೆಳ್ಳಾರೆ
ಶ್ರೀ ಕೃಷ್ಣಪ್ಪ ಉಪ್ಪೂರು
ಶ್ರೀ ರಘು ಇಡ್ಕಿದು
ಶ್ರೀ ಮೋಹನ್ ಕೊಪ್ಪಲ ಕದ್ರಿ
ಶ್ರೀಮತಿ ರೂಪಕಲಾ ಆಳ್ವ
ಶ್ರೀ ನವೀನ್ ಡಿ. ಪಡೀಲ್
ಶ್ರೀ ಕೆ. ಟಿ. ವಿಶ್ವನಾಥ
ಡಾ. ದಿವಾ ಕೊಕ್ಕಡ

..... ತುಳುನಾಡಿನಲ್ಲಿ, ತುಳು ಭಾಷೆಯಲ್ಲಿ ಅಪಾರವಾದ ಜನಪದ ಸಾಹಿತ್ಯವಿದೆ. ತುಳು ಸಂಸ್ಕೃತಿ ಮತ್ತು ತುಳು ಭಾಷೆಯ ಶಬ್ದಸಂಪತ್ತಿನ ಕೋಶದಂತಿರುವ ಇವು ಇತ್ತೀಚಿನ ವರ್ಷಗಳಲ್ಲಿ ದೇಶ ವಿದೇಶಗಳ ಜಾನಪದ ವಿದ್ವಾಂಸರನ್ನು ಆಕರ್ಷಿಸುತಿದ್ದು, ತುಳು ಜನಪದ ಸಾಹಿತ್ಯದಲ್ಲಿ ಬಹಳಷ್ಟು ಅಧ್ಯಯನ ನಡೆಯುತ್ತಿದೆ. ಕೆಲವು ಮೌಲಿಕ ಕೃತಿಗಳೂ ಪ್ರಕಟವಾಗಿವೆ. ತುಳು ಜನಪದ ಸಾಹಿತ್ಯ ಶಿಕ್ಷಣದ ಕ್ರಮವು ಆಧುನಿಕ ಶಿಕ್ಷಣ ಕ್ರಮದಲ್ಲೂ ಅಳವಡಲು ಅರ್ಹವಾದುದು.

ಎಮ್. ಜಾನಕಿ ಬ್ರಹ್ಮಾವರ
ಅಧ್ಯಕ್ಷೆರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ